
# ಎಲ್.ಬಿ.ಕೆ. ಆಲ್ದಾಳ

ಮಹಿಪಾಲರೆಡ್ಡಿ ಮುನ್ನೂರು



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

# ಎಲ್.ಬಿ.ಕೆ. ಆಲ್ದಾಳ

## ನಾಟಕಕಾರ ಶ್ರೀ ಎಲ್.ಬಿ.ಕೆ. ಆಲ್ದಾಳರ ಬದುಕು ಬರಹ

ಮಹಿಪಾಲರೆಡ್ಡಿ ಮುನ್ನೂರು

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨
ದೂರವಾಣಿ: ೦೮೦– ೨೨೨೩ ೭೪೮೪

**L.K.B. Aldala :** A Monograph in Kannada by Mr. Mahipal Reddy Munnur, Kalaburagi.

**Published by :** Mr. Siddaraju, Registrar, Karnataka Nataka Academy, Bangalore -2, Ph. 080-2223 7484

| | | |
|---|---|---|
| ಹಕ್ಕುಗಳು | : | ಲೇಖಕರದು |
| **ಮೊದಲ ಮುದ್ರಣ** | : | ೨೦೧೫ |
| ಪ್ರತಿಗಳು | : | ೧,೦೦೦ |
| ಪುಟಗಳು | : | ೮೮ |
| ಬೆಲೆ | : | ರೂ.೬೦/- |

ಪ್ರಕಾಶಕರು:

ಸಿದ್ದರಾಜು, ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ
ಬೆಂಗಳೂರು – ೫೬೦೦೦೨

**ಪ್ರಕಟಣಾ ಸಮಿತಿ ಸದಸ್ಯರು:**

ಕೆ. ಜಗುಚಂದ್ರ

ಉಮೇಶ್ ಸಾಲಿಯಾನ್

ಹಾಲ್ಕುರಿಕೆ ಶಿವಶಂಕರ್

**ಮುಖಪುಟ ವಿನ್ಯಾಸ:** ಕೃಷ್ಣ ರಾಯಚೂರು

**ಮುದ್ರಣ:** ಚಾರುಮತಿ ಪ್ರಕಾಶನ
ಚಾಮರಾಜಪೇಟೆ, ಬೆಂಗಳೂರು–18

# ಅಧ್ಯಕ್ಷರ ಮಾತು

ಹಿರಿಯ ನಾಟಕಕಾರ ಎಲ್.ಬಿ.ಕೆ. ಆಲ್ದಾಳ ಅವರ ಕುರಿತ ವಿಶೇಷ ಕಾರ್ಯಕ್ರಮವೊಂದನ್ನು ಕರ್ನಾಟಕ ನಾಟಕ ಅಕಾಡೆಮಿಯು ಪ್ರಸಕ್ತ ವರ್ಷ ಕಲಬುರಗಿಯಲ್ಲಿ ಹಮ್ಮಿಕೊಂಡಿದೆ. ಆಲ್ದಾಳರ ಸನ್ಮಾನದ ಜೊತೆಗೆ ಅವರು ಬರೆದ ನಾಟಕಗಳು ಹಾಗೂ ರಂಗಭೂಮಿಯ ಅವರ ಕೊಡುಗೆಯನ್ನು ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿದೆ. ಇದೇ ಸಂದರ್ಭದಲ್ಲಿ ಅವರ ಕುರಿತ ಪುಸ್ತಕ ಹೊರತರಲು ನಿರ್ಧರಿಸಲಾಗಿತ್ತು. 'ಎಲ್.ಬಿ.ಕೆ. ಆಲ್ದಾಳ' ಎಂಬ ಈ ಪುಸ್ತಕವನ್ನು 'ರಂಗ ಸಂಪನ್ನರು' ಮಾಲಿಕೆಯಲ್ಲಿ ಈಗ ಸಿದ್ಧಗೊಳಿಸಲಾಗಿದೆ.

'ರಂಗ ಸಂಪನ್ನರು' ಹಾಗೂ 'ಜಿಲ್ಲಾ ರಂಗಮಾಹಿತಿ' ಪುಸ್ತಕ ಮಾಲಿಕೆಗಳ ಸಂಪಾದಕೀಯ ಜವಾಬ್ದಾರಿಯನ್ನು ಶ್ರೀ ಗುಡಿಹಳ್ಳಿ ನಾಗರಾಜ ಅವರಿಗೆ ವಹಿಸಲಾಗಿದೆ. ಆಲ್ದಾಳರ ಕುರಿತು ಅವರು ಬರೆದ ಲೇಖನದ ಆಯ್ದ ಭಾಗವನ್ನು ಈ ಪುಸ್ತಕದ ಬೆನ್ನುಡಿಯಾಗಿ ಬಳಸಿಕೊಳ್ಳಲಾಗಿದೆ.

ಶ್ರೀ ಮಹಿಪಾಲರೆಡ್ಡಿ ಮುನ್ನೂರು ಅವರು ಬರೆದ ಆಲ್ದಾಳದ ಕುರಿತ ಈ ಪುಸ್ತಕವನ್ನು ತ್ವರಿತವಾಗಿ ಮುದ್ರಿಸಲಾಯಿತು. ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ಚಾರುಮತಿ ಪ್ರಕಾಶನದ ಶ್ರೀ ಬಿ.ಎಸ್. ವಿದ್ಯಾರಣ್ಯ ಅವರಿಗೂ ಹಾಗೂ ಸುಂದರ ಮುಖಪುಟ ವಿನ್ಯಾಸ ಮಾಡಿದ ಶ್ರೀ ಕೃಷ್ಣ ರಾಯಚೂರು ಅವರಿಗೂ ಕರ್ನಾಟಕ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

30–12–2015

–ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

## ಎಲ್.ಬಿ. ಶೇಖ (ಮಾಸ್ತರ)

ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

**ಸದಸ್ಯರು:**

| | |
|---|---|
| ರಾಜಪ್ಪ ಕಿರಗಸೂರು | ವಿ.ಎನ್. ಅಕ್ಕಿ |
| ಎನ್.ಕೆ. ರಾಮಕೃಷ್ಣ | ಕಲ್ಪನಾ ನಾಗನಾಥ್ |
| ಎಂ.ಎಸ್.ಗುಣಶೀಲನ್ | ಶ್ರೀಪಾದ ಭಟ್ |
| ಎ.ವರಲಕ್ಷ್ಮಿ | ಪಿ. ತಿಪ್ಪೇಸ್ವಾಮಿ |
| ಗುಡಿಹಳ್ಳಿ ನಾಗರಾಜ | ಎಲ್.ಎಚ್. ರಂಗನಾಥಪ್ಪ |
| ಬಿ.ಎಂ.ರಾಮಚಂದ್ರ | ಹಾಲ್ಕುರಿಕೆ ಶಿವಶಂಕರ್ |
| ಉಮೇಶ್ ಸಾಲಿಯಾನ್ | ಕೆ.ಜಗುಚಂದ್ರ |
| ಮುದ್ದಣ್ಣ ರಟ್ಟೆಹಳ್ಳಿ | ಅನ್ನಪೂರ್ಣ ಸಾಗರ |
| ಎಚ್. ಷಡಾಕ್ಷರಪ್ಪ ಹೊಸಮನಿ | ಎಸ್.ಕೆ. ಕೊನೆಸಾಗರ |

**ರಿಜಿಸ್ಟ್ರಾರ್:** ಸಿದ್ಧರಾಜು

**ಕಚೇರಿ ಸಿಬ್ಬಂದಿ:** ಕೆ. ರೇವಣ್ಣ, ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ

# ಮುಖಾಮುಖಿ......

ಹೈದ್ರಾಬಾದ್ ಕರ್ನಾಟಕ ಪ್ರದೇಶದಿಂದ ರಂಗಭೂಮಿ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಸರಕಾರ ನೀಡುವ ಗುಬ್ಬಿ ವೀರಣ್ಣ ರಂಗಪ್ರಶಸ್ತಿಯನ್ನು ಪಡೆದ ಏಕೈಕ ನಾಟಕಕಾರ ಎಂದರೆ ಶ್ರೀ ಎಲ್.ಬಿ.ಕೆ. ಆಲ್ದಾಳ ಅವರು.

ಕನ್ನಡದ ಮೇರುನಟ ಡಾ.ರಾಜಕುಮಾರ ಅವರಂತಹವರು ಪಡೆದ ಈ ಪ್ರಶಸ್ತಿಯನ್ನು ಆಲ್ದಾಳ ಅವರಿಗೆ ಲಭಿಸಿದ್ದು ಹೈದ್ರಾಬಾದ್ ಕರ್ನಾಟಕಕ್ಕೆ ಸಿಕ್ಕ ಬಹುದೊಡ್ಡ ಕೊಡುಗೆ. ಆ ಮೂಲಕ ಈ ಭಾಗದ ರಂಗಭೂಮಿ ಕ್ಷೇತ್ರಕ್ಕೆ ನೀಡಿದ ಆದ್ಯತೆ ನಿಜಕ್ಕೂ ಶ್ಲಾಘನೀಯ. ಇಂತಹ ಪ್ರತಿಭಾನ್ವಿತ ಕವಿ, ನಾಟಕಕಾರ ಶ್ರೀ ಎಲ್.ಬಿ.ಕೆ. ಆಲ್ದಾಳ ಅವರ ಕುರಿತು ಪುಸ್ತಕ ರೂಪದಲ್ಲಿ ಹೊರತರುವ ಪ್ರಯತ್ನಕ್ಕೆ ಕರ್ನಾಟಕ ನಾಟಕ ಅಕಾಡೆಮಿಗೆ ಅಭಿನಂದಿಸಲೇಬೇಕು.

ಲಾಲ್ ಮಹ್ಮದ ಬಂದೇನವಾಜ್ ಖಲೀಫ್ ಆಲ್ದಾಳ.... ಹೀಗೆಂದರೆ ಯಾರೆಂದರೆ ಯಾರಿಗೂ ಗೊತ್ತಾಗುವುದಿಲ್ಲ. ಯಾರೋ ಇರಬಹುದು ಎಂದು ಸುಮ್ಮನಾಗುತ್ತಾರೆ. ಆದರೆ, ಎಲ್.ಬಿ.ಕೆ. ಆಲ್ದಾಳ ಎಂದ ಮರುಕ್ಷಣವೇ, ಅವರ ಬಗ್ಗೆ ಮುಂಖಾಮುಂಖಿವಾಗಿ ಹೇಳುತ್ತಾರೆ. ಅವರ ಕೃತಿಗಳ ಬಗ್ಗೆ ಮಾತನಾಡುತ್ತಾರೆ. ನಾಟಕಗಳ ನಿರ್ದೇಶನ ಕುರಿತು ಮಾತನಾಡುತ್ತಾರೆ. ನಾಟಕಗಳಲ್ಲಿ ಪಾತ್ರ ಮಾಡಿದ್ದರ ಬಗ್ಗೆ ಹೇಳುತ್ತಾರೆ. ಸಂತ-ಮಹಾಂತರ ಬಗ್ಗೆ, ಶರಣರ ಬಗ್ಗೆ ಬರೆದ ನಾಟಕಗಳ ಕುರಿತು ಮಾತನಾಡುತ್ತಾರೆ. ಅವರು ಬರೆದ ವಚನಗಳನ್ನು ಕಂಠಪಾಠ ಮಾಡಿದ್ದನ್ನು ಹೇಳುತ್ತಾರೆ. ಪ್ರಾಥಮಿಕ ಶಾಲೆಯನ್ನೂ ಬರೋಬ್ಬರಿ ಓದದಿದ್ದರೂ ಒಶಿಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಶ್ರೇಯಸ್ಸು ಎಲ್.ಬಿ.ಕೆ.ಆಲ್ದಾಳ ಅವರಿಗೆ ಸಲ್ಲುತ್ತದೆ. ಹೀಗಾಗಿಯೇ ಎಲ್.ಬಿ.ಕೆ. ಆಲ್ದಾಳ ಎಂದರೆ ಮನೆ-ಮನೆಗೆ ಮತ್ತು ಮನ-ಮನಗಳಿಗೆ ಆಪ್ತವಾದ ಕವಿ ಆಗಿದ್ದಾರೆ. ಹೌದು. ಆಲ್ದಾಳರ ವ್ಯಕ್ತಿತ್ವನ್ನು ಸಮರ್ಥವಾಗಿ ಹಿಡಿದಿಡುವ ಕೆಲಸ ಆಗಬೇಕಿದೆ. ಆಲ್ದಾಳರ ಬದುಕಿನಲ್ಲಿ ಆಗಿರುವ ಅನೇಕ ಆಘಾತಗಳು, ಅವಮಾನಗಳು ಮತ್ತು ಅಸಹನೀಯ ಜೀವನ.. ಒಂದೇ ಎರಡೇ.. ಹೇಳುತ್ತಾ ಹೊರಟರೆ ಅದೇ ದೀರ್ಘವಾಗುತ್ತದೆ.

ನೆನಪಿರಲಿ. ಅವರೊಬ್ಬ ಇಸ್ಲಾಂ ಧರ್ಮದಲ್ಲಿ ಜನಿಸಿದ್ದಾರೆ. ಆದರೆ, ಬೆಳಗಿನ ಸ್ನಾನಾದಿ ಕರ್ಮಗಳೆಲ್ಲ ಮುಗಿದ ನಂತರ ಅವರ ಬಾಯಿಯಲ್ಲಿ ಹೊರಡುವುದು ಗಾಯತ್ರಿ ಮಂತ್ರ. ಕುಳಿತುಕೊಳ್ಳುವಾಗ, ಏಳುವಾಗ.. ಮಲಗುವಾಗ..ಊಟ ಮಾಡುವ ಮೊದಲು ಮೊದಲ ತುತ್ತು ಬಾಯಿಗೆ ಇಟ್ಟುಕೊಳ್ಳುವಾಗ ಬಸವ ಬಸವ ಎನ್ನುತ್ತದೆ ಅವರ ಮನಸ್ಸು.

ವಿನಯವಂತ, ನಡೆ-ನುಡಿ ಒಂದೇ, ಸದಾ ನಗುಮುಖಿ, ಸಹನೆ ಅಪಾರ, ಎಲ್ಲರೂ ನನ್ನವರು ಎನ್ನುವ ಅವರ ಮನಸ್ಸು, ಯಾವಾಗಲೂ ಆಧ್ಯಾತ್ಮದ ಕಡೆಗೆ ಒಲವು, ಶರಣರ ಬದುಕನ್ನು ಅಕ್ಷರಶಃ ಅಳವಡಿಸಿಕೊಂಡ ಶರಣಜೀವಿ. ಲಾಲ ಮಹ್ಮದ ಬಂದೇನವಾಜ ಖಲೀಫ್ ಅಲಿಯಾಸ್ ಎಲ್.ಬಿ.ಕೆ.ಆಲ್ದಾಳ ಅವರು ಹೀಗೆ ಚಾರ್

ಮಿನಾರಿನಂತೆ ಬೆಳೆದಿದ್ದಾರೆ ಎಂದರೆ, ಗಂಭೀರ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿದ್ದಾರೆ ಎಂದರೆ, ಅವರ ತಾಯಿ ಶ್ರೀಮತಿ ಹುಸೇನಬಿ ಮತ್ತು ಅವರ ಪತ್ನಿ ಶ್ರೀಮತಿ ಅಮೀನಾಬಿ ಅವರದು ಸಿಂಹಪಾಲು. ಎಲ್.ಬಿ.ಕೆ. ಆಲ್ದಾಳರು ಜನ್ಮಭೂಮಿ ಮುಂಬಯಿ ಕರ್ನಾಟಕ ಪ್ರದೇಶದ ಆಗಿನ ವಿಜಾಪುರ (ಈಗ ವಿಜಯಪುರ) ಜಿಲ್ಲೆಯಾದರೂ ಕರ್ಮಭೂಮಿ ಹೈದ್ರಾಬಾದ ಕರ್ನಾಟಕ. ಅದರಲ್ಲೂ ಕಲಬುರ್ಗಿ ಜಿಲ್ಲೆ. ಸಂತರ–ಶರಣರ ಬೀಡಾದ ಸಗರನಾಡಿನ ಜೇವರ್ಗಿ ತಾಲೂಕಿನ ಮಳ್ಳಿ ಅವರ ಕಾರ್ಯಕ್ಷೇತ್ರ, ಹೈಸ್ಕೂಲು ಶಾಲೆಯ ಕಟ್ಟೆ ಏರದಿದ್ದರೂ ಸಾಧನೆ ಮಾತ್ರ ಅಪ್ರತಿಮ.

ಪತಿಭಕ್ತಿ ಎನ್ನುವ ಮೊದಲ ನಾಟಕ ಬರೆದು ಹವ್ಯಾಸಿ ರಂಗಭೂಮಿ ಶ್ರೀಮಂತಗೊಳಿಸಲು ಪ್ರಾರಂಭ ಮಾಡಿದರು. ಮುಂದೆ ಶ್ರೀ ವಿಶ್ವಾರಾಧ್ಯ ಮಹಾತ್ಮೆ ಸೇರಿದಂತೆ ಅನೇಕ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳ ಜೊತೆಗೆ ವಚನ, ಕಾವ್ಯ, ಚರಿತ್ರೆ, ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ನೀಡಿ ಸಾಹಿತ್ಯ ಕ್ಷೇತ್ರವನ್ನೂ ಶ್ರೀಮಂತಗೊಳಿಸುವಲ್ಲಿ ತಮ್ಮ ಕಾಣಿಕೆಯನ್ನಿತ್ತಿದ್ದಾರೆ.

ಇಂತಹ ಸಾಧಕ ಆಲ್ದಾಳರ ಕುರಿತು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀ ಎಲ್.ಬಿ.ಶೇಖ್ (ಮಾಸ್ತರ) ಅವರು ಕೃತಿಯನ್ನು ಬರೆದುಕೊಡುವಂತೆ ಹೇಳಿದಾಗ, ಮನಸ್ಸು ನಿಜಕ್ಕೂ ಆನಂದಗೊಂಡಿತು. ತಕ್ಷಣವೇ ಕಾರ್ಯಪ್ರವೃತ್ತನಾದೆ. ಆದರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಇರುವುದರಿಂದ ಅನೇಕ ಚಟುವಟಿಕೆಗಳಲ್ಲಿ ನಿರತನಾದ್ದರಿಂದ ಸ್ವಲ್ಪ ವಿಳಂಬವಾಯಿತು. ಆದರೂ ಒಂದು ಒಳ್ಳೆಯ ಕೃತಿ ಬರೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಕಾಡೆಮಿಯ ಅಧ್ಯಕ್ಷರಿಗೆ, ರಿಜಿಸ್ಟ್ರಾರ್ ಅವರಿಗೆ, ಮತ್ತು ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಮತ್ತು ಆತ್ಮೀಯರಾದ ಶ್ರೀ ಗುಡಿಹಳ್ಳಿ ನಾಗರಾಜ್ ಮತ್ತು ಶ್ರೀ ಎಸ್.ಕೆ.ಕೊನೆಸಾಗರ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಹಿರಿಯ ಪತ್ರಕರ್ತ ಶ್ರೀ ಜಿ.ಎನ್.ಮೋಹನ್, ಕತೆಗಾರ ಶ್ರೀ ರಾಜಶೇಖರ ಹತಗುಂದಿ, ಸಾಹಿತ್ಯ ಮತ್ತು ಪತ್ರಿಕೋದ್ಯಮದ ಗುರು ಶ್ರೀ ಪ್ರಭಾಕರ ಜೋಶಿ, ಲೇಖಕಿ ಮತ್ತು ರಂಗತಜ್ಞೆ ಡಾ. ಸುಜಾತಾ ಜಂಗಮಶೆಟ್ಟಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಗೌರವ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದ ಶ್ರೀ ಬಿ.ಎಚ್.ನಿರಗುಡಿ, ಶ್ರೀ ಸುರೇಶ ಬಡಿಗೇರ, ಈ ಕೃತಿಯ ರಚನೆಯ ಸಂದರ್ಭದಲ್ಲಿ ಜೇವರ್ಗಿ ಕ.ಸಾ.ಪ.ಗೌರವ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ ಶ್ರೀ ಹುಸೇನ್ ಬಾಶಾ ಮುರಗಾನೂರ ಅವರ ಸಹಕಾರ ಸಿಂಹಪಾಲು. ಹೀಗಾಗಿ ಅವರಿಗೆ ಧನ್ಯವಾದಗಳು. ಅಂದವಾಗಿ ಮುದ್ರಿಸಿದ ಚಾರುಮತಿ ಪ್ರಕಾಶನದ ಶ್ರೀ ಬಿ.ಎಸ್. ವಿದ್ಯಾರಣ್ಯ, ಅಲ್ಲದೆ ಕಸಾಪ ಘಟಕದ ಸಮಸ್ತರಿಗೂ, ಗೆಳೆಯರಿಗೂ, ಪತ್ರಿಕಾ ಮಾಧ್ಯಮದ ಸ್ನೇಹಿತರಿಗೂ ನನ್ನ ನೆನೆಕೆಗಳು. ಪತ್ನಿ, ಮಕ್ಕಳಿಗೆ, ಬಂಧುಗಳಿಗೆ ಮಿತ್ರರಿಗೆ ಮರೆತರೆ ಮೆಚ್ಚನಾ ಪರಮಾತ್ಮನು.

**– ಮಹಿಪಾಲರೆಡ್ಡಿ ಮುನ್ನೂರು**

ಕಲಬುರಗಿ

ಫೋನ್ : ೯೭೩೧೬೬೬೦೫೨

## ಆಲ್ದಾಳರ ರಂಗ ಜೀವನದ

# ಪರದೆ ತೆರೆದಂತೆ...


| | |
|---|---|
| ನಾಂದಿ ಪದ | ೯ |
| ತೆರೆದಿದೆ ಮನೆ ಓ.. | ೧೨ |
| ಮದುವೆಯ ವಯಸು.. ಎಲ್ಲೆಲ್ಲೂ ಸೊಗಸು | ೧೪ |
| ಮಾವನಿಂದ ಬಂದ ರಂಗ ಬಳುವಳಿ | ೧೬ |
| ಬದುಕಲು ಬಟ್ಟೆ ಮಾರಾಟ | ೧೮ |
| ಬದುಕಿನ ಭಾರ ನೊಗ ಹೊತ್ತರು | ೨೦ |
| ಬೆನ್ನ ಹಿಂದಿನ ಬೆಳಕು | ೨೨ |
| ಕಣ್ಣಿಗೆ ಕಾಣದಾ ನಾಟಕಕಾರ.. ನಿನಗೆ ನನ್ನ ನಮಸ್ಕಾರ | ೨೫ |
| ಜಗವೆಲ್ಲ ನಗುತಿರಲಿ..ಜಗದಳವು ನನಗಿರಲಿ | ೨೯ |
| ಸೌಹಾರ್ದತೆಯ ಸಾಕ್ಷಿಪ್ರಜ್ಞೆ | ೩೧ |
| ಸಾಮಾಜಿಕ ಬದ್ಧತೆ | ೩೪ |
| ಪವಾಡಗಳು ಮೌಢ್ಯಗಳಲ್ಲ | ೩೬ |
| ರಂಗ ಚಳುವಳಿಕಾರ | ೩೮ |
| ಅಳು ನುಂಗಿ ನಗು ಒಮ್ಮೆ | ೪೦ |
| ಕಲಿಯೋಕೆ ಕೋಟಿ ಭಾಷೆ | ೪೨ |
| ಆಡಿಸಿ ನೋಡು, ಬೀಳಿಸಿ ನೋಡು | ೪೪ |
| ರಂಗ ಸಂತ ಜಂಗಮ | ೫೪ |
| ಜನಪದ ಜೇನು | ೫೬ |
| ಅಲ್ದಾಳರು ಕಲಬುರಗಿಯ ಕಬೀರ | ೫೮ |
| ಆಲ್ದಾಳರ ಕುರಿತ ಅಭಿಮಾನದ ಮಾತುಗಳು | ೬೯ |
| ಮಾಸದ ನೆನಪುಗಳು | ೭೧ |
| ಸಾಧಕನ ಹೆಜ್ಜೆ ಗುರುತು | ೭೪ |
| ಚಿತ್ರ ಸಂಪುಟ | ೮೩ |

# ನಾಂದಿ ಪದ

## ಆರಂಭ ಮಾಡುವೆ ಗುರು ಪೂಜೆಗೆಂದು..

ಹೌದು. ಪ್ರತಿ ನಾಟಕದ ಆರಂಭಕ್ಕೆ ನಾಂದಿ ಪದ ಎಂದಿರುತ್ತದೆ. ಈ ನಾಟಕಕಾರನ ಬದುಕಿನ ಪುಟಗಳನ್ನು ತೆರೆಯುವಾಗಲೂ ನಾಂದಿ ಪದ ಬೇಕಲ್ಲವೇ..? ಅದರಂತೆ, ಇದು ನಾಂದಿ ಮಾತು.

ಕರ್ನಾಟಕ ರಂಗಭೂಮಿಗೆ ಒಂದು ಇತಿಹಾಸವಿದೆ. ಪರಂಪರೆಯಿದೆ. ಗುಬ್ಬಿ ವೀರಣ್ಣನವರಿಗಿಂತ ಮುನ್ನವೇ ರಂಗಭೂಮಿ ಇಲ್ಲಿತ್ತು. ಆದರೆ ಗುಬ್ಬಿ ವೀರಣ್ಣನವರಿಂದಾಗಿ ರಂಗಭೂಮಿಗೊಂದು ಶ್ರೀಮಂತಿಕೆ ಬಂದಿತು. ಅನೇಕ ನಾಟಕ ಕಂಪನಿಗಳು ಕನ್ನಡ ರಂಗಭೂಮಿಯನ್ನು ಶ್ರೀಮಂತಗೊಳಿಸಿವೆ. ಅನೇಕ ರಂಗಭೂಮಿ ನಟರು ಕೂಡ ಶ್ರಮಿಸಿದ್ದಾರೆ. ರಂಗಭೂಮಿಗೆ ಹೆಸರು ತಂದಿದ್ದಾರೆ. ನಾಟಕಕಾರರೂ ಸಹ ರಂಗಭೂಮಿ ಕ್ಷೇತ್ರವನ್ನು ಬೆಳೆಸಿದ್ದಾರೆ. ಅಂತಹ ಸಾಲಿನಲ್ಲಿ ನಮ್ಮ ಹೈದ್ರಾಬಾದ್ ಕರ್ನಾಟಕದ ನಾಟಕಕಾರ ಶ್ರೀ ಎಲ್.ಬಿ.ಕೆ.ಆಲ್ದಾಳ ಅವರು ಒಬ್ಬರು. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಕೇಂದ್ರ ಬಿಂದು ಎನಿಸುವ ಕಲಬುರ್ಗಿ ಜಿಲ್ಲೆಯು ಈಗಿನ ಯಾದಗಿರಿ ಜಿಲ್ಲೆಯನ್ನು ಒಳಗೊಂಡಿತ್ತು.

ಸಂವೇದನಾ ಶೀಲ ಮನಸ್ಸಿಗೆ ಸೃಜನಶೀಲ ಭಾಷೆ ಜೊತೆಗೂಡಿದರೆ ಸಾಹಿತ್ಯದ ಪವಾಡ ಜರುಗುತ್ತದೆ. ಇದಕ್ಕೆ ಪಾಂಡಿತ್ಯದ ಜೊತೆಯೇನೂ ಅನಿವಾರ್ಯವಲ್ಲ. ಜೀವಾನಾನುಭವದ ಉತ್ಕಟ ದ್ರವ್ಯ ಸಾಕು ಎಂಬುದಕ್ಕೆ ಜನಪದ ಸಾಹಿತ್ಯ ನಮ್ಮ ಬೆನ್ನಿಗಿರುವ ಹಾಗೆ ಹೈದ್ರಾಬಾದ್ ಕರ್ನಾಟಕದಂಥ ನಿರ್ಲಕ್ಷಿತ ಪರಿಸರದಲ್ಲಿ ಶ್ರೀ ಎಲ್.ಬಿ.ಕೆ.ಆಲ್ದಾಳ ಅವರಂಥ ಶ್ರೇಷ್ಠ ನಾಟಕಕಾರರು ನಮ್ಮ ಕಣ್ಮುಂದೆ ಇದ್ದಾರೆ ಎಂಬುದು ನಾಡಿನ ಹಿರಿಯ ಲೇಖಕರಾದ ಡಾ. ಬಸವಲಿಂಗ ಸೊಪ್ಪಿಮಠ ಅವರಂಥ ಹಿರಿಯರ ಅಭಿಮಾನದ ಮಾತುಗಳು ನೆನಪಾಗುತ್ತದೆ.

ಅವಿಭಜಿತ ಕಲಬುರಗಿ ಜಿಲ್ಲೆಯು ಈಗಿನ ಯಾದಗಿರಿ ಜಿಲ್ಲೆಯನ್ನೂ ಒಳಗೊಂಡಿತ್ತು. ಯಾದಗಿರಿ ಜಿಲ್ಲೆಯ ವ್ಯಾಪ್ತಿಯೊಳಗೆ ಬರುವ ಸಗರನಾಡು ಎಂದೇ ಪ್ರಸಿದ್ಧಿಯನ್ನು ಪಡೆದ ಶಹಾಪುರ-ಸುರಪುರ ನೆಲವು ಸಾಹಿತ್ಯ ಮತ್ತು ಸಂಸ್ಕೃತಿಗೆ

ಹೆಸರು ಪಡೆದಿತ್ತು. ಕೃಷ್ಣಾ ಮತ್ತು ಭೀಮಾ ನದಿಯ ನಡುವೆ ಇರುವ ಸಗರನಾಡು, ಸಾಹಿತ್ಯಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಗಳಿಗೆ ಇಂಬು ನೀಡಿದೆ. ಸಗರನಾಡು ಎಂದು ಅನಿಸಿಕೊಳ್ಳುವ ಈ ಪ್ರದೇಶವು ಸುರಪುರ, ಶಹಾಪುರ ಮತ್ತು ಜೇವರ್ಗಿ ತಾಲೂಕುಗಳನ್ನು ಒಳಗೊಂಡಿದೆ ಇಂತಹ ಸಗರನಾಡಿನ ಸುರಪುರ ತಾಲೂಕಿನ ಪುಟ್ಟ ಆಲ್ದಾಳ ಗ್ರಾಮದಲ್ಲಿಯೇ ಬಹುತೇಕ ಬೆಳೆದ ಲಾಲಮಹ್ಮದ ಬಂದೇನವಾಜ್ ಖಲೀಫ್ ಅವರ ಜೀವನ ವೃತ್ತಾಂತವು ಇನ್ನೊಬ್ಬರಿಗೆ ಪ್ರೇರಣೆ.

ಕಾವ್ಯಗಳಿಗಿಂತ ನಾಟಕ ರಮ್ಯ ಅನ್ನುವ ಮಾತಿದೆ. ನವರಸಗಳು ಪ್ರಕಟಗೊಳ್ಳುವುದೇ ನಾಟಕಗಳಿಂದ. ನಾಟಕ ಎನ್ನುವುದು ಪುರಾತನ ಕಲೆ. ಇಂದು ರಂಗಭೂಮಿ ಅವನತಿಯತ್ತ ಸಾಗುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿರುವುದರ ನಡುವೆಯೇ ಸಾಕಷ್ಟು ರಂಗನಾಟಕಗಳ ಪ್ರದರ್ಶನ, ಕೃತಿಗಳ ಪ್ರಕಟಣೆಯಿಂದ ಸ್ವಲ್ಪ ಜೀವ ಹಿಡಿದಂತಾಗಿದೆ. ಹಾಗಾಗಿ ಅದನ್ನು ಪುನರುಜ್ಜೀವನಗೊಳಿಸಬೇಕಾಗಿದೆ. ಭಾರತೀಯ ಸಂಸ್ಕೃತಿ ಉಳಿಯಬೇಕಾದರೆ ಪುರಾತನ ಕಲೆಗಳನ್ನು ಪುರಸ್ಕರಿಸಬೇಕು. ಈ ಹಿನ್ನೆಲೆಯಲ್ಲಿ ಶ್ರೀ ಎಲ್.ಬಿ.ಕೆ.ಆಲ್ದಾಳ ಎಂಬ ಹಿರಿಯ ನಾಟಕಕಾರರ ನಾಟಕ ಕೃತಿಗಳು ಅದರಲ್ಲೂ ಆಧ್ಯಾತ್ಮ ನಾಟಕಗಳ ಬಗ್ಗೆ ಎತ್ತಿಕೊಂಡಿರುವ ಪ್ರಶ್ನೆ ದೊಡ್ಡದು. ಅದರ ಆಶಯ ದೊಡ್ಡದು. ಅವರ ನಿರೂಪಣಾ ಶಕ್ತಿಯ ಸಾಮರ್ಥ್ಯದ ಅಭಿವ್ಯಕ್ತಿ ಎಲ್ಲಕ್ಕಿಂತ ದೊಡ್ಡದು. ನಾಟಕವೆಂದರೆ ಏನು ಎಂದು ಮತ್ತೆ ಮತ್ತೆ ಆಲೋಚಿಸಲು ಹಚ್ಚುವುದೇ ನಾಟಕ. ನಿಜವಾಗಿಯೂ ದೊಡ್ಡ ರಂಗಭೂಮಿ ಕೃತಿಗಳು ಎಂದು ನಾನು ತಿಳಿದಿದ್ದೇನೆ. ಅಂಥ ರಂಗಕೃತಿಗಳನ್ನು ಹಾಗೂ ಆಧ್ಯಾತ್ಮ ರಂಗ ಕೃತಿಗಳನ್ನು ನಿರ್ಮಿಸಿ ಕೊಟ್ಟಿದ್ದಕ್ಕಾಗಿ ಕನ್ನಡದ ಸಾರಸ್ವತಲೋಕ ಅದರಲ್ಲೂ ರಂಗಲೋಕ ಆಲ್ದಾಳರನ್ನು ಅಭಿನಂದಿಸಬೇಕು.

ರಮ್ಯ ಮನೋಧರ್ಮದ ಆಲ್ದಾಳರು ಹಿಂದಿನ ಅದೇ ಧೋರಣೆಯ ನಾಟಕಕಾರರ ಅತಿರೇಕಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಬದಲಿಗೆ ಸ್ವಂತಿಕೆಯನ್ನು ಉಳಿಸಿಕೊಂಡು ಬಂದಿರುವ ನಾಟಕಕಾರರೆಂದರೆ ಎಲ್.ಬಿ.ಕೆ.ಆಲ್ದಾಳರು.

ಅವರು ಛಂದಸ್ಸಿನಲ್ಲಿ ಮಾಡಿರುವ ಪ್ರಯೋಗಗಳಿಂದ ಕನ್ನಡ ನಾಟಕ ಕ್ಷೇತ್ರವನ್ನು ಶ್ರೀಮಂತವನ್ನಾಗಿ ಮಾಡಿದ್ದಾರೆ ಎಂದರೆ ಅತಿಶಯೋಕ್ತಿ ಮಾತೇನಲ್ಲ. ತಮ್ಮ ಶಿಸ್ತಿನಿಂದ ನಾಟಕ ರಚನೆಯಂತಹ ಕುಶಲ ಕೆಲಸದಲ್ಲಿ ಪರಿಪೂರ್ಣತೆಯೆನ್ನುವುದು ಇಲ್ಲವೇ ಇಲ್ಲ ಎನ್ನುವ ಆರೋಗ್ಯಕರವಾದ, ಯಾವುದೇ ಸಿದ್ಧಾಂತಗಳಿಲ್ಲದ, ಘೋಷಣೆಗಳ ಆಡಂಬರವಿಲ್ಲದ ರಂಗಕೃತಿಗಳನ್ನು ತರುವಲ್ಲಿ ಅದರಲ್ಲೂ, ಆಧ್ಯಾತ್ಮಿಕತೆಯ ಪರಂಪರೆಯನ್ನು ಬಿಡದೆ ನಾಟಕ ಕೃತಿಯನ್ನು ಹೊರತರುವ ಆಲ್ದಾಳ ಅವರು ಗಮನಾರ್ಹವಾದ ಸ್ವಂತಿಕೆಯನ್ನು ಸಾಧಿಸಿದ್ದಾರೆ. ಆ ಮೂಲಕ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರ ಸಾಧನೆಯನ್ನು ಮೀರಿಸುವ ನಾಟಕಕಾರ ಅವರ ತಲೆಮಾರಿನಲ್ಲಂತೂ ಕನ್ನಡದಲ್ಲಿ ಸದ್ಯಕ್ಕೆ ಬೇರೆ ಯಾರೂ ಇಲ್ಲ ಎಂದು ಹೇಳಿದರೆ.. ಅದು ಕೇವಲ ಪ್ರಶಂಸೆಯ ಮಾತು ಆಗಲಾರದು.

ವೃತ್ತಿರಂಗಭೂಮಿಗೆ ನಾಟಕಕಾರ ಆಲ್ದಾಳ ಅವರು ಕೊಟ್ಟ ಕೊಡುಗೆ ಅಪಾರ. ಗುಡ್ಡಾಪುರದ ದಾನಮ್ಮದೇವಿ ಮಹಾತ್ಮೆ, ಶ್ರೀ ವಿಶ್ವಾರಾಧ್ಯ ಮಹಾತ್ಮೆ, ಮಡಿವಾಳೇಶ್ವರ ಮಹಾತ್ಮೆ, ಶಹಾಪುರದ ಚರಬಸವೇಶ್ವರ ಮಹಾತ್ಮೆ.. ಹೀಗೆ ಅನೇಕ ಶಿವಶರಣರ ಜೀವನ ಸಾಧನೆ, ಜಪ, ತಪ, ಪವಾಡ, ಮಹಿಮೆ ಕುರಿತು ನಾಟಕಗಳನ್ನು ಬರೆದು ಜನರ ಮನದಲ್ಲಿ ಕವಿಯಾಗಿ ಬೆಳೆದಿದ್ದಾರೆ.

ಹೀಗೆ ಬರೆದ ನಾಟಕಗಳನ್ನು ರಂಗಭೂಮಿಯಲ್ಲಿ ಪ್ರಯೋಗಿಸಿ ಜನಮನ್ನಣೆ ಪಡೆದ ಇವರ ಜೀವನ ಸಾರ್ಥಕ.

# ತೆರೆದಿದೆ ಮನೆ ಓ...

ತೆರೆದಿದೆ ಮನೆ ಓ ಬಾ ಅತಿಥಿ..

ಹೊಸ ಬೆಳಕಿನ ಹೊಸ ಗಾಳಿಯಾ..

ಹೊಸ ಬಾಳನು ತಾ ಅತಿಥಿ..

ಇತಿಹಾಸ ಪ್ರಸಿದ್ಧ ಗೋಲಗುಮ್ಮಟ ಹೊಂದಿರುವ ಈಗಿನ ವಿಜಯಪುರ ಅಂದರೆ, ಆಗಿನ ವಿಜಾಪೂರ ಜಿಲ್ಲೆ ಪಂಚನದಿಗಳ ನಾಡು ಎಂದು ಕರೆಸಿಕೊಳ್ಳುತ್ತಿತ್ತು. ಅಂತಹ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಬನ್ನೆಟ್ಟಿಯಲ್ಲಿ ಅತ್ಯಂತ ಬಡತನದ ಮುಸ್ಲಿಂ ಕುಟುಂಬದಲ್ಲಿ ತಾಯಿ ಹುಸೇನಬಿ ಹಾಗೂ ತಂದೆ ಬಂದೇನವಾಜರ ಪುಣ್ಯ ಗರ್ಭದಲ್ಲಿ ಲಾಲ ಮಹ್ಮದ (ಎಲ್.ಬಿ.ಕೆ.ಆಲ್ದಾಳ) ೫-೧೧-೧೯೩೮ರಲ್ಲಿ ಜನಿಸಿದರು. ಲಾಲಮಹ್ಮದ ತಂದೆ ಬಂದೇನವಾಜ ಖಲೀಫ ಆಲ್ದಾಳ.

ಅವಿಭಜಿತ ಕಲಬುರಗಿ ಜಿಲ್ಲೆಯ ಸುರಪುರ ಈಗ ನೂತನ ಯಾದಗಿರಿಯ ಜಿಲ್ಲೆಯಲ್ಲಿರುವ ತಾಲೂಕು. ಆಲ್ದಾಳ ಸುರಪೂರ ತಾಲೂಕಿನ ಒಂದು ಹಳ್ಳಿ, ಅದು ಲಾಲ್ ಮಹ್ಮದ ಅವರ ಸೋದರ ಮಾವನ ಊರಿನ ಹೆಸರು. ತಾಯಿ ತವರು ಮನೆಯಾದ್ದರಿಂದ ಬಾಲ್ಯ ಅಲ್ಲಿಯೇ ಕಳೆದದ್ದರಿಂದ ಅವರ ಹೆಸರಿನ ಮುಂದೆ ಆಲ್ದಾಳ ಅಂಟಿಕೊಂಡಿತು. ಆಲ್ದಾಳರು ಮೂರನೇ ವರ್ಷದ ಕೂಸಿರುವಾಗಲೇ ತಂದೆಯನ್ನು ಕಳೆದುಕೊಂಡರು. ಹುಸೇನಬಿ ಬಡತನದ ಭೂತ ಬೆನ್ನಿಗೆ ಕಟ್ಟಿಕೊಂಡೇ ಮೂರುವರ್ಷದ ಮಗುವನ್ನು ಕಂಕುಳಲ್ಲಿ ಕಟ್ಟಿಕೊಂಡು ಸಹೋದರರ ಅಣತಿಯಂತೆ ಸಿಂದಗಿಯ ಬನ್ನೆಟ್ಟಿ ತೊರೆದು ತವರೂರಾದ ಸುರಪೂರ ತಾಲೂಕಿನ ಆಲ್ದಾಳಕ್ಕೆ ಬರುತ್ತಾಳೆ. ಇಲ್ಲಿ ಸಹೋದರರ ಆಶ್ರಯದಲ್ಲಿ ಮಗನನ್ನು ಕಟ್ಟಿಕೊಂಡು ಜೀವನ ಮುಂದುವರಿಸುತ್ತಾಳೆ.

ಆಲ್ದಾಳರ ಪ್ರಾಥಮಿಕ ಶಿಕ್ಷಣ ಸೋದರ ಮಾವಂದಿರ ಊರಲ್ಲಿಯೇ ನಡೆಯುತ್ತದೆ. ಸುರಪೂರ ತಾಲೂಕಿನ ಆಲ್ದಾಳ ಪುಟ್ಟ ಗ್ರಾಮವಾದರೂ ಅಲ್ಲಿ ಶರಣ ಸಂಸ್ಕೃತಿಯ ಪರಿಮಳವಿತ್ತು. ಆ ಊರಿನ ಮಾಲಿಗೌಡರಾದ ಶ್ರೀ ಹುಸೇನಪಟೇಲ, ಲಾಡ್ಲೆಪಟೇಲ, ಸುಲ್ತಾನ ಪಟೇಲ ಇವರು ಎಲ್.ಬಿ.ಕೆ.ಯವರ ಸೋದರಮಾವಂದಿರು. ಮೂರುಜನ ಸೋದರ ಮಾವಂದಿರು ಬೇರೆ ಬೇರೆಯಾದರು. ಹಿರಿಯ ಮಾವ ಹುಸೇನ ಪಟೇಲ ಹಾಗೂ ಕಿರಿಯ ಮಾವ ಸುರಪೂರ ತಾಲೂಕಿನ ಆಲ್ದಾಳದಲ್ಲೆ ಕೃಷಿಯೊಂದಿಗೆ ಜೀವನ ನಡೆಸುತ್ತಿದ್ದರು. ನಡುವಿನ ಮಾವ ಲಾಡ್ಲೇಪಟೇಲರು ಸುರಪೂರದಲ್ಲಿ ಇದ್ದರು.

ಹಿರಿಯ ಸೋದರ ಮಾವನವರು ಕೊಂಕಣಿ ಭಾಷೆಯಲ್ಲಿ ಬರೆದ ಅವ್ಯಕ್ತ ಬೋಧಾಮೃತವನ್ನು ಕನ್ನಡಕ್ಕೆ ತಂದವರು. ಮಧ್ಯಮ ಮಾವ ಕನ್ನಡದ ಮೇರುಪರ್ವತವೇ ಆದವರು, ರಂಗ ಕಲಾಸಕ್ತರಾಗಿ ಬದುಕಿದವರು. ಗ್ರಾಮೀಣ ಪ್ರದೇಶದ ರಂಗಭೂಮಿಯನ್ನು ಎತ್ತರಿಸುವ ಬಯಲಾಟಗಳನ್ನು ಆಡಿಸುವ ಮತ್ತು ಕಲಿಸುವಲ್ಲಿ ಎತ್ತಿದ ಕೈ. ಅಷ್ಟೇ ಅಲ್ಲ, ಬಯಲಾಟದ ಹಾಡುಗಳನ್ನು ಅತ್ಯಂತ ಶುಶ್ರಾವ್ಯವಾಗಿ ಹಾಡುವಲ್ಲಿ ಪರಿಣಿತರು. ಇನ್ನು ಮೂರನೇ ಮಾವ ಕೃಷಿ ಕೆಲಸದೊಂದಿಗೆ ಬಯಲಾಟ ಸೇರಿದಂತೆ ವಿವಿಧ ಕುಶಲಕಲೆಗಳಲ್ಲಿ ನಿಷ್ಣಾತರಾಗಿದ್ದರು. ನಾಟಕಗಳಲ್ಲಿ ಪಾತ್ರ ಮಾಡಿ ಜನಮೆಚ್ಚುಗೆ ಪಡೆದವರು.

# ಮದುವೆಯ ವಯಸು... ಎಲ್ಲೆಲ್ಲೂ ಸೊಗಸು...

ಹೀಗೆ, ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಬನ್ನೆಟ್ಟಿ ಎಂಬ ಪುಟ್ಟ ಗ್ರಾಮದಿಂದ ಸುರಪುರ ತಾಲೂಕಿನ ಅಲ್ದಾಳ ಗ್ರಾಮಕ್ಕೆ ಬಂದ ಅಲ್ದಾಳ ಮತ್ತು ಮತ್ತವರ ತಾಯಿ ತನ್ನ ಸೋದರ ಮಾವಂದಿರ ಮನೆಯಲ್ಲಿ ಬೆಳೆಯುತ್ತಿರುವಾಗಲೇ ಮಾವನ ರಂಗಾಸಕ್ತಿಯ ಪ್ರಭಾವ ಬಹುಶಃ ಲಾಲ ಮಹ್ಮದ ಅವರ ಮೇಲೆ ಗಾಢವಾಗಿ ಬೀರುತ್ತದೆ.

ಇದರಿಂದಾಗಿ ಲಾಲಮಹ್ಮದ ಅವರು ರಂಗಭೂಮಿಯ ಕಡೆಗೆ ಹೆಚ್ಚು ಗಮನ ಹರಿಸುತ್ತಾರೆ. ಈ ನಡುವೆ, ಕಿರಿಯ ಸೋದರ ಮಾವ ಸುಲ್ತಾನಪಟೇಲರ ಮಗಳನ್ನು ಹಿರಿಯರ ಒಪ್ಪಿಗೆಯ ಮೇರೆಗೆ ಅಲ್ದಾಳರು ಮದುವೆ ಮಾಡಿಕೊಳ್ಳುತ್ತಾರೆ.

ಇಲ್ಲಿ ಒಂದು ಸಂಗತಿ ನೆನಪು ಮಾಡಬೇಕು. ಲಾಲಮಹ್ಮದ ಅವರ ಹೆಂಡತಿಯಾಗಿ ಬದುಕನ್ನು ಶುರು ಮಾಡಿ ಅಮೀನಬಿ ಅಲ್ದಾಳರ ಎಲ್ಲ ಏಳು ಬೀಳುಗಳಿಗೆ ಸಾಥ್ ನೀಡಿದರು. ಹಾಗೆ ನೋಡಿದರೆ, ಕಿರಿಯ ಸೋದರ ಮಾವ ಸುಲ್ತಾನ ಪಟೇಲರಿಗೆ ಅಮೀನಬಿ ಹುಟ್ಟಿದ ಮೂರೇ ತಿಂಗಳಲ್ಲಿ ತನ್ನ ತಾಯಿಯನ್ನು ಕಳೆದುಕೊಳ್ಳುತ್ತಾಳೆ. ಹೀಗಾಗಿ, ಅಮೀನಬಿ ಅತ್ತೆ ಹುಸೇನಬಿ ಅವರ ಆಶ್ರಯದಲ್ಲಿ ಬೆಳೆಯುತ್ತಾಳೆ.

ಅಲ್ದಾಳರ ಹೆಂಡತಿ ಅಮೀನಬಿ ಹುಟ್ಟಿದ ಮೂರು ತಿಂಗಳಲ್ಲೆ ಅವರ ತಾಯಿ ತೀರಿ ಹೋದ ಹಿನ್ನೆಲೆಯಲ್ಲಿ ಪಾಲನೆ ಪೋಷಣೆಯ ಜವಾಬ್ದಾರಿ ಅಲ್ದಾಳರ ತಾಯಿಯ ಮೇಲೆ ಬೀಳುತ್ತದೆ. ತಾಯಿಯಿಲ್ಲದ ಈ ಬಾಲಕಿಯನ್ನ ಜೋಪಾನ ಮಾಡಿ ಬೆಳೆಸಿದ ತಾಯಿ ಬೇರೆಡೆಗೆ ಮದುವೆ ಮಾಡಿ ಕೊಡದೇ, ತನ್ನ ಮಗನೊಂದಿಗೆ ಮದುವೆ ಮಾಡಿಸುತ್ತಾಳೆ. ಏಕೆಂದರೆ ಅಲ್ದಾಳರ ಸೋದರಮಾವ ಮರು ಮದುವೆಯಾಗಿದ್ದ. ಅನಾಥಳನ್ನು ಮದುವೆ ಮಾಡಿಕೊಂಡ ಅಲ್ದಾಳರು ಹೆಂಡತಿ ಮನೆ ನೋಡಿದ್ದಿಲ್ಲ. ಹೆಂಡತಿ ಅಮೀನಬಿ ಗಂಡನ ಮನೆ ನೋಡಿದ್ದಿಲ್ಲ. ಅಲ್ದಾಳರಿಗೆ ಮಾವನ ಮನೆಯೂ ಅದೇ. ತನ್ನ ಮನೆಯೂ ಅದೇ. ಅಮೀನಬಿ ಗೆ ತನ್ನ ಮನೆಯೂ ಅದೇ. ಮಾವನ ಮನೆಯೂ ಅದೇ. ಹೀಗಾಗಿ ಇಬ್ಬರಿಗೂ ಒಂದೇ ಆಗಿರುವುದರಿಂದ ಯಾವುದೇ ಎಡರು ತೊಡರುಗಳು ಬರಲಿಲ್ಲ. ಅಲ್ದಾಳರ ತಾಯಿ ನಿಜವಾಗಿಯೂ ಮಾತೃಹೃದಯಿ ಆಗಿದ್ದರಿಂದ ಸೊಸೆಯನ್ನು ಮಗಳಿಗಿಂತ ಹೆಚ್ಚು ಪ್ರೀತಿಸುತ್ತಿದ್ದರು. ಮದುವೆಯಾಗುವಾಗ ಏಳನೇ ತರಗತಿಯಲ್ಲಿ ಓದುತ್ತಿದ್ದ ಅಲ್ದಾಳರದು ಬಾಲ್ಯ ವಿವಾಹ. ಮಾವಂದಿರೆಲ್ಲರ ಸಂಸಾರ ಬೇರೆಯಾದ್ದರಿಂದ ಅಲ್ದಾಳರ ಓದು ಅಲ್ಲಿಗೆ ನಿಂತಿತು. ಹಿರಿಯ ಮಾವಂದಿರು

ಶಹಾಪೂರಿನ ಆಲ್ದಾಳಕ್ಕೆ ಕರೆಯಿಸಿಕೊಂಡು ಟೇಲರಿಂಗ್ ಕಲಿಸುತ್ತಿರುವಾಗಲೆ ಆ ಊರಿನ ಹಿರಿಯರಾದ ಸಂಜೀವಣ್ಣಾ ದೊರಿ ಹಾಲಗಡ್ಲಿಯವರು ಕನಕಾಂಗಿ ಎಂಬ ಬಯಲಾಟ ಆಡಲು ನಿರ್ಧರಿಸಿ ಆಲ್ದಾಳರಿಗೆ ಕೃಷ್ಣನ ಪಾತ್ರ ಕೊಟ್ಟರು. ಅದನ್ನು ಯಶಸ್ವಿಯಾಗಿ ನಿಭಾಯಿಸಿದ್ದರು. ಅಲ್ಲಿಂದಲೇ ರಂಗಾಸಕ್ತಿ ಆಲ್ದಾಳರಲ್ಲಿ ಚಿಗುರೊಡೆಯಿತು.

# ಮಾವನಿಂದ ಬಂದ ರಂಗ ಬಳುವಳಿ

ಆಲ್ದಾಳರಿಗೆ ತಾಯಿಯ ಮನೆತನದ ರಕ್ತಗತದಿಂದಲೇ ನಾಟಕ ಕಲೆ ಹರಿದು ಬಂದಿತ್ತು. ಏಕೆಂದರೆ ಮೂರು ಜನ ಸೋದರಮಾವಂದಿರ ಸಂಪೂರ್ಣ ಪ್ರಭಾವ ಆಲ್ದಾಳರ ಮೇಲೆ ಗಾಢವಾಗಿ ಪರಿಣಾಮ ಬೀರುತ್ತದೆ. ಮಾವಂದಿರು ಆಟ, ಬಯಲಾಟ, ನಾಟಕಗಳನ್ನು ಕಲಿಸಲು, ಹಾಡಕಿ ಹಾಡಲು ಹಳ್ಳಿ ಹಳ್ಳಿಗೆ ಹೋಗುತ್ತಿದ್ದರು. ಅಲ್ಲಿ ಅವಶ್ಯವಿದ್ದಾಗ ಸಣ್ಣ ಸಣ್ಣ ಪಾತ್ರಗಳನ್ನು, ಬಾಲಕರಿದ್ದಾಗ ಆಲ್ದಾಳರು ನಿರ್ವಹಿಸಿದ್ದರು. ಹೀಗಾಗಿ ಆಲ್ದಾಳರ ರಂಗ ಶಿಕ್ಷಣದ ದೀಕ್ಷೆ ಕೊಟ್ಟವರು ಸೋದರಮಾವಂದಿರು.

ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಆಲ್ದಾಳರು ತಂದೆಯ ವಾತ್ಸಲ್ಯ ಪ್ರೀತಿಯಿಂದ ವಂಚಿತರಾದರು. ತಂದೆಯ ಸ್ಥಾನವನ್ನು ಸೋದರಮಾವಂದಿರು ತುಂಬುತ್ತಾರೆ. ಪ್ರಚಲಿತದಲ್ಲಿರುವ 'ತಾಯಿ ಸತ್ತರೂ ಸೋದರಮಾವಂದಿರಿರಬೇಕೆಂಬ' ಮಾತು ಆಲ್ದಾಳರಿಗೆ ಅನ್ವರ್ಥಕ. ತಂದೆಯಿಲ್ಲದ ಸೋದರಿಯ ಮಗನನ್ನು ತಮ್ಮ ಮಕ್ಕಳಂತೆ ಬೆಳೆಸುತ್ತಾರೆ ಸೋದರ ಮಾವಂದಿರು. ಕೇವಲ ಬೆಳೆಸುವದಷ್ಟೇ ಅಲ್ಲ, ಜ್ಞಾನವನ್ನೂ ನೀಡಿ, ಸಂಸ್ಕಾರ ಕೊಟ್ಟು ಸೋದರಮಾವನವರ ಸೇವೆಗೆ ಉಪಕೃತರಾಗುತ್ತಾರೆ ಆಲ್ದಾಳರು.

ಸೋದರ ಮಾವಂದಿರ ಪ್ರೀತಿ ಕರುಣೆ ಪ್ರಾಂಜಲವಾಗಿತ್ತು. ಆದರೆ ಬಹುತೇಕ ಮನೆಗಳಲ್ಲಿ ಇರುವಂತೆ, ಸೋದರ ಮಾವನವರ ಅವರ ಹೆಂಡಿರು ಮತ್ತು ಮಕ್ಕಳು ಆಲ್ದಾಳರಿಗೆ ತುಂಬಾ ತಾಪತ್ರಯ ತೊಂದರೆ ನೀಡಿದ್ದುಂಟು. ಮನೆಯಲ್ಲಿಯ ಎಲ್ಲ ಕೆಲಸ ಮುಗಿಸಿಕೊಂಡು ಶಾಲೆಗೆ ಹೋಗಬೇಕು. ಕೆಲಸ ಅಪೂರ್ಣವಿಟ್ಟು ಶಾಲೆಗೆ ಹೋದರೆ ಅಂದು ಊಟವೆ ಸಿಗುತ್ತಿರಲಿಲ್ಲ. ಕೆಲಸ ಮುಗಿಸಿಕೊಂಡು ತಡವಾಗಿ ಶಾಲೆಗೆ ಹೋದರೆ ಅಲ್ಲಿ ಗುರುಗಳಿಂದ ಶಿಕ್ಷೆ ಹೀಗಿರುವಾಗ, ಒಂದು ದಿನ ಮುಖ್ಯಗುರುಗಳಾದ ನಾರಾಯಣಸಿಂಗ ಆಲ್ದಾಳರಿಗೆ ಪಾಲಕರನ್ನು ಕರೆತರಲು ಹೇಳಿದರು. ಆದರೆ ಮಾವನವರಿಗೆ ಕರೆದುಕೊಂಡು ಹೋದ ಆಲ್ದಾಳರು ದುಃಖಿತರಾಗಿದ್ದರು. ಮನೆಗೆ ಬಂದ ಸೋದರಮಾವ ಆಲ್ದಾಳರನ್ನು ತೊಡೆಯ ಮೇಲೆತ್ತಿಕೊಂಡು 'ನಿನ್ನ ತಂದೆಯವರಿದ್ದರೆ ನೀನೇಕೆ ಇಲ್ಲಿಗೆ ಬರುತ್ತಿದ್ದಿ' ಎಂದು ಹೇಳುತ್ತಾ ಬಿಕ್ಕಿ ಬಿಕ್ಕಿ ಅತ್ತಿದ್ದರು. ತಮ್ಮ ಹೆಂಡತಿ ಮಕ್ಕಳಿಗೆ ಎಚ್ಚರಿಕೆ ನೀಡಿ , ಈ ಮಗುವಿಗೆ ಕೆಲಸ ಹಚ್ಚಬೇಡಿ. ಬೇಗನೆ ಶಾಲೆಗೆ ಕಳಿಸಿಕೊಡಿ' ಎಂದಿದ್ದರಂತೆ. ಸೋದರ ಮಾವನ ಹೆಂಡತಿ ಮಕ್ಕಳು ಇವರಿಗೆ ಕಷ್ಟ ಕೊಡದಿದ್ದರೆ ಆಲ್ದಾಳರು ಮಾವನ ಮನೆಬಿಟ್ಟು ಬರುತ್ತಿರಲಿಲ್ಲ. ಸಾಹಿತ್ಯದ

ತೇರನ್ನು ಎಳೆಯುತ್ತಿರಲಿಲ್ಲವೇನೋ? ಬೆಂಕಿಯಲ್ಲಿ ಬೆಂದ ಚಿನ್ನ ತನ್ನ ಹೊಳಪು ದ್ವಿಗುಣಗೊಳಿಸುವಂತೆ ಆಲ್ದಾಳರು ಅಪ್ಪಟ ಚಿನ್ನ. ಬಡತನ, ಅನಾಥ ಪ್ರಜ್ಞೆ, ನಿರುದ್ಯೋಗ ಇವೆಲ್ಲ ಅವರನ್ನು ಗಟ್ಟಿಗೊಳಿಸಿದವು.

ಸೋದರ ಮಾವಂದಿರ ಹೆಂಡಿರ ಮಕ್ಕಳ ತೊಂದರೆಗೆ ಬೇಸತ್ತು ಆಲ್ದಾಳರು ತನ್ನ ಚಿಕ್ಕಮ್ಮನ ಊರಾದ ಜೇವರ್ಗಿ ತಾಲೂಕಿನ ಮಳ್ಳಿಗೆ ಬಂದು ನೆಲೆಸುತ್ತಾರೆ. ಅಲ್ಲಿ ವರ್ಷಕ್ಕೆ ೩೦೦ ರೂ ಪಗಾರಿನಲ್ಲಿ ನರಸಪ್ಪನ ಮನೆಯಲ್ಲಿ ದುಡಿಯಲು ನಿಲ್ಲುತ್ತಾರೆ. ಅಲ್ಲಿಯ ಪ್ರಸಿದ್ಧ ನಾಟಕಕಾರರಾದ ಮೋಹನಚಂದ ಕಿರಣಗಿ, ಮೋಹನಾಚಾರ್ಯ ಜೋಷಿಯವರ ಪರಿಚಯವಾಗಿ ಅವರ ಸಂಪರ್ಕ ಪ್ರೀತಿ ಸಂಪಾದಿಸಿದ ಆಲ್ದಾಳರು ಸಗರ ಕೃಷ್ಣಚಾರ್ಯರ ಜೀವನ ಸಂಸಾರಿ ಮತ್ತು ಬಾಡಿಗೆ ಮನೆ ಎಂಬೆರಡು ಏಕಾಂತ ನಾಟಕಗಳನ್ನು ಶಾಲಾ ದಿನಾಚರಣೆಯಲ್ಲಿ ಆಡಿದಾಗ ಅಪಾರ ಜನಮನ್ನಣೆ ದಕ್ಕಿದಾಗ ನಾಟಕ ಬರೆಯುವ ಆಸಕ್ತಿ ಪ್ರೇರಣೆ ಅಂಕುರಗೊಂಡಿತು. ಆ ಸಸಿ ಮುಂದೆ ಹೆಮ್ಮರವಾಗುತ್ತದೆಂದೂ ಯಾರು ಊಹಿಸಿರಲಿಲ್ಲ ಮತ್ತು ನಿರೀಕ್ಷಿಸಲಿರಲಿಲ್ಲ.

ಬಡತನದ ಬದುಕು ಇವರನ್ನು ಒಂದೆಡೆಗೆ ನೆಲೆ ನಿಲ್ಲಲು ಕೊಡಲಿಲ್ಲ. ವೃದ್ಧೆ ತಾಯಿ ಹೆಂಡತಿ ಮತ್ತು ಮೂರು ಮಕ್ಕಳನ್ನು ಕಟ್ಟಿಕೊಂಡು ಮತ್ತೆ ಮಳ್ಳಿಯಿಂದ ಆಲ್ದಾಳಕ್ಕೆ ಪಯಣ ಸಾಗಿತು. ಅಲ್ಲಿ ಅನೇಕ ನಾಟಕಗಳಲ್ಲಿ ಅಭಿನಯ ಒದಗಿಬಂದಿತು. ಹಾರ್ಮೋನಿಯಂ ಕಲಿತುಕೊಂಡರು. ಚಿತ್ರಾಂಗದಾ, ಬಂಧುದ್ರೋಹ, ಹರಿಶ್ಚಂದ್ರ ನಾಟಕಗಳಿಗೆ ಮಾಸ್ತರರಾದರು. ಅಂದಿನಿಂದಲೇ ಇವರಿಗೆ ಆಲ್ದಾಳ ಮಾಸ್ತರ ಎಂಬ ನಾಮಾಂಕಿತ ಬಂದಿತು.

ಸಾಹಿತ್ಯಾಸಕ್ತಿ ಚಿಗುರೊಡೆಯತೊಡಗಿತು ಅನುವಂಶಿಕ ತಾಯಿಯಿಂದ ಬಂದ ಕಲೆ ಒಂದೆಡೆಯಾದರೆ ಮಾವಂದಿರ ಸಂಸ್ಕಾರ ತರಬೇತಿ ಮತ್ತೊಂದು. ಊರೂರು ತಿರುಗಿ ಬಣ್ಣ ಹಚ್ಚಿ ಪಾತ್ರ ಮಾಡುವುದು ಇನ್ನೊಂದು. ಹೀಗೆ ಅನುಭವದಲ್ಲಿ ಮಿಂದೆದ್ದ ಆಲ್ದಾಳರು ೧೯೬೨ರಲ್ಲಿ ಪತಿಭಕ್ತಿ ಎಂಬ ನಾಟಕ ಬರೆದು ಸ್ವತ: ಪಾತ್ರ ಮಾಡಿ ಜನರಿಗೆ ಒಬ್ಬ ನಾಟಕಕಾರನೆಂಬುದನ್ನು ತೋರಿಸಿಕೊಟ್ಟರು. ದೇವಾಪುರದ ಗ್ರಾಮಸೇವಕರಾದ ಕಮರಿಮಠರವರು ಆ ಪುಸ್ತಕವನ್ನು ಮುದ್ರಣ ಮಾಡಿಸಿದರು. ಆ ಪುಸ್ತಕದ ಬೆಲೆ ೨ ರೂಪಾಯಿ ಆಗಿತ್ತು. ಆ ನಾಟಕದಿಂದ ಜನ ಆಕರ್ಷಿತರಾದರು. ಸುತ್ತಲಿನ ಹಳ್ಳಿ ಹಳ್ಳಿಗಳಲ್ಲಿ ಪತಿಭಕ್ತಿ ನಾಟಕ ಮನೆ ಮಾತಾಯ್ತು. ಆಲ್ದಾಳರು ಇಲ್ಲಿಯೂ ನೆಲೆ ನಿಲ್ಲದೆ ಊರ ಬಿಟ್ಟು ಮುಂಬಯಿಗೆ ಹೋದರು.

# ಬದುಕಲು ಬಟ್ಟೆ ಮಾರಾಟ

ಮುಂಬಯಿಯಲ್ಲಿ ಕೆಲದಿನ ಹೊಟ್ಟೆಪಾಡಿಗಾಗಿ ಕೂಲಿನಾಲಿ ಕೆಲಸ ಮಾಡಿಕೊಂಡಿರುವಾಗ ತಾಯಿಯ ಆರೋಗ್ಯ ತಪ್ಪಿ ಹಾಸಿಗೆ ಹಿಡಿದಾಗ ಮತ್ತೆ ಮರಳಿ ಮಳ್ಳಿಗೆ ಹಿಂದಿರುಗುವ ಅನಿವಾರ್ಯ ಬಂದೊದಗಿತು. ಮಳ್ಳಿಯಲ್ಲಿ ನರಸಪ್ಪನವರ ಸಹಕಾರ ಸಹಾಯದೊಂದಿಗೆ ಬಟ್ಟೆ ಅಂಗಡಿ ತೆರೆದು ಮುಂಬಯಿಗೆ ಹೋಗಿ ಬಟ್ಟೆ ಖರೀದಿ ಮಾಡಿಕೊಂಡು ಬಂದರು. ಸುಮಾರು ವರ್ಷಗಳ ಕಾಲ ಅಂಗಡಿ ವ್ಯಾಪಾರ ಸರಿಯಾಗಿಯೇ ನಡೆಯಿತು. ಪಾಲುದಾರರ ಅವಿಶ್ವಾಸದಿಂದ ಮೂರು ಸಾವಿರ ನಷ್ಟ ಮಾಡಿಕೊಂಡು ಹೊರಬರಬೇಕಾಯಿತು. ತರುವಾಯ ಆಲ್ದಾಳರು ಸ್ವತಃ ಚಿಕ್ಕದೊಂದು ರೆಡಿಮೇಡ್ ಬಟ್ಟೆ ಅಂಗಡಿ ಇಟ್ಟು ಕೈ ಸುಟ್ಟುಕೊಂಡರು. ಒಟ್ಟಾರೆ ಬಟ್ಟೆ ಅಂಗಡಿ ವ್ಯಾಪಾರವು ಕೈಕೊಟ್ಟಿತು. ಹೀಗಾಗಿ ವೃತ್ತಿ ಪ್ರವೃತ್ತಿಗಳೆರಡೂ ಒಂದೊಂದು ದಿಕ್ಕಿಗೆ ಸಾಗಬೇಕಾದ ಪ್ರಸಂಗಗಳು ಬಂದೊದಗಿದವು. ತದನಂತರ ಆಲ್ದಾಳರ ಮನಸ್ಸು ಮತ್ತೆ ರಂಗಭೂಮಿಯತ್ತ ಜಾರಿತು.

ಅದೇ ಸಂದರ್ಭದಲ್ಲಿ ರಾಘವೇಂದ್ರ ನಾಟ್ಯಸಂಘ ಬೈಲಹೊಂಗಲವು ಯಡ್ರಾಮಿಯಲ್ಲಿ ಕ್ಯಾಂಪ್ ಹಾಕಿತ್ತು. ಆಗ ಆಲ್ದಾಳರು ಕಡಕೋಳ ಮಡಿವಾಳಪ್ಪನ ನಾಟಕ ಬರೆದುಕೊಟ್ಟು ಪ್ರಯೋಗ ಕಂಡಾಗ ಆಲ್ದಾಳರ ಕೀರ್ತಿ ಗಗನಕ್ಕೇರಿತು. ಯಡ್ರಾಮಿ ಸುತ್ತಲಿನ ಹತ್ತಾರು ಹಳ್ಳಿಗಳಿಂದ ಜನ ನಾಟಕ ನೋಡಲು ಧಾವಿಸುತ್ತಿದ್ದರು. ಆಲ್ದಾಳರನ್ನು ಗೌರವಾದರಗಳಿಂದ ಆ ಭಾಗದ ಜನ ನೋಡಹತ್ತಿದರು. ಈ ನಾಟಕದ ಕೀರ್ತಿಯಿಂದ ಪುಳಕಿತರಾದ ಆಲ್ದಾಳರು ಬಡತನದ ಬದುಕ ಬಂಡಿ ನೂಕಲು ವೃತ್ತಿರಂಗಭೂಮಿಯತ್ತ ಹೆಜ್ಜೆ ಹಾಕಿದರು.

ರಾಘವೇಂದ್ರ ನಾಟ್ಯ ಸಂಘ ಶಿರಸಿ, ಬಸವೇಶ್ವರ ನಾಟ್ಯಸಂಘ ಬೆನಕಟ್ಟಿ, ೧೦೦೮ ಜಗದ್ಗುರು ನಾಟ್ಯಸಂಘ ಮೈಂದರ್ಗಿ, ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ ಸುಳ್ಯ, ಕರ್ನಾಟಕ ಕಲಾಸಂಘ ಯಂಕಂಚಿ ಹೀಗೆ ಹತ್ತು ಹಲವಾರು ನಾಟಕ ಕಂಪನಿಗಳಲ್ಲಿ ಪಾತ್ರಧಾರಿಯಾಗಿ, ರಂಗ ನಿರ್ದೇಶಕರಾಗಿ, ನಾಟಕ ರಚನಾಕಾರರಾಗಿ, ಮಾರ್ಗದರ್ಶಕರಾಗಿ, ಹಾರ್ಮೋನಿಯಂ ಮಾಸ್ತರರಾಗಿ ಸೇವೆ ಸಲ್ಲಿಸಿದರು. ಇಷ್ಟೆಲ್ಲಾ ಕಂಪನಿಗಳಲ್ಲಿ ಸೇವೆ ಸಲ್ಲಿಸುವಾಗ ಶುದ್ಧ ಚಾರಿತ್ರ್ಯ ಶುಭ್ರ ವಸ್ತ್ರಧಾರಿ ಈ ವ್ಯಕ್ತಿ ಪವಿತ್ರವಾಗಿದ್ದರು. ದವಡೆ ಮತ್ತು ತೊಡೆಯ ಮಧ್ಯದಂಗಗಳನ್ನು ನಿಯಂತ್ರಣದಲ್ಲಿಟ್ಟುಕೊಂಡವರು. ಕುಡಿಯುವ, ಸೇದುವ, ಪರನಾರಿಯರ

ಸಂಘ ಇದು ಯಾವುದೇ ಗೊತ್ತಿರಲಿಲ್ಲ. ಆಲ್ದಾಳರು ಎಂದೂ ಯಾವತ್ತೂ ಜಾರಿ ಬಿದ್ದಕೋಣನಾಗಲಿಲ್ಲ. ಆದರೆ ಇವೆಲ್ಲವುಗಳನ್ನು ಮೀರಿ ಬೆಳೆದ ಜಾಣನಾದ ಈ ಪ್ರವೀಣ ನಾಟ್ಯಮಯೂರಿ. ಏಕೆಂದರೆ ಅಂದು ಇಂದು ಎಂದೂ ಬಣ್ಣದ ಬೆಳಕಿನ ಬದುಕಿನಲ್ಲಿ ಅಪ್ಪಟ ಅಪರಂಜಿಯಾಗಿ ಉಳಿದವರು ಕಡಿಮೆ. ಹೀಗೆ ಬದುಕುವುದಕ್ಕೆ ಬಟ್ಟೆ ಮಾರಾಟ ಮಾಡುತ್ತಾ ನಂತರ ರಂಗಭೂಮಿ ಕ್ಷೇತ್ರವನ್ನೇ ಬದುಕಿನ ಕ್ಷೇತ್ರವನ್ನಾಗಿಸಿಕೊಂಡವರು.

# ಬದುಕಿನ ಭಾರ ನೊಗ ಹೊತ್ತರು

ಆಲ್ದಾಳರನ್ನು ಬೆಂಕಿಯಲ್ಲಿ ಅರಳಿದ ಹೂವು ಎನ್ನಬಹುದು. ವೃತ್ತಿರಂಗಭೂಮಿಯಲ್ಲಿ ದುಡಿದು, ಅಲ್ಪಸ್ವಲ್ಪ ಸಿಕ್ಕ ದುಡ್ಡನ್ನು ತಂದು ಸಂಸಾರ ನಿರ್ವಹಣೆ ಮಾಡುತ್ತಿದ್ದರು. ಒಂದೆಡೆ ಹಾಸಿಗೆ ಹಿಡಿದ ತಾಯಿ. ಇನ್ನೊಂದೆಡೆ ಆಲ್ದಾಳರ ಸಂಚಾರಿ ಬದುಕು. ತಿಂಗಳು ಎರಡು ತಿಂಗಳು ನಾಟಕ ಕಂಪನಿಗಳಲ್ಲಿ ದುಡಿಯುತ್ತ ತೆರಳಬೇಕಾಗುತ್ತಿತ್ತು. ಆಲ್ದಾಳರಿಗೆ ಮೂರು ಜನ ಮಕ್ಕಳು. ಮುಮ್ತಾಜ ಬೇಗಂ, ಮಹ್ಮದರಫಿ, ಮಹ್ಮದಶಫಿ. ಇವರಲ್ಲಿ ಮೂರನೆ ಮಗನಾದ ಮಹ್ಮದ ಶಫಿಗೆ ಪೋಲಿಯೋ ಆಗಿ ಅಂಗವಿಕಲನಾದ. ಮೊದಲೆ ಕಷ್ಟ ನಷ್ಟದಲ್ಲಿದ್ದ ಆಲ್ದಾಳರು ಅಲ್ಲಲ್ಲಿ ದುಡ್ಡು ತಂದು ಮಗನ ಚಿಕಿತ್ಸೆ ಮಾಡಿಸಿದರೂ ಗುಣಮುಖನಾಗಲಿಲ್ಲ. ಖಾಯಂ ಅಂಗವಿಕಲನಾಗಿಯೇ ಉಳಿದ ಉಪವಾಸ ವನವಾಸದ ಬದುಕಿನಲ್ಲಿ ಆಸ್ಪತ್ರೆಯ ಖರ್ಚಿಗೆ ಹಣ ಒದಗಿಸುವುದು, ಆಗದಿದ್ದಾಗ ಕೈಚೆಲ್ಲಿ ಕೂಡುತ್ತಾರೆ.

ಆಲ್ದಾಳರು ಹೇಳುವಂತೆ, ಶಿಪ್ಪೆ ಕೆದರಿದಂತೆ ಕೂದಲು ಹೊರಡುತ್ತವೆ ಹಾಗೆ, ನೆನಪಿಸಿಕೊಂಡತೆ ಘಟನೆಗಳು ಮರುಕಳಿಸುತ್ತವೆ. ಬಡತನದಲ್ಲಿ ಬೆಂದ ಆಲ್ದಾಳರ ಬದುಕೊಂದು ನಾಟಕವಾಗುತ್ತದೆ. ೪೫ ನಾಟಕ ಬರೆದ ಈ ನಾಟಕಕಾರನಿಗೆ ತನ್ನ ಬದುಕಿನ ಬವಣೆಯೇ ಕಥಾ ವಸ್ತುವಾಗುತ್ತದೆ. ಬದುಕಿನ ದುರಂತ ಕಹಿ ಘಟನೆಗಳು ಬಡತನ, ಅಪಮಾನ, ಅಲೆದಾಟ, ಹುಡುಕಾಟ, ತಡಕಾಟ, ಶೋಧ, ಸಂಶೋಧನೆಗಳೆ ಅವರ ಸಾಹಿತ್ಯಕ್ಕೆ ವಸ್ತುಗಳಾದವು. ಹಾಗೂ ಅನೇಕ ನಾಟಕಗಳಿಗೆ ಪ್ರೇರಣೆಯಾಯಿತು. ತಿಂದುಂಡು ಐಷಾರಾಮಿ ಬದುಕೊದಗಿದರೆ ಈ ಎಲ್.ಬಿ.ಕೆ. ಆಲ್ದಾಳ ಈ ಮಟ್ಟಿಗೆ ಬೆಳೆಯುತ್ತಿರಲಿಲ್ಲವೇನೋ..?

ಬನ್ನೆಟ್ಟಿಯಲ್ಲಿ ತಂದೆಯ ತಾಯಿ ಅಂದರೆ, ಅಜ್ಜಿ ಇನ್ನೊಬ್ಬರ ತೋಟಕ್ಕೆ ಹೋಗಿ ಕಾಯಿಪಲ್ಯೆ ತಂದು, ಅದನ್ನು ಹೊತ್ತುಕೊಂಡು ಮಾರಿ ಬಂದಾಗಲೇ ಒಲೆ ಹೊತ್ತುವ ಸಂದರ್ಭ. ಆಲ್ದಾಳರು ಅಜ್ಜಿಯೊಂದಿಗೆ ಬೆನ್ನು ಹತ್ತಿ ಕಾಯಿಪಲ್ಯ ಮಾರಿದ್ದನ್ನು ನೆನೆಸಿಕೊಳ್ಳುತ್ತಾರೆ. ಇಂಥ ಬಡತನದಲ್ಲಿ ಗಾವುಂಟಿ ಶಾಲೆಗೆ ಹಾಕಲು ಸಾಧ್ಯವಿರದಿದ್ದರೂ ತಾಯಿ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ತವರು ಮನೆ ಆಲ್ದಾಳಕ್ಕೆ ಬಂದು ನೆಲೆವೂರುತ್ತಾಳೆ.

ಆಲ್ದಾಳರು ಅನೇಕ ಕೆಟ್ಟ ಪ್ರಸಂಗಗಳನ್ನು ನೆನೆಯುತ್ತಾ ಕಂಬನಿ ಮಿಡಿಯುವುದನ್ನು ಕಂಡಿದ್ದೇನೆ. ಆದರೂ ಸಮಸ್ಯೆಗಳಿಗೆ ಧೃತಿಗೆಡದ ಭೀಷ್ಮ ಪಿತಾಮಹ.

ಅನೇಕ ಬಾರಿ ಸಹಾಯ ಮಾಡುತ್ತೇನೆಂದು ಹೇಳಿ ಕೈಕೊಟ್ಟ ಜನರನ್ನು ಪ್ರಸ್ತಾಪಿಸುತ್ತಾರೆ. ಕೂತವರನ್ನು ಎಬ್ಬಿಸಿ ಬೈದುಕಳಿಸಿದ್ದನ್ನು ಆ ವಯೋವೃದ್ಧ ಇನ್ನೂ ಮರೆತಿಲ್ಲ. ನಿನ್ನ ಮಗನ ಆಸ್ಪತ್ರೆಗೆ ಮತ್ತು ನಿನ್ನ ಮಗನ ಮದುವೆಗೆ ಸಹಾಯದ ಆಶಾಗೋಪುರ ತೋರಿಸಿದವರು. ನಿನಗೆ ಯಾತಕ್ಕಾಗಿ ಹಣ ಕೊಡಬೇಕು ನಿನ್ನಿಂದೇನು ಲಾಭ ಎಂದದ್ದು ಇನ್ನೂ ಮಾಸಿಲ್ಲ. ದಿನ ಒಂದಕ್ಕೆ ಉಪವಾಸ, ೪೦ ಕಿ.ಮಿ. ನಡೆದ ದಣಿವು ಇನ್ನೂ ಆರಿಲ್ಲ. ಊಟವಿಲ್ಲದೆ ಬಸ್‌ಸ್ಟ್ಯಾಂಡು, ರೇಲ್ವೇ ಸ್ಟೇಶನ್‌ಗಳಲ್ಲಿ ಮಲಗಿದ್ದು, ದೇಶ ಉದ್ಧಾರ ಮಾಡುವ ಸ್ವಾಮಿಗಳನೇಕರು ಕೆಟ್ಟ ಪದಗಳಿಂದ ನಿಂದಿಸಿದ್ದು, ಜಾತಿ ನಿಂದನೆ ಮಾಡಿ ಮನನೋಯಿಸಿದ್ದು ನೆನಪಿಸಿಕೊಂಡು ಕಣ್ಣೀರಿಡುವ ಈ ಹಿರಿಯ ಅಲ್ಲಾಳರ ಮುಗ್ಧಭಾವ ಕಂಡಾಗ ನಮ್ಮ ಕಣ್ಣಾಲಿಗಳು ತುಂಬುತ್ತವೆ.

ಇಂಥ ನೂರಾರು ಕಹಿ ಘಟನೆಗಳನ್ನು ಹಂಚಿಕೊಳ್ಳುವಾಗ ಮುಖಭಾವದಲ್ಲಿ ಅದೇನೋ ಆತಂಕ, ದುಃಖ ಮಡುಗಟ್ಟುತ್ತದೆ. ತಂದೆಯ ಪ್ರೀತಿ ಗೊತ್ತಿಲ್ಲದ ಅಲ್ಲಾಳರಿಗೆ ಈ ಬಡತನ ಅಪಮಾನ, ಉಪವಾಸ, ನಿಂದನೆ, ಮೋಸಗಳೇ ಇಂದಿನ ಕೀರ್ತಿಪತಾಕೆಗೆ ಸುಖ ಸೋಪಾನಗಳಿಗೆ ನಂದಾದೀಪಗಳಾಗಿವೆ. ನಿಂದಕರಿರಬೇಕು ಜಗದೊಳಗ ಹಂದಿಯಂಗ ಎನ್ನುವ ದಾಸರ ಪದದಂತೆ, ಊರು–ಕೇರಿ ನಮ್ಮ ಮನೆ ಮನ ಎಲ್ಲವೂ ಸ್ವಚ್ಛವಿರುತ್ತದೆ.

# ಬೆನ್ನ ಹಿಂದಿನ ಬೆಳಕು

ಜಗತ್ತಿನಲ್ಲಿ ವ್ಯಕ್ತಿ ಏನನ್ನಾದರೂ ಸಾಧನೆ ಮಾಡಬೇಕಾದರೆ ಅದಕ್ಕೆ ಕೆಲವರ ಪ್ರೋತ್ಸಾಹ ಪ್ರೇರಣೆ ಒತ್ತಾಯ ಮುಖ್ಯವಾಗಿರುತ್ತದೆ. ಪುರುಷನ ಯಶಸ್ವಿಗೆ ಸ್ತ್ರೀ ಕಾರಣಳು ಎಂಬ ಮಾತಿನಂತೆ ಆಲ್ದಾಳರು ರಂಗಸಂತನಾಗಬೇಕಾದರೆ ಅವರ ಧರ್ಮಪತ್ನಿ ಅಮೀನಾರದೆಂಥ ತ್ಯಾಗವಿರಬಹುದು ಊಹಿಸಿ?.

ಸಂಸಾರಿಯಾಗಿಯೂ ರಂಗ ಸಾಧನೆಗೆ ಸಂತನಂತಾದ ಆಲ್ದಾಳರು ಬಣ್ಣ ಹಚ್ಚಿಕೊಂಡು ನಾಟಕ ಕಂಪನಿಗಳೊಂದಿಗೆ ಊರು ಕೇರಿಗಳಿಗೆ, ಮಠ ಮಂದಿರಗಳಿಗೆ ತಿಂಗಳಾದ್ಯಂತ ತಿರುಗುತ್ತಾ ಹೋಗುವ ಸಂಚಾರಿ ಸಂತರು. ಹೀಗಿರುವಾಗ ಮನೆಯ ಹೊಣೆಯನ್ನೆಲ್ಲಾ ಹೆಂಡತಿ ಅಮೀನಾಳ ಮೇಲೆ. ವೃದ್ದೆ ಹಾಗೂ ಅನಾರೋಗ್ಯ ಪೀಡಿತ ಅತ್ತೆ. ಅಂಗವಿಕಲ ಮಗ, ಬಡತನದ ಭೂತ ಇವುಗಳನ್ನು ಸಂಭಾಳಿಸುವದು ಸಣ್ಣ ಮಾತೇನಲ್ಲ. ಕೂಲಿನಾಲಿ ಮಾಡಿ ಬದುಕ ಬಂಡಿ ನೂಕಿದಳು. ಇಂಥ ಸಂದರ್ಭದಲ್ಲೂ ಗಂಡನಿಗೆ ಏನೊಂದು ಹೇಳಿದವಳಲ್ಲ ಆಲ್ದಾಳರೆ ಹೇಳುವಂತೆ ನನ್ನ ಹೆಂಡತಿ ಮತ್ತು ನನ್ನ ತಾಯಿ ಕಲ್ಲಿನ ಖಣಿಗಳಲ್ಲಿ ಕೂಲಿನಾಲಿ ಮಾಡಿ ಮೂರು ಮಕ್ಕಳೊಂದಿಗೆ ಬದಕು ಸಾಗಿಸಿದಳು. ನಾನು ತಂದದ್ದು ಕಡಿಮೆ ಅವರಿಂದ ಪಡೆದದ್ದೆ ಹೆಚ್ಚು. ನನ್ನ ಕಷ್ಟ ಸುಖಗಳಲ್ಲಿ ಭಾಗಿಯಾದ ಹೆಂಡತಿ ನೀವು ಎಲ್ಲಿಗೆ ಹೋಗುತ್ತೀರಿ ? ಎಲ್ಲಿಂದ ಬಂದಿರುವಿರಿ? ಎಂದು ಎಂದೂ ಕೇಳಿದವಳಲ್ಲ. ನನಗೆ ಸೀರೆ ಬೇಕು ಹಣಬೇಕು ಬಂಗಾರ ಬೇಕೆಂದು ಹಠ ಹಿಡಿದವಳಲ್ಲ. ಇದ್ದಷ್ಟರಲ್ಲೆ ಸಂತೃಪ್ತಿ ಜೀವನ ಸಾಗಿಸಿದ ಸಾಧಕಿ. ಕಲ್ಲ ಖಣಿಯಲ್ಲಿ ಕೂಲಿ ಮಾಡಿ ನನಗೆ ಅಲೆದಾಡಲು ಬಸ್ ಚಾರ್ಜಗೆ ಹಣಕೊಟ್ಟ ಅಮೀನಾ ನನ್ನ ಬಾಳಬಂಡಿಗೆ ಹಿರಿಯ ಹೆಜ್ಜೆಗಳನ್ನು ಹಾಕಿದ್ದಾಳೆ.

ಮಗನ ಹೆಂಡತಿ ಅಂದರೆ ಸೊಸೆಯಾದ ಬೀಬಿಫಾತಿಮಾ ವಿನಯ ಸಂಪನ್ನಳು ಅವರಿಗೆ ಮಹ್ಮದ ಶಮೀರ ಮತ್ತು ಮಹ್ಮದ ಶರೀಫ ಎಂಬ ಎರಡು ಗಂಡುಮಕ್ಕಳು. ಆಲ್ದಾಳರಿಗೆ ಇರುವ ಒಬ್ಬಳೇ ಮಗಳು ಅವಳ ಮದುವೆಯಾಗಿದ್ದು ಅಳಿಯ ನಬಿಸಾಬ ಹೆಡಗಿನಾಳ. ಅವರಿಗೂ ಒಬ್ಬ ಮಗ ಬಂದೇನವಾಜ ಹಾಗೂ ಶಮೀರಾ, ಶಕೀಲಾ, ಶಯೀರಾ ಎಂಬ ಮೂರು ಜನ ಹೆಣ್ಣು ಮಕ್ಕಳು.

ಹೀಗೆ ಆಲ್ದಾಳರದು ತುಂಬು ಸಂಸಾರ. ಹೆಂಡತಿ, ಮಕ್ಕಳು, ಸೊಸೆ, ಅಳಿಯ, ಮೊಮ್ಮಕ್ಕಳು. ಜೀವನದಲ್ಲಿ ಒಳ್ಳೆಯ ಹೆಂಡತಿ ಮಕ್ಕಳಿರಲು ಪುಣ್ಯ ಮಾಡಿರಬೇಕು. ಒಳ್ಳೆಯ ಗೆಳೆಯರೂ ಅಪರೂಪ. ೧೧೦ ವರ್ಷ ವಯಸ್ಸಿನ ತಾಯಿ ತೀರಿಕೊಂಡಾಗ

ಆಲ್ದಾಳ ಮಗುವಿನಂತೆ ಅತ್ತಿದ್ದರು. ಏಕೆಂದರೆ ಮದುವೆಯಾದ ಕೆಲವೇ ವರ್ಷಗಳಲ್ಲಿ ಗಂಡನನ್ನು ಕಳೆದುಕೊಂಡು ಅನಾಥ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಬದುಕನ್ನು ಕಟ್ಟಿಕೊಳ್ಳಲು ನೂರು ವಸಂತಗಳು ಅಲೆಯಬೇಕಾಯಿತು. ಆ ಮಹಾತಾಯಿ ಕನ್ನಡದ ವರಕವಿಯನ್ನು ರಂಗ ಸಂತ ಜಂಗಮನನ್ನು ಶರಣಜೀವಿಯನ್ನು ಈ ನಾಡಿಗರ್ಪಿಸಿ ಆಲ್ದಾಳರನ್ನು ಕನ್ನಡಿಗರ ಉಡಿಯಲ್ಲಿ ಹಾಕಿ ಈ ಲೋಕ ತ್ಯಜಿಸಿದಳು. ಸತ್ತ ಮೇಲೂ ಆ ತಾಯಿಗೆ ಸಂಕಷ್ಟ ಕೈಬಿಡಲಿಲ್ಲ. ಮುಸ್ಲಿಂ ಸಮಾಜದವರು (ಜಮಾತ್) ಮಸೀದಿಗೆ ಇನ್ನಾವುದೇ ಧಾರ್ಮಿಕ ಕಾರ್ಯಗಳಿಗೆ ಚಂದಾ ನೀಡಿಲ್ಲವೆಂದು ಖಬರಸ್ತಾನ್‌ನಲ್ಲಿ ಅಂತ್ಯಸಂಸ್ಕಾರ ಮಾಡಲು ತಡೆಯೊಡ್ಡಿದಾಗ ಇಡೀ ಊರ ಪ್ರಮುಖರ ಮಧ್ಯಸ್ಥಿಕೆಯಿಂದಾಗಿ ಅಂದು ಅಂತ್ಯ ಸಂಸ್ಕಾರ ನೇರವೇರಿತು. ಇದನ್ನು ಕಂಡ ಆಲ್ದಾಳ ಕವಿ ಮನ ತುಡಿಯಿತು. ಐದು ಹೊತ್ತು ನಮಾಜು ಮಾಡಿದರೇನು ಫಲ ಒಳಗಿನ ಗಲೀಜು ತೊಳೆಯದಿದ್ದರೇ ಎಂಬುದು ಆಲ್ದಾಳರ ನುಡಿಯಾಯಿತು.

ಸದ್ಯ ಆಲ್ದಾಳರು ಸುಖವಾಗಿದ್ದಾರೆ. ಮೊದಲಿನ ಬಡತನ ತೊಂದರೆ ಈಗಿರುವದಿಲ್ಲ ಕಷ್ಟದ ದಿನಗಳು ಕ್ರಮೇಣ ಮೇಣದಂತೆ ಕರಗಿ ಹೋಗಿವೆ. ವಿಶ್ವಾರಾಧ್ಯ ಮಹಾತ್ಮೆ, ಅಳ್ಳಳ್ಳಿ ಅಯ್ಯಪ್ಪಯ್ಯ ಮಹಾತ್ಮೆ, ಹಾರಕೂಡ ಚನ್ನಬಸವ ಶಿವಯೋಗಿ, ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ, ಯಾರ ತಾಳಿ ಯಾರ ಕೊರಳಿಗೆ ಎಂಬ ಐದು ನಾಟಕಗಳು ಆಲ್ದಾಳರ ಕಷ್ಟದ ಬಡತನದ ದಿನಗಳನ್ನು ಹಿಂದೆ ಸರಿಸಿದವು. ಈ ನಾಟಕಗಳು ಹಣ ಗುಣ ಎರಡೂ ತಂದು ಕೊಟ್ಟವು. ಎಲ್.ಬಿ.ಶೇಖ ಮಾಸ್ತರರು ತುಂಬಾ ಸಹಾಯ ಸಹಕಾರ ಮಾಡಿದ್ದನ್ನು ಆಲ್ದಾಳರು ಮನಸಾರೆ ಸ್ಮರಿಸುತ್ತಾರೆ.

ಈಗ ಆಲ್ದಾಳರಿಗೆ ರಾಜ್ಯೋತ್ಸವ ಪ್ರಶಸ್ತಿ, ನಾಟಕ ಅಕಾಡೆಮಿ ಸದಸ್ಯತ್ವ, ಗುಬ್ಬಿ ವೀರಣ್ಣ ಪ್ರಶಸ್ತಿ, ಅಭಿನಂದನಾ ಕಾರ್ಯಕ್ರಮ, ಸನ್ಮಾನ ಮತ್ತು ಪ್ರಶಸ್ತಿಗಳ ಜೊತೆ ಅಪಾರ ಮೊತ್ತದ ಅಭಿಮಾನದ ಹಣ ಸಂಗ್ರಹವಾಗಿರುವದು. ಸುಖದ ಸೋಪಾನಕ್ಕೆ ಈ ಎಲ್ಲಾ ಪ್ರಶಸ್ತಿ, ಪುರಸ್ಕಾರಗಳು, ಹಮ್ಮಿಣಿಗಳು ನಂದಾದೀಪಗಳಾದವು. ಅಲೆಮಾರಿ ಸಂಚಾರಿ ಬದುಕಿದ್ದಾಗ ಆಲ್ದಾಳರಿಗೆ ಕಷ್ಟ ಅವಮಾನ, ಬಡತನಗಳೇ ಸುಖದ ಸೋಪಾನದ ನಂದಾದೀಪಗಳೆಂದು ಆಲ್ದಾಳರು ಹೇಳಿಕೊಂಡಿದ್ದನ್ನು ಸ್ಮರಿಸಲೇಬೇಕಾಗುತ್ತದೆ.

ಹೀಗೆ ಆಲ್ದಾಳರ ಬದುಕು ನಮಗೆ ಪ್ರೇರಣೆ ನೀಡುತ್ತದೆ. ಸಾಧನೆ ಶೋಧನೆಗೆ ಧೃತಿ ತುಂಬುತ್ತದೆ. ಅನೇಕ ಕಷ್ಟ ತೊಂದರೆಗಳನ್ನು ಬಂಡೆಗಲ್ಲಿನಂತೆ ಧುತ್ಕರಿಸಿದರು. ಸಾಧನೆಯ ಹಾದಿಯಲ್ಲಿ ಮುನ್ನುಗ್ಗಿದರು. ಹುಟ್ಟಿದ್ದೆ ಬಡತನದಲ್ಲಿ, ಚಿಕ್ಕ ಬಾಲಕನಿರುವಾಗಲೇ ತಂದೆಯ ಸಾವು. ಬನ್ನಟ್ಟಿಯಲ್ಲಿ ತಾಯಿಯೊಂದಿಗೆ ಅಜ್ಜಿಯೊಂದಿಗೆ ಊಟಕ್ಕೂ ಗತಿಯಿಲ್ಲದಾಗ ತಾಯಿಯ ತವರುಮನೆ ಆಲ್ದಾಳಕ್ಕೆ ಬಂದು ಬಾಲ್ಯವರಳುತ್ತದೆ. ಅಲ್ಲಿಯೂ ಖಾಯಂ ಇರದೆ ಮಳ್ಳಿ, ಬಾಂಬೆ ಹೀಗೆ ಅಲೆದದ್ದೇ ಅಲೆದದ್ದೂ.

ಇಂಥ ಕನ್ನಡದ ಹೆಮ್ಮೆಯ ಪುತ್ರ ಆಲ್ದಾಳರಿಗೆ ಈಗ ಬಡತನ ದೂರವಾದಂತೆ. ಸಿರಿತನದೊಂದಿಗೆ ಕೀರ್ತಿಯ ಹಿರಿತನವೂ ಅಧಿಕವಾಗಿದೆ. ಕಳೆದ ೨೦೧೩ ರಲ್ಲಿ ನಡೆದ ೧೩ನೇ ಕಲಬುರಗಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ

ದೊರಕಿದ್ದು ಜೇವರ್ಗಿ ತಾಲೂಕಿಗೆ ಸಂದ ಗೌರವ. ಗುಬ್ಬಿವೀರಣ್ಣ ಪ್ರಶಸ್ತಿ ಪ್ರತಿಷ್ಠೆಯ ಪ್ರತೀಕ. ಅಷ್ಟೇ ಅಲ್ಲ, ರಂಗಭೂಮಿಗೆ ಸಂದ ಬಹು ದೊಡ್ಡ ಗೌರವ. ಯಾಕೆಂದರೆ, ಅದೂವರೆಗೂ ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಮ್ಮೇಳನಗಳಲ್ಲಿ ರಂಗಭೂಮಿಯಲ್ಲಿ ದುಡಿದವರಿಗೆ ಸಮ್ಮೇಳನದ ಅಧ್ಯಕ್ಷತೆಯ ಗೌರವ ಕೊಟ್ಟಿರಲಿಲ್ಲ. ಹೀಗಾಗಿ, ನಾಟಕಕಾರನಿಗೆ ಸಿಕ್ಕ ಈ ಗೌರವ ಅದು ರಂಗ ಕ್ಷೇತ್ರಕ್ಕೆ ಲಭಿಸಿದ ನಿಜದ ಗೌರವ ಎಂದೇ ಭಾವಿಸಲಾಗುತ್ತದೆ. ಸಮ್ಮೇಳನಾಧ್ಯಕ್ಷತೆಯ ಗೌರವದ ಜೊತೆಗೆ ಒಂದು ಲಕ್ಷ ರೂಪಾಯಿ ಹಮ್ಮಿಣಿಯನ್ನು ನೀಡುವ ಮೂಲಕ ಕ.ಸ.ಪಾ. ಜಿಲ್ಲಾ ಘಟಕ ಅಭಿಮಾನದ ಗೌರವ ಸಲ್ಲಿಸಿತು.

ಕೀರ್ತಿ ಹಣ ಎರಡನ್ನು ಕಂಡ ಆಲ್ದಾಳರಿಗೆ ಯಾವುದೇ ಹಮ್ಮುಬಿಮ್ಮುಗಳಿಲ್ಲ. ಅದೇ ಸರಳತನ, ಶರಣತನ, ದೊಡ್ಡತನ, ಹಿರಿತನ ಮರೆತಿಲ್ಲ. ಬಂಗಾರ ತಲೆ ಮೇಲೆ ಸುರಿದರೂ ಅಚಲ ಮನದ ಮಂದಾರ ಆಲ್ದಾಳ. ಇವರ ಬರಹಕ್ಕೆ ಪ್ರೇರಣೆಯಾಗಿದ್ದು ಬೆಂದ ಬದುಕಲ್ಲದೇ ಮತ್ತೇನು..?

# ಕಣ್ಣಿಗೆ ಕಾಣದಾ ನಾಟಕಕಾರ...
# ನಿನಗೆ ನನ್ನ ನಮಸ್ಕಾರ...

ಲಾಲ್ ಮಹ್ಮದ ಬಂದೇನವಾಜ ಖಲೀಫರ ಬಾಲ್ಯದ ನೆಲ ಸುರಪೂರ ತಾಲೂಕಿನ ಆಲ್ದಾಳ ಗ್ರಾಮ. ಆದ್ದರಿಂದ ಆಲ್ದಾಳ ಮಾಸ್ತರ ಆಲ್ದಾಳ ಕವಿಗಳೆಂದೇ ಚಿರಪರಿಚಿತರು. ಲಾಲಮಹ್ಮದರಿಂದ ಆಲ್ದಾಳ ಗ್ರಾಮಕ್ಕೂ ನೆಲೆ ಬೆಲೆ ಬಂದಿತು.

ಆಲ್ದಾಳದ ಮುರ್ತುಜಾಗೌಡರರದು ಮಾಲಿಪಟೇಲತನ ಇತ್ತು.. ಇವರು ಶರಣ ಸಂಪ್ರದಾಯದವರು ಇವರ ತಮ್ಮ ನಬೀಗೌಡರು ಆಧ್ಯಾತ್ಮ ಜೀವಿಗಳು. ಅನುಭಾವಿಗಳು. ತತ್ವಪದಕಾರ ಮುರ್ತುಜಾಗೌಡರ ಮಗಳು ಹುಸೇನಬೀಯವರನ್ನು ಸಿಂದಗಿ ತಾಲೂಕಿನ ಬನ್ನೆಟ್ಟಿಯ ಖಲೀಫ್ ಮನೆತನದ ನಭಿಸಾಬರ ಮಗ ಬಂದೇನವಾಜ (ಎಲ್.ಬಿ.ಕೆ ಆಲ್ದಾಳರ ತಂದೆ)ರಿಗೆ ಕೊಟ್ಟು ಮದುವೆ ಮಾಡಿ ಕೊಡಲಾಗಿತ್ತು.

ಹುಸೇನಬಿ ಬಂದೇನವಾಜರ ಉದರದಿಂದ ೫–೧೧–೧೯೩೪ ರಂದು ಲಾಲಮಹ್ಮದರ ಜನನವಾಯಿತು. ಇವರ ತಂದೆ ಜಗಜಟ್ಟಿಯಂತಿದ್ದರು. ತುಂಬಿದ ಜೋಳದ ಚೀಲದ ಮೇಲೊಬ್ಬನನ್ನು ಕೂಡ್ರಿಸಿಕೊಂಡು ವಿಜಾಪೂರದ ಉಪ್ಪಲಿ ಬುರುಜು ಏರಿದ ಬಗ್ಗೆ ಮಾಹಿತಿ ಇದೆ. ಇಂಥ ಗಟ್ಟಿಮುಟ್ಟಾದ ಆರೋಗ್ಯವಂತನನ್ನು ಶಿವ ಕರುಣೆತೋರದೆ ತನ್ನತ್ತ ಕರೆದುಕೊಂಡ. ಲಾಲಮಹ್ಮದ ಮೂರು ವರ್ಷದ ಹಸುಳೆ. ಚಿಕ್ಕಪ್ರಾಯದಲ್ಲೆ ವಿಧವೆಯಾದ ಮಗಳು ಹುಸೇನಬಿಯನ್ನು ಕರೆದುಕೊಂಡು ಮುರ್ತುಜಾಗೌಡರು ಆಲ್ದಾಳಕ್ಕೆ ಬಂದರು. ಅಲ್ಲಿಯೇ ಆಲ್ದಾಳರ ಬಾಲ್ಯ ಅರಳಿತು. ತನ್ನೂರು ಬನಹಟ್ಟಿಗೆ ಆಗಾಗ ಅಜ್ಜಿಯಲ್ಲಿಗೆ ಹೋಗಿ ಬರುತ್ತಿದ್ದರು. ಆಲ್ದಾಳದಲ್ಲೆ ಪ್ರಾಥಮಿಕ ಶಿಕ್ಷಣ ಪ್ರಾರಂಭ ಸುರಪೂರದ ಶಮ್‌ಶೇರಪುರ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಂದುವರೆಯಿತು. ಏಳನೇ ತರಗತಿಯ ಪರೀಕ್ಷೆ ಸಮಯದಲ್ಲೆ ಎರಡೂ ಕಾಲುಗಳಿಗೆ ನಾರುಗಳಾದ್ದರಿಂದ ಪರೀಕ್ಷೆ ಕಟ್ಟಲಾಗಲಿಲ್ಲ. ಶಹಾಪೂರ ತಾಲೂಕಿನ ಆಲ್ದಾಳದಲ್ಲಿರುವ ಹಿರಿಯ ಸೋದರಮಾವ ಸುಲ್ತಾನಗೌಡರ ಮಗಳು ಅಮೀನಬಿಯವರನ್ನು ಕೈಹಿಡಿದರು.

ಜೇವರ್ಗಿ ತಾಲೂಕಿನ ಮಳ್ಳಿ ಲಾಲ್ ಮಹ್ಮದರ ಚಿಕ್ಕಮ್ಮ ಸುಲ್ತಾನಬಿಯ ಊರು. ಹಾಗೆಯೇ ಹೆಂಡತಿ ಅಮೀನಬಿಯವರ ತಾಯಿಯ ತವರೂರು ಕೂಡಾ. ಹೀಗಾಗಿ ಕಾಲ ಕ್ರಮೇಣ ಆಲ್ದಾಳರು ಚಿಕ್ಕಮ್ಮನ ಆಸರೆಗೆ ಬಂದರು. ತಾಯಿಗಿಂತ ಒಂದು ತೂಕ

ಹೆಚ್ಚು ಕಕ್ಕುಲಾತಿ ತೋರಿದಳು ಚಿಕ್ಕಮ್ಮ ಎಂದು ಆಲ್ದಾಳರು ಹೇಳುತ್ತಿರುತ್ತಾರೆ.

ಗುರುಗಳ ಪ್ರಭಾವ ಕೂಡಾ ಆಲ್ದಾಳ ಗ್ರಾಮದಲ್ಲಿ ಲಾಲ್ ಮಹ್ಮದರ ಮೇಲಾಯಿತು. ಶೇಷಾಚಾರ್, ಮಧುರಂಗಾಚಾರ್, ಚಿದಾನಂದ ಭಟ್, ಗೋಪಾಲರಾವ್, ಈ ನಾಲ್ವರು ಗುರುಗಳು ಶಿಸ್ತುಬದ್ಧ ಜೀವನ, ಕರ್ತವ್ಯನಿಷ್ಠೆ, ಸಮಯಪ್ರಜ್ಞೆ, ಮನಮುಟ್ಟುವಂತೆ ಬೋಧಿಸುವ ವಿಷಯಗಳೆಲ್ಲ ಬಾಲಕ ಲಾಲ್ ಮಹ್ಮದರ ಮೇಲೆ ಅಗಾಧ ಪ್ರಭಾವ ಬೀರಿದವು.

ಹೀಗೆ ಎಲ್.ಬಿ.ಕೆ. ಆಲ್ದಾಳರ ರಕ್ತದಲ್ಲಿ ಸಾಹಿತ್ಯದ ಸಂಚಾರವಾಗಲು ವಂಶವಾಹಿನಿ ಕಾರಣೀಭೂತವಾಗುತ್ತದೆ. ಇವರ ಅಜ್ಜ ಹಾಗೂ ಸೋದರ ಮಾವಂದಿರು ಗೌಡರಾಗಿದ್ದರೂ ಶರಣ ಜೀವಿಗಳು. ಶರಣ ಸಂಪ್ರದಾಯದ ಮನೆತನ ಪ್ರಭಾವ ಬೀರಿತ್ತು. ಅವರ ಪೂರ್ವಜರು ತತ್ವಪದಕಾರರಾಗಿದ್ದರು, ಅನುಭಾವಿಗಳಾಗಿದ್ದರು, ನಾಟಕ ಮಾಡಿಸುತ್ತಿದ್ದರು. ಹಾಡುತ್ತಿದ್ದರು. ಈ ರೀತಿ ಪೂರ್ವಜರ ರಕ್ತದಿಂದ ಹರಿದು ಬಂದ ಸಾಹಿತ್ಯವಾಹಿನಿ ಜಲಪಾತವಾಗಿ ಧುಮುಕಿತು ಎಲ್.ಬಿ.ಕೆ ಆಲ್ದಾಳರ ನೂರು ಕೃತಿಗಳಲ್ಲಿ.

ಆಲ್ದಾಳರ ಬೆನ್ನಿಗಂಟಿದ ಶಾಪವೆಂದರೆ ಊರೂರು ಅಲೆಯುವುದು. ನಾಟಕ ಕಂಪನಿಗಳಲ್ಲಿ ರಂಗ ಪ್ರಯೋಗದ ಸಂಘಟನೆಗಾಗಿ ತಿರುಗಿದ್ದು ಔಚಿತ್ಯಪೂರ್ಣವಾದದು. ಅದೇ ರೀತಿ ಆಲ್ದಾಳರು ಮಠಗಳಿಗೆ ಅಲೆಯುವುದು ಜೀವನ ಕ್ರಮವಾಯಿತು. ಮಠಗಳಲ್ಲಿ ಪ್ರಸಾದ ಹೊಡೆದು ಗಡದ್ದಾಗಿ ಮಲಗಲಿಲ್ಲ. ಅಲ್ಲಿ ಅವರ ಮನ ಏನನ್ನೆ ಕಂಡಿತು. ಏನನ್ನೋ ಶೋಧಿಸಿತು ಸಂಶೋಧಿಸಿತು. ಮಠಗಳಲ್ಲಿಯ ಪರಂಪರೆ ಮತ್ತು ಪರಂಪರಾಗತ ಸಾಂಸ್ಕೃತಿಕ ಧಾರ್ಮಿಕ, ಸಾಹಿತ್ಯಿಕ, ಐತಿಹಾಸಿಕ ಸದಾಚಾರಗಳ ಕುರಿತು ಕೇಳಿ ಮಾಹಿತಿ ಸಂಗ್ರಹಿಸಿ ನಾಟಕ, ಕೀರ್ತನೆ, ಚರಿತ್ರೆ, ವಚನ, ನಾಮಾವಳಿಗಳ ಮೂಲಕ ನಾಡಿನ ಹಸಿದ ಮನಗಳಿಗೆ ಉಣಬಡಿಸಿ ಆಧ್ಯಾತ್ಮಿಕ ಹಸಿವನ್ನು ಹಿಂಗಿಸಿದರು ಆಲ್ದಾಳರು.

ಘಟದಿಂದ ಮಠ ಬೆಳಗಬೇಕಯ್ಯ  
ಮಠದಿಂದ ಘಟ ಬೆಳಗಬಾರದು ॥  
ಘಟಮಠ ಗಟ್ಟಿಗೊಂಡಲ್ಲಿ  
ದಾಸೋಹಭಾವ ಸಮನಿಸುವದಯ್ಯ ॥

ನಾಡಿನ ನೂರಾರು ಮಠಗಳಿಗೆ ಅಲೆದದ್ದು ಸ್ವಾರ್ಥಕ್ಕಿಂತ ಪರಾರ್ಥ ಪಾರಮಾರ್ಥದ ಹಸಿವೆ ಪ್ರಧಾನವಾಗಿತ್ತು. ಅಲ್ಲಿಯ ಧರ್ಮ ಸಂಸ್ಕೃತಿಯನ್ನು ಅಕ್ಷರಿಸಿದ ಆಲ್ದಾಳರು ಮಠಗಳನ್ನೆ ಆಶ್ರಯ ತಾಣಗಳಾಗಿಸಿಕೊಂಡರು. ಅಲ್ಲಿಯ ಪ್ರೀತಿ ವಿಶ್ವಾಸ ನಂಬಿಕೆಗಳನ್ನು ಜನರ ಹತ್ತಿರಕ್ಕೆ ತಂದರು. ವೀರಶೈವ ಲಿಂಗಾಯತ ಧರ್ಮ ಸಿದ್ಧಾಂತಗಳನ್ನು ಅಧ್ಯಯನಗೈದು ಪಾಂಡಿತ್ಯ ಪಡೆದು ಸಾಹಿತ್ಯ ಮುಖೇನ ಜನರಿಗೆ ನೀಡಿದರು. ಆಶುಕವಿ ಆಲ್ದಾಳರು ಅನಿಸಿದ್ದನ್ನು ತಿಳಿದಿದ್ದನ್ನು ತಿಳಿದುಕೊಂಡಿದ್ದನ್ನು

ಬರೆದರು. ಅದು ನಾಟಕವಾಯಿತು ಚರಿತ್ರೆಯಾಯಿತು. ನಾಮಾವಳಿಯಾಯಿತು. ವಚನವಾಹಿನಿಯಾಯಿತು. ಕುರಾನ್ ಸಂಸ್ಕೃತಿಯಿಂದ ಬಂದರೂ ಪುರಾಣ ಸಂಸ್ಕೃತಿಯನ್ನು ಮೆರೆದರು.

ಹಲವಾರು ಮಠಗಳ ಶ್ರೇಯೋಭಿವೃದ್ಧಿ ಆಲ್ದಾಳರಿಂದಾಯಿತು. ಮೂಲೆಗುಂಪಾದ ಕೆಲ ಮಠಗಳನ್ನು ಸಾಹಿತ್ಯದ ಮೂಲಕ ನಾಡಿಗೆ ಪರಿಚಯಿಸಿದರು. ಪ್ರತಿಯಾಗಿ ಆಲ್ದಾಳರು ತಮ್ಮ ಬದುಕನ್ನು ಮಠದ ಅಂಗಳದಲ್ಲಿ ಅರಳಿಸಿಕೊಂಡರು. ಮಠದಂಗಳದ ಈ ಹೂವು ಶವಶೃಂಗಾರಕ್ಕಲ್ಲ ಶಿವಶೃಂಗಕ್ಕೆ ಅರ್ಪಿತವಾಯಿತು. ಈ ಹೂವು ಹುಡಿಯಿಂದ ಮೇಲೆದ್ದು ದೇವರಿಗರ್ಪಿತವಾದದ್ದು ಸಧ್ಯದ ಮಠದೊಡೆಯರಿಗೆಲ್ಲ ಅಪಾರ ಖುಷಿ. ಆಲ್ದಾಳರ ಕೀರ್ತಿ ಶ್ರೇಯಸ್ಸು ಮಠದ ಶ್ರೇಯಸಲ್ಲವೆ? ಎಂದು ಬಗೆದ ಬಹುತೇಕ ಸ್ವಾಮಿಜಿಗಳು ಆನಂದ ಸಂಪನ್ನರಾಗಿ ಮಾಧ್ಯಮಗಳಿಗೆ ಪ್ರತಿಕ್ರೀಯಿಸಿದ್ದು ಒಳ್ಳೆಯ ಬೆಳವಣಿಗೆ.

ಆಲ್ದಾಳರು ಮುಸ್ಲಿಂ ಧರ್ಮದಲ್ಲಿ ಹುಟ್ಟಿದ್ದರೂ ವೀರಶೈವ ಸಿದ್ಧಾಂತ ಲಿಂಗಾಯತ ಸಿದ್ಧಾಂತ ಮತ್ತು ಮಠಗಳ ಪರಂಪರೆಯ ತೆಕ್ಕೆಗೆ ಬಿದ್ದು ಸಂಸ್ಕೃತಿ ಮತ್ತು ಮಾನವ ಧರ್ಮದ ಪುನರುಥ್ಥಾನಕ್ಕೆ ಸಾಹಿತ್ಯ ಸೇವೆಯ ಮುಖೇನ ಶ್ರಮಿಸಿದ ಶರಣ ಜೀವಿ ಈ ವೀರ ಶೈವ ಕವಿ. ಎತ್ತಣ ಮಾಮರ ಎತ್ತಣ ಕೋಗಿಲೆ ಎಂದು ಹುಬ್ಬೆರಿಸಿದವರೆಷ್ಟೋ ಜನ ಮೂಕಸ್ಮಿತರಾಗಿದ್ದಾರೆ. ಇವರ ಕನ್ನಡ ಸಾಹಿತ್ಯದ ಮೇರು ಕೃತಿಗಳ ಮಹಿಮೆಯನ್ನು ಕೊಂಡಾಡಿದ್ದಾರೆ.

ಯಾವ ಮಠಕ್ಕೆ ಹೋದರು ಸುಮ್ಮನೆ ಕುಳಿತು ಉಂಡು ಬಂದವರಲ್ಲ. ಅಲ್ಲಿ ಏನನ್ನಾದರೂ ಸಾಧಿಸಿ ಸೈ ಎನಿಸಿಕೊಂಡು ಬಂದವರು. ಮಠದಂಗಳದಲ್ಲಿ ಹೂವಿನ ಬಳ್ಳಿ ಬೆಳೆಸಿ ಆಧ್ಯಾತ್ಮದ ಪರಿಮಳ ಸೂಸಿದರು ವಿನಹ ಮುಳ್ಳಿನ ಕಂಟಿ ಬೆಳೆಸಲಿಲ್ಲ. ಯಾವ ಮಠದಲ್ಲಿ ಹೆಜ್ಜೆ ಇಟ್ಟರೂ ಅಲ್ಲಿ ಪ್ರೀತಿ ವಿಶ್ವಾಸ ಬೆಳೆಸಿಕೊಂಡು ಬಂದವರು. ಶರಣ ಸಂಸ್ಕೃತಿಗೆ ಒಗ್ಗಿಕೊಂಡರು. ಮಠಗಳು ಇವರ ಪಾಲಿಗೆ ದೈವಗಳು. ಆಲ್ದಾಳರನ್ನು ಮಾನವ ಧರ್ಮಿಯನ್ನಾಗಿ ರೂಪಿಸಿದ ಕಾರ್ಯಗಾರಗಳೆನ್ನಬಹುದು.

ಪ್ರತಿಯಾಗಿ ಮಠಗಳು ಆಲ್ದಾಳರಿಗೆ ಮಾಡಿದ್ದೇನು? ಅವರ ಸಾಹಿತ್ಯ ಪ್ರೇರಣೆಯು ಚಿಲುಮೆಗಳಾದವೇ? ಅವರ ಬಡ ಬದುಕಿಗೆ ಊರುಗೋಲುಗಳಾದವು. ಬಡತನವನ್ನು ಬೆನ್ನಿಗಂಟಿಕೊಂಡು ಕಂಗೆಟ್ಟು ತಿರುಗುವಾಗ ನೆಲೆ ನೀಡಿ ಆಶ್ರಯ ನೀಡಿ ಅನ್ನ, ವಸ್ತ್ರ, ಅದಮ್ಯ ಧೈರ್ಯ ನೀಡಿ ಉತ್ಸಾಹ, ಪ್ರೋತ್ಸಾಹದ ಸಂಜೀವಿನಿಗಳೆಂದರೆ ಮಠಗಳು ಮಠದೊಡೆಯರು. ಆಲ್ದಾಳರು ಮಠಗಳಲ್ಲಿಯೇ ಬದುಕನ್ನು ಅರಳಿಸಿದರು. ಬದುಕನ್ನು ಕಟ್ಟಿಕೊಂಡರು. ಆಧ್ಯಾತ್ಮಿಕವಾಗಿ ಗಟ್ಟಿಯಾದರು ಜಟ್ಟಿಯಾದರು. ಮಠದೊಡೆಯರು ಆಲ್ದಾಳರ ಬದುಕಿಗೆ ನಂದಾದೀಪವಾದರು. ಈ ಬೆಳಕಿನಲ್ಲಿ ಬಾಳನ್ನು ಬೆಳಗಿಸಿಕೊಂಡರು. ಆಧ್ಯಾತ್ಮ ಸಾಹಿತ್ಯ ದ ಮಾರ್ಗವನ್ನು ಕಂಡುಕೊಂಡರು ಆ ಗುರುಕರುಣೆ ಕೃಪಾಶಿರ್ವಾದದಿಂದಲೆ ರಂಗ ಸಾಮ್ರಾಟ, ರಂಗದಿಗ್ಗಜನೆನಿಸಿಕೊಂಡ ಆಲ್ದಾಳರು ೭೫ ರ ಗಡಿಯಲ್ಲಿ ೧೦೦ ಕೃತಿಗಳನ್ನು ರಚಿಸಿ ಅಮರರಾಗಿದ್ದಾರೆ.

ಮಠದೊಡೆಯರ ಸಹಾಯ ಸಹಕಾರವನ್ನು ನೆನೆದು ಉಪಕೃತರಾಗಿದ್ದಾರೆ. ಅವರ ಬದುಕಿನಲ್ಲಿ ವಿಶೇಷವಾಗಿ ಮರೆಯದೇ ಇರುವ ಆರು ಮಠಗಳೆಂದರೆ ಇವರು ನೀರು, ನೆಲ, ನೆರಳು ನೀಡದ್ದಲ್ಲದೆ ಇಡೀ ಕುಟುಂಬದ ಆರ್ಥಿಕ ಹೊರೆಯನ್ನು ನಿರ್ವಹಿಸಿದರು.

೧. ಶಕಾಪೂರದ ತಪೋವನ ಮಠದ ಶ್ರೀ ಷ.ಬ್ರ. ಸಿದ್ಧರಾಮ ಶಿವಾಚಾರ್ಯರು

೨. ಹಾರಕೂಡ ಚನ್ನಬಸವ ಶಿವಯೋಗಿ ಮಠದ ಶ್ರೀ ಚನ್ನವೀರ ಶಿವಾಚಾರ್ಯರು

೩. ಶ್ರೀನಿವಾಸ ಸರಡಗಿ ಮಠದ ಷ.ಬ್ರ. ರೇವಣಸಿದ್ಧ ಶಿವಾಚಾರ್ಯರು

೪. ನಾಲವಾರ ಕೋರಿಸಿದ್ದೇಶ್ವರ ಮಠದ ಷ.ಬ್ರ. ಉಪಾಚಾರ್ಯ ರತ್ನ ಡಾ. ಸಿದ್ಧ ತೋಟೇಂದ್ರ ಶಿವಾಚಾರ್ಯರು

೫. ಅಖಂಡೇಶ್ವರ ಮಠ ಜೇವರ್ಗಿ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು

೬. ಚರಬಸವೇಶ್ವರ ಮಠ ಶಹಾಪೂರ

ಇವರಲ್ಲದೆ ಅನೇಕ ಮಠಗಳ ಸಹಾಯವನ್ನು ಆಲ್ದಾಳರು ನೆನೆಯುತ್ತಾರೆ. ಮನದಲ್ಲಿ ಉಪಕೃತರೂ ಆಗಿದ್ದಾರೆ. ಅವರ ಸ್ಮರಣೆಯ ಮಠಗಳೆಂದರೆ ಅಬ್ಬೆ ತುಮಕೂರ ಮಠ, ಜೇವರ್ಗಿಯ ಷಣ್ಮುಖ ಶಿವಯೋಗಿ ಮಠ, ಯಲಗೋಡ ಮಠ, ಕಡಕೋಳದ ಮಹಾಂತ ಮಠ, ಮಳ್ಳಿಯ ಗಂಗಾಧರ ಮಠ, ಹೊನ್ನಳ್ಳಿಯ ಮಡಿವಾಳೇಶ್ವರ ಮಠ, ಚಿನ್ಮಯಗಿರಿ ಮಹಾಂತೇಶ್ವರ ಮಠ, ವೆಂಕಟೇಶ್ವರ ಮಠ ಕುಮಸಗಿ, ಮಹಾತ್ಮಾ ಪೀಠ ಅಳ್ಳೊಳ್ಳಿ, ಮೋರಟಗಿಯ ನೂರಂದೇಶ್ವರ ಮಠ, ಸುಕ್ಷೇತ್ರ ಪಾಳಾ ಮಠ, ಮಹಾಗಾಂವ ಮಠ, ಮುಗಳನಾಗಾವಿ ಮಠ, ಕಿರಣಗಿ ಮಠ, ಎಲಿರಾಚೋಳಿ ಮುರುಘೇಂದ್ರ ಮಠ, ಮಳಖೇಡದ ಕಾರ್ತಿಕೇಶ್ವರ ಮಠ, ಸೈದಾಪೂರ ಮಠ ಹೀಗೆ ಸಗರನಾಡಿನ ಎಲ್ಲ ಮಠಗಳ ಸೇವೆ ಮತ್ತು ಸಹಾಯವನ್ನು ಮರೆಯಲಾದೀತೆ?

ಹಸಿದ ಹೊಟ್ಟೆಗೆ ಪ್ರಸಾದ ಖಾಲಿ ಕೈಗೆ ಶುದ್ಧ ಕಾಯಕ ಗೌರವಕ್ಕೆ ವಸ್ತ್ರ, ಹೃದಯಕ್ಕೆ ಸಾಂತ್ವನ, ಮನಕ್ಕೆ ತಂಪೆರಗಿದ ಮಾತೃ ಹೃದಯಿ ಮಾತೃಸ್ವರೂಪಿ ಮಠಾಧೀಶರಿಗೆಲ್ಲ ತಲೆಬಾಗಿ ಶರಣು ಶರಣುಗಳನ್ನು ಸಲ್ಲಿಸುವ ರೀತಿ ಆಲ್ದಾಳರ ವಿನಯ ಶ್ರದ್ಧೆ ಎತ್ತಿ ತೋರಿಸುತ್ತದೆ. ಹೀಗಾಗಿಯೇ ಅವರಲ್ಲಿರುವ ನಾಟಕಕಾರನಿಗೆ ನಮಸ್ಕಾರ ಎಂಬುದು ಔಚಿತ್ಯವಲ್ಲವೇ?

# ಜಗವೆಲ್ಲ ನಗುತಿರಲಿ... ಜಗದಳವು ನನಗಿರಲಿ...

ಜಗವೆಲ್ಲ ನಗುತಿರಲಿ

ಜಗದಳವು ನನಗಿರಲಿ

ನಾ ನಕ್ಕು ಜಗದಳವು

ನೋಡಬಹುದೇ ?

ನಾನಳಲು ಜಗವನೆತ್ತಿಕೊಳದೇ ?

ಎಂಬ ಈಶ್ವರ ಸಣಕಲ್‌ರ ಕಾವ್ಯಸಾಲುಗಳು ಆಲ್ದಾಳರ ಬದುಕಿಗೆ ಸಾಮ್ಯತೆ ಕಲ್ಪಿಸುತ್ತವೆ. ತಮ್ಮ ಜೀವನ ಕಹಿಯಾಗಿದ್ದರು ನಾಟಕ ನೋಡುವ ಅಭಿಮಾನಿಗಳೆಲ್ಲ ಸಹಿಯಾಗಿರಬೇಕೆನ್ನುವ ನಿಲುವಿನವರು ಆಲ್ದಾಳರು. ತಮ್ಮ ಕುಟುಂಬದ ಕಡುಬಡತನ ಲೆಕ್ಕಿಸದೆ ಸಮಾಜದ ಓರೆಕೋರೆಗಳನ್ನು ನಾಟಕಗಳ ಮೂಲಕ ತಿದ್ದುವಲ್ಲಿ ಅವಿಶ್ರಾಂತ ದುಡಿದರು. ಯಾವುದೇ ಸ್ವಾರ್ಥ ಬಯಸದೇ ಪ್ರೇಕ್ಷಕರಲ್ಲಿ ಶಿವಸ್ವರುಪವನ್ನುಕಂಡರು. ಸಂಸಾರ ಸಾಗರದ ಒಳಸುಳಿಗಳಲ್ಲಿ ಸಿಲುಕಿದರೂ ಎದೆಗುಂದದೆ ನಾಟಕದ ಗೀಳು ಬಿಡಲಿಲ್ಲ. ಅಳುನುಂಗಿ ನಗುವ ಚೇತನವೆಂದರೆ ಎಲ್.ಬಿ.ಕೆ. ಆಲ್ದಾಳರು. ಹೃದಯದಲ್ಲಿ ಅದೆಷ್ಟೊ ನೋವುಗಳಿದ್ದರೂ ನುಂಗಿನಂಜುಂಡನಾದ ಆಲ್ದಾಳ ನಾಟಕಗಳಲ್ಲಿ ಹಾಸ್ಯ ಪಾತ್ರಗಳ ಮೂಲಕ ಹಾಸ್ಯ ಡೈಲಾಗ್ ಬರೆದು ನಗಿಸಿದರು. ತಾವು ನಕ್ಕರೂ ಹೃದಯದೊಳಗಿನ ಹಗೆ ಧಗೆ ಹೊಗೆಯನ್ನು ಎಂದೂ ಹೊರ ಹಾಕಲಿಲ್ಲ. ಯಾರಿಗೂ ಯಾವುದಕ್ಕೂ ಕೈಚಾಚಲಿಲ್ಲ. ದುಡಿಮೆಯಿಂದ ಪಡೆದುದನ್ನು ಸದುಪಯೋಗ ಪಡಿಸಿಕೊಂಡರು ಸ್ವಾಭಿಮಾನವನ್ನು ಎಂಥ ಸಂದರ್ಭದಲ್ಲಿಯೂ ಬಲಿಕೊಡಲಿಲ್ಲ.

ನಾಟಕಗಳ ಸಾವಿರ ಪಾತ್ರಗಳಲ್ಲಿಯ ಭಾವನೆಗಳನ್ನು ಕಟ್ಟಿಹಾಕುವದೇಂದರೆ ಸಾಮನ್ಯವೇ? ಪ್ರೇಕ್ಷಕರನ್ನು ನಗಿಸಿದ್ದಾರೆ, ಅಳಿಸಿದ್ದಾರೆ ,ಗಂಭೀರವಾಗಿಸಿದ್ದಾರೆ, ಚಿಂತನೆಗೆ ಈಡುಮಾಡಿದ್ದಾರೆ, ಪರಿವರ್ತನೆ ಮಾಡಿದ್ದಾರೆ, ಶುಭ ಕೋರಿದ್ದಾರೆ. ಈ ಅಳುನುಂಗಿದ ನಗುವ ಹಿರಿಯ ಚೇತನ.

ಒಬ್ಬ ಯಶಸ್ವಿ ಸಾಹಿತಿ ಸಾಧಕ ವಯಕ್ತಿಕ ಬದುಕಿಗೆ ಗಮನ ಕೊಡುವುದಿಲ್ಲ. ಜಗತ್ತಿನಲ್ಲಿಯ ಸಾರ್ಥಕ ಹಾಗೂ ಸಾಧನೆಯ ಹಾದಿಯಲ್ಲಿಯ ಶೋಧಕರ ಬದುಕಿನತ್ತ ತಿರುಗಿ ನೋಡಿದರೆ ಬರೀ ಮುಳ್ಳುಗಳೇ ಇವೆ. ಯಾವಾತ ಬಡತನ, ಅಪಮಾನ, ಕಷ್ಟ, ಹಿಂಸೆ, ಆತಂಕಗಳನ್ನು ಮೆಟ್ಟಿಲುಗಳಾಗಿ ಬಳಸಿಕೊಳ್ಳುತ್ತಾನೋ ಅವನೇ ಸಾಧನೆಯ

ಉತ್ತುಂಗ ಶಿಖರಕ್ಕೇರುತ್ತಾನೆ. ಸಾಧನೆ ಸಾಧ್ಯವಾಗುತ್ತದೆ. ಕಬೀರದಾಸ, ತುಳಸಿದಾಸ, ಸೂರದಾಸರನ್ನು ಉದಾಹರಿಸಬಹುದು. ಇವರ ಸಾಲಿಗೆ ನಿಲ್ಲುವವರೆ ಆಲ್ದಾಳ ಕವಿಗಳು.

ಆಲ್ದಾಳರು ತನ್ನದು ತಾನಾಗಲಿಲ್ಲ. ತನ್ನದೆಲ್ಲವನ್ನು ರಂಗಪೇಕ್ಷಕ ದೈವಕ್ಕರ್ಪಿಸಿದರು. ಆದ್ದರಿಂದಲೇ ದೇವರೆನಿಸಿಕೊಂಡರು. ಬಡತನದಿಂದ ಕಂಗೆಡಲಿಲ್ಲ ದಂಗಾಗಲಿಲ್ಲ. ಇಂಥ ಬೆಂಗಾಡಿನಲ್ಲೆ ತಂಪನ್ನರಸುತ್ತ ಸಾಗಿತು ಈ ಭೀಷ್ಮಾಚಾರಿಯ ಅನಂತ ಪಯಣ .ನಾಟಕ ಕಥೆಗಳ ನೂರಾರು ಪಾತ್ರಗಳಲ್ಲಿಯ ಭಾವ ವಿಭಾವಗಳು ಅದ್ಭುತವಾಗಿದ್ದವು. ನಕ್ಕರು ನಗಿಸಿದರು ಅತ್ತರು ಅಳಿಸಿದರು. ತಾನು ವಿಷವನ್ನುಂಡು ಕಸವನ್ನುಂಡು ಅಮೃತರಸವನ್ನು ನೀಡಿದ ಕಾಮಧೇನು ಪುಣ್ಯಕೋಟಿ ಆಕಳಂತೆ ಈ ಆಲ್ದಾಳರು. ಕಹಿ ದಕ್ಕಿಸಿಕೊಂಡು ಸಮಾಜಕ್ಕೆ ಸಿಹಿಯೂಟವನ್ನು ಉಣಬಡಿಸಿದ ಈ ಧಾಂಡಿಗ ಸಾಹಿತ್ಯಲೋಕದ ನಕ್ಷತ್ರ, ಸಗರ ನಾಡಿನಲ್ಲಿ ಅನುಭಾವ ಸಾಹಿತ್ಯದ ತೊಟ್ಟಿಲು ತೂಗಿದ ಮಹಾತಾಯಿ.

# ಸೌಹಾರ್ದತೆಯ ಸಾಕ್ಷಿಪ್ರಜ್ಞೆ

ಹೈದ್ರಾಬಾದ ಕರ್ನಾಟಕವು ಕೋಮು ಸೌಹಾರ್ದತೆಗೆ ಉತ್ತಮ ಪರಿಸರ ಮತ್ತು ಪರಿಕರ ಹೊಂದಿದ ಪ್ರದೇಶ. ಅದರಲ್ಲೂ ಸಗರನಾಡು ಪ್ರದೇಶವಂತೂ ಸಾಮರಸ್ಯದ ತವರೂರು. ಸೂಫೀ ಸಂತರು, ಮಹಾಂತರು, ಅವಧೂತರು ಅನುಭಾವಿಗಳು, ಶರಣರು, ತತ್ವಪದಕಾರರು ಸಮರಸ ಬದುಕಿನ ಹೂಗಳನ್ನರಳಿಸಿದರು. ಅದರ ಸೌರಭದಲ್ಲೆ ಅಲ್ಲಾಳರಂಥ ಆಲದ ಮರ ಹೆಮ್ಮರವಾಗಿ ಬೆಳೆದು ಅದರ ಬಿಳಲುಗಳ ನೆರಳಿನಲ್ಲನೇಕರು ವಿಶ್ರಾಂತಿ ವಿಶ್ರಾಮ ಪಡುತ್ತಿದ್ದಾರೆ.

ಕೋಮುದಳ್ಳುರಿಯನ್ನು ಹೊತ್ತಿಸಿ ತಮ್ಮ ಸ್ವಾರ್ಥ ಈಡೇರಿಸಿಕೊಳ್ಳುವ ಇಂದಿನ ಸಮಾಜದಲ್ಲಿ ಅಲ್ಲಾಳರು ಅಪರೂಪದ ಶಕ್ತಿ ತಾನು ಅಲ್ಪಸಂಖ್ಯಾತ ಮುಸ್ಲಿಂ ಸಮಾಜಕ್ಕೆ ಸೇರಿದರೂ ಪರಧರ್ಮಿಯರೊಂದಿಗೆ ಬೆರೆಯುವ ಸಕ್ಕರೆ ಗುಣ ವಿಶೇಷವಾದುದು. ತನ್ನಷ್ಟಕ್ಕೆ ತಾನು ರಂಗ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಚೇತನ.

ಮುಸ್ಲಿಂ ಮನೆತನದಲ್ಲಿ ಹುಟ್ಟಿದರೂ ಅಲ್ಲಾಳರ ಅಂತರಾತ್ಮ ಸೂಫಿ ಸಂಸ್ಕೃತಿಯ ಫಲವತ್ತತೆಯಿಂದ ಸಂಸ್ಕಾರಗೊಂಡಿದೆ ಉದಾತ್ತ ಮೌಲ್ಯಗಳ ಅನುಸಂಧಾನಕ್ಕೆ ಯಾವುದೇ ಜಾತಿ, ಮತ, ಪಂಥ, ಪಂಗಡ, ಪರಂಪರೆ, ಭಾಷೆ ಅಡ್ಡಬರುವುದಿಲ್ಲ. ಅದಕ್ಕಾಗಿಯೇ ಅಲ್ಲಾಳ ಕುರಾನ್ ಸಂಸ್ಕೃತಿಯ ಒಡಲಿನಲ್ಲಿಯೇ ಪುರಾಣ ಸಂಸ್ಕೃತಿಯ ಬೀಜಗಳನ್ನು ಬಿತ್ತಿದರು. ಪ್ರವಾದಿ ಮಹ್ಮದ ದೈವವಾಣಿಯ ಧ್ವನಿಯಲ್ಲಿಯೇ ಸಂತ ಮಹಾಂತರ ಸಂವಾದಗಳನ್ನು ಆಲಿಸಿದ ಆಲದ ಮರವಿದು. ಹೀಗೆ ಹುಟ್ಟಿದ ಮನೆಗೆ ದ್ರೋಹ ಬಗೆಯದೆ ಮಾನವ ಕಲ್ಯಾಣವೇ ಹೆಗ್ಗುರಿಯೆಂದು ಭಾವಿಸಿ ಎಪ್ಪತ್ತೈದು ವಸಂತಗಳನ್ನು ದಾಟುವ ಹೆಜ್ಜೆ ಹಾಕುತ್ತಿದ್ದಾರೆ ಈ ಭೀಷ್ಮ.

ಇಂದಿಗೂ ಅಲ್ಲಾಳರು ಯಾವ ಮಸೀದಿ, ದರ್ಗಾಕ್ಕೆ ಹೋಗಿಲ್ಲ. ಶ್ರದ್ಧೆಯಿಂದ ಪ್ರಾರ್ಥನೆ ಮಾಡಿಲ್ಲ. ಗುಡಿ ಗುಂಡಾರ ಮಠ ಆಶ್ರಮಗಳೇ ಇವರ ವಿಶ್ರಮ ಸ್ಥಳಗಳು. ಈ ಕುರಿತು ಅವರನ್ನು ಕೇಳಿದಾಗ ನನಗ ನಮಾಜ ಮಾಡ್ಲಿಕ ಬರೋದಿಲ್ಲ. ಮನದ ಗಲೀಜು ತೊಳೆಯದೆ ಐದು ಹೊತ್ತು ನಮಾಜ ಮಾಡಿದರೆ ಏನು ಲಾಭ. ಮಠಗಳಲ್ಲೆ ಬೀಳ್ತಾನೆ ಎಂಬ ಅಪವಾದವಿದೆ. ನಾನು ಯಾವುದಕ್ಕೂ ಯಾರಿಗೂ ಒತ್ತಿ ಬಿದ್ದವನಲ್ಲ. ಬಾರದ ಭಾಷೆಯಲ್ಲಿ ನಮಾಜು ಮಾಡುವುದಕ್ಕಿಂತ ಗೊತ್ತಾಗುವ ಭಾಷೆಯಲ್ಲಿ ಮಾತನಾಡೋದು ಬರೆಯೊದು ಚಂದ ಅನಸ್ತು. ಇದರಿಂದ ನನಗೂ ಖುಷಿ ಎನಿಸಿತು. ಹೀಗೆ ಬರಕೊಂತ ನಾಟಕ ಆಡಿಸ್ಕೊಂತ ಹೊಂಟೀನಿ. ಕಾಯಕವೇ ಕೈಲಾಸ ಅಂತ

ಶರಣರ ನುಡಿಯಂತೆ ನಾಟಕ ಚರಿತ್ರೆಗಳನ್ನು ಬರೆಯುವುದರಲ್ಲೆ ದೇವರನ್ನು ಕಾಣ್ತೆನಿ. ಇಲ್ಲದ ದೇವನನ್ನು ಹುಡಿಕಿಕೊಂಡು ದರ್ಗಾಕ್ಕೆ ದೇವಾಲಯಕ್ಕೆ ಭೆಟ್ಟಿ ಕೊಟ್ಟೊನು ನಾನಲ್ಲ. ಮಸೀದಿ, ಚರ್ಚು ದೇವಾಲಯಗಳಲ್ಲಿ ಆದೇವರು ಇಲ್ಲವೇ ಇಲ್ಲ.

ಅಲ್ಲಾಳರು ಇಸ್ಲಾಂ ಧರ್ಮದಲ್ಲಿ ಹುಟ್ಟಿ ಬೆಳೆದರೂ ವೀರಶೈವ ಸಾಹಿತ್ಯ ಸಂಸ್ಕೃತಿಯ ಹೆಮ್ಮರ ಬೆಳೆಸಿ ನೀರುಣಿಸಿದರು. ಮಠಗಳನ್ನು ಇವರು ಬೆಳೆಸಿದರೆ ಇವರನ್ನು ಮಠಗಳು ಬೆಳೆಸಿದವು. ಭಕ್ತಿ ಶಿರೋಮಣಿ ಶರಣಸಾಹಿತ್ಯ ರತ್ನ ಅಲ್ಲಾಳರಕ್ಕಿಂತ ಮೊದಲು ಭಕ್ತಿ ಪ್ರಧಾನ ಹಾಗೂ ಶರಣರ ಮಹಾತ್ಮೆಗಳಂಥ ನಾಟಕ ಬರೆದು ಪ್ರಸಿದ್ಧರಾದವರೆಂದರೆ ನಲವಡಿ ಶ್ರೀಕಂಠ ಶಾಸ್ತ್ರಿಗಳು, ಗರೂಡ ಸದಾ ಶಿವರಾಯರು, ಪುಟ್ಟರಾಜ ಗವಾಯಿಗಳು, ಮಾರುತೇಶ ಮಾಂಡ್ರೆ ಇವರೆಲ್ಲರಂತೆ ಎಲ್.ಬಿ.ಕೆ ಅಲ್ದಾಳ ಗಮನಾರ್ಹರಾಗಿದ್ದಾರೆ.

ಧಾರ್ಮಿಕ ವ್ಯಕ್ತಿಗಳ ಕುರಿತು ಕಥೆ, ಕಾದಂಬರಿ, ಚರುತ್ರೆ ಬರೆಯುವುದು ಸರಳ ಸಾಧ್ಯ. ಆದರೆ ಧಾರ್ಮಿಕ, ದಾರ್ಶನಿಕ ,ಶರಣರ, ಪುಣ್ಯ ಪುರುಷರ, ಪವಾಡಪುರುಷರ, ಅವಧೂತಿಗಳ ಬದುಕನ್ನು ಅವರ ಸಾಧನೆಯನ್ನು ನಾಟಕದ ಮೂಲಕ ಮೂಲ ವ್ಯಕ್ತಿತ್ವಕ್ಕೆ ಚ್ಯುತಿ ಬರದಂತೆ ಜನರಿಗೆ ತೋರ್ಪಡಿಸುವುದೆಂದರೆ ಸಾಮಾನ್ಯ ಮಾತಲ್ಲ. ಇಂಥ ಅಸಾಮಾನ್ಯ ಕೆಲಸ ಮಾಡಿದವರಲ್ಲಿ ಅಲ್ಲಾಳರು ಅಗ್ರಗಣ್ಯರು. ಚರಬಸವೇಶ್ವರ ಮಾಹಾತ್ಮೆ, ವಿಶ್ವಾರಾಧ್ಯರ ಮಹಾತ್ಮೆ, ಜೇವರ್ಗಿ ಜ್ಯೋತಿ, ಹಾರಕೂಡ ಶ್ರೀ ಚನ್ನಬಸವೇಶ್ವರ ಮಹಾತ್ಮೆ, ಶರಣಬಸವೇಶ್ವರರು, ಕಡಕೋಳ ಮಡಿವಾಳಪ್ಪ ಹೀಗೆ ೨೫ಕ್ಕೂ ಹೆಚ್ಚು ನಾಟಕಗಳು ವೀರಶೈವ ಸಿದ್ಧಾಂತವನ್ನು ಮೆರೆದವು ಹೀಗೆ ಸ್ಥಳೀಯ ಪೌರಾಣಗಳನ್ನಾಧರಿಸಿ ಪವಾಡ ಪುರುಷರ ಕುರಿತು ಅತಿ ಹೆಚ್ಚು ನಾಟಕ ರಚಿಸಿ ನಿರ್ದೇಶಿಸಿದ ಖ್ಯಾತಿ ಅಲ್ದಾಳರಿಗಿದೆ.

ವೀರಶೈವ ಕವಿ ಈ ಶಬ್ದಕ್ಕೆ ಸೀಮಿತವಿದ್ದವರಲ್ಲ. ಹಲವು ಜಾತಿಗಳಿಗೆ ಮತ್ತು ಅವರ ನಂಬಿಕೆಗಳಿಗೆ ರೂಪು ಕೊಟ್ಟು ಅವನ್ನು ರಂಗದ ಮೇಲೆ ತರುವುದು ಕರಗತ ಕಲೆಯಾಗಿತ್ತು. ಕುರುಬರ ಯಲ್ಲಾಲಿಂಗನ ಕುರಿತು ಮುಗಳಕೋಡ ಮುತ್ತು, ಈಡಿಗರ ಬಾಲಯೋಗೀಂದ್ರ ಮಹಾರಾಜೇಂದ್ರರ ಕುರಿತು ಗರತಿ ವಿಶ್ವದ ಜ್ಯೋತಿ, ವಿಶ್ವಕರ್ಮ ಜನಾಂಗದ ಕುರಿತು ಅಳ್ಳಳ್ಳಿ ಅಯ್ಯಪ್ಪಯ್ಯ ಮತ್ತು ತಿಂಥಣಿ ಮೌನೇಶ್ವರ ಲಿಂಗಾಯತ ಹಾಗೂ ವೀರಶೈವರಿಗಾಗಿ ಚರಬಸವೇಶ, ಷಣ್ಮುಖ ಶಿವಯೋಗಿ, ವಿಶ್ವಾರಾಧ್ಯರು ಹೀಗೆ ೨೦ ಕ್ಕೂ ಹೆಚ್ಚು ನಾಟಕಗಳನ್ನು ರಂಗಕ್ಕೆ ಸೆಳೆದ ಜಾತ್ಯಾತೀತ ಧರ್ಮಾತೀತ ನಿಲುವಿನ ಅಲ್ದಾಳರು ಎಲ್ಲಾ ಸಾಮಾಜಿಕ ಸ್ಥರದ ಶರಣರನ್ನು ರಂಗದ ಮೇಲೆ ತಂದಿದ್ದಾರೆ. ಸಾಕಷ್ಟು ಸಂಖ್ಯೆಯ ಶರಣರು, ಸಂತರು, ಸೂಫಿಗಳ ಕುರಿತು ನಾಟಕ ರಚಿಸಿ ನಿರ್ದೇಶಿಸಿದ್ದಾರೆ. ಸರಳ ಜೀವನ, ಕಾಯಕದ ಮಹತ್ವ, ಭಾವೈಕ್ಯತೆ ಇವುಗಳು ಇವರ ಪೌರಾಣಿಕ ನಾಟಕಗಳ ತಿರುಳು.

ಹೀಗೆ ಅಲ್ದಾಳ ಮಾಸ್ತರರು ಮಠಗಳಲ್ಲಿ ದೊರೆಯುವ ಐತಿಹ್ಯ ಚರಿತ್ರೆ ಆಧರಿಸಿ ಪುರಾಣ ಚರಿತ್ರೆಗಳನ್ನು ಬರೆದಿದ್ದಾರೆ. ತತ್ವಗೀತೆ, ಜನಪದ ಗೀತೆ, ವಚನ ಸಂಪುಟಗಳನ್ನು ನಾಮಾವಳಿಗಳನ್ನು ಬರೆದು ಪ್ರಕಟಿಸಿದ್ದಾರೆ. ಭಕ್ತಿಗೀತೆಗಳು

ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. ಪ್ರಕಟಿತ ಅಪ್ರಕಟಿತ ಒಟ್ಟು ಸೇರಿ ಅವರ ಕೃತಿಗಳು ನೂರರಷ್ಟಾಗಬಹುದು. ಭಾಮಿನಿ ಷಟ್ಪದಿಯಲ್ಲಿ ನಾಲ್ಕು ಪುರಾಣಗಳನ್ನು ರಚಿಸಿದ್ದಾರೆ.

ಅವರ ಸೃಜನಶೀಲತೆಗೆ ಬಹುಮುಖಗಳಿವೆ. ಬಹುರೂಪಿ ವ್ಯಕ್ತಿತ್ವ ಅವರದು. ಮೂಲಬದ್ದತೆ ಮಾತ್ರ ನಾಟಕ ಕ್ಷೇತ್ರ. ಇವರನ್ನ ನಾಟಕಕ್ಕೆ ಸಮರ್ಪಿಸಿಕೊಂಡ ಪುರಾಣ ಪುರುಷ ಎನ್ನಬಹುದಲ್ಲವೆ? ಹೀಗೆ ಸರ್ವಧರ್ಮ ಸಮನ್ವಯ ಸಾಧಿಸುತ್ತಲಿರುವ ಎಲ್.ಬಿ.ಕೆ.ಆಲ್ದಾಳರ ಅಮೋಘ ರಂಗ ಸೇವೆ ಅನುಪಮ.

# ಸಾಮಾಜಿಕ ಬದ್ಧತೆ...

ಕನ್ನಡ ಸಾಹಿತ್ಯದಲ್ಲಿ ಮೊಟ್ಟ ಮೊದಲ ಉಪಲಬ್ಧ ಲಾಕ್ಷಣಿಕ ಗ್ರಂಥ ಕವಿರಾಜ ಮಾರ್ಗ. ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಮಳಖೇಡ (ಆಗಿನ ಮಾನ್ಯಖೇಟ) ರಾಜಧಾನಿಯಾಗಿಸಿಕೊಂಡ ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನ ಆಸ್ಥಾನ ಕವಿಯಾಗಿದ್ದ ಶ್ರೀವಿಜಯ ಹೇಳಿದಂತೆ **ಪದನರಿದು ನುಡಿಯಲುಂ ನುಡಿದುದನರಿದಾರಯಲು ಮಾರ್ಪರಾ ನಾಡವರ್ಗಳ್, ಚದುರರ್ ನಿಜದಿಂ ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಿ ಮತಿಗಳ್** ನಿಜವಾದ ಅರ್ಥದಲ್ಲಿ ಓದದೆಯೂ ಬರೆಯುತ್ತಿರುವವರಲ್ಲಿ ಆಲ್ದಾಳರು ಒಬ್ಬರು. ಕವಿಯಾಗಿ ಪ್ರವಚನಕಾರನಾಗಿ, ವಚನಕಾರನಾಗಿ, ಚರಿತ್ರೆಕಾರನಾಗಿ, ಮೇಲಾಗಿ ತಾನೇ ಪಾತ್ರಧಾರಿಯಾಗಿ ಅಭಿನಯಿಸಿ ಉತ್ತರ ಕರ್ನಾಟಕದ ಜನಮಾನಸದಲ್ಲಿ ವಿಹರಿಸುತ್ತಿದಾನೆ.

ಆಲ್ದಾಳರ ಪೌರಾಣಿಕ ಆಧ್ಯಾತ್ಮಿಕ ನಾಟಕಗಳು ಅವರನ್ನು ಒಬ್ಬ ಶರಣಜೀವಿಯಾಗಿ ನಿಲ್ಲಿಸುತ್ತವೆ. ಪುಣ್ಯಪುರುಷರ ಶರಣ ಜೀವಿಗಳ ಆದರ್ಶ ಬದುಕನ್ನು ನಾಟಕಗಳ ಮೂಲಕ ಜನರ ಹತ್ತಿರಕ್ಕೆ ಕರೆದೊಯ್ದರು. ಅದರಂತೆ ಸಾಮಾಜಿಕ ಬದ್ಧತೆಯನ್ನು ಅಳವಡಿಸಿಕೊಂಡ ಅವರ ಕೌಟುಂಬಿಕ ನಾಟಕಗಳು ಅಪ್ರತಿಮವಾಗಿವೆ. ದಾರ್ಶನಿಕ ನಾಟಕಗಳು ಇವರನ್ನು ಶರಣಜೀವಿ ಎಂದು ಗುರುತಿಸಿದರೆ ಸಾಮಾಜಿಕ ನಾಟಕಗಳು ಮಾರ್ಗದರ್ಶಕ ಎಂದು ಗುರುತಿಸುತ್ತವೆ. ಪತಿಭಕ್ತಿ, ಬಾಳಿಗೊಂದು ಬೆಲೆಬೇಕು, ಕಲಿಯುಗದ ಕನ್ಯ, ನಮಸ್ಕಾರ, ನನ್ನದೇವರು, ಕಣ್ಣಿಟ್ಟ ಕೈಕೊಟ್ಟ, ವಂಚಕ, ಕುಂಟಕೋಣ ಮೂಕ ಜಾಣ, ಎಂಬ ಸಾಮಾಜಿಕ ನಾಟಕಗಳು ಆಲ್ದಾಳರಿಗೆ ಜನಪ್ರಿಯತೆ ತಂದು ಕೊಟ್ಟವು.

ಇತ್ತೀಚಿನ ಆಧುನಿಕ ಮಿರ್ಚಿ ಮಸಾಲಾ ನಾಟಕಗಳನ್ನು ನೋಡಿದರೆ ಅಸಹ್ಯವೆನಿಸುತ್ತದೆ. ಇಡೀ ಕುಟುಂಬ ವರ್ಗದವರು ಒಂದಡೆ ಕುಳಿತು ನೋಡವಂತಿಲ್ಲ. ಈಗಿನ ನಾಟಕಗಳೆಂದರೆ ಪಡ್ಡೆಗಳ ಅಡ್ಡಾ ಎನ್ನಬಹುದು. ದ್ವಂದಾರ್ಥಗಳು, ಹಸಿ ಬಿಸಿ ಹುಸಿ ಡೈಲಾಗ್‌ಗಳು, ಅರೆಬರೆ ಬಟ್ಟೆ, ನೃತ್ಯ, ಕಲೆಕ್ಷನ್‌ಗಾಗಿ ಪಿಳಿಗೆ ಏನನ್ನು ಬಯಸುತ್ತದೇ ಅದನ್ನ ನಾಟಕ ಕಂಪನಿಗಳು ನೀಡುತ್ತಿವೆ. ವೃತ್ತಿರಂಗಭೂಮಿ ನಾಶದ ಅಂಚಿಗೆ ಬಂದಿದೆ ಎಲ್ಲೋ ಬೆರಳೆಣಿಕೆಯಷ್ಟು ಉಳಿದಿವೆ. ಕೆಲದಿನಗಳಲ್ಲಿ ಅವು ಮಾಯವಾಗುತ್ತವೆ. ಆಧುನಿಕ ಅತೀ ತಂತ್ರಜ್ಞಾನದಿಂದ ನಮ್ಮ ರಂಗಭೂಮಿ ಮರೆಯಾಗುತ್ತಿರುವುದು ಖೇದದ ಸಂಗತಿ. ಇನ್ನೂ ಹಳ್ಳಿಗಳಲ್ಲಿ ಹಾವ್ಯಾಸಿ ಕಲಾವಿದರು ಕಣ್ಮರೆಯಾಗಿದ್ದಾರೆ. ಮಹಾಭಾರತ ರಾಮಾಯಣರ ಕಥಾ ಭಾಗಗಳನ್ನು ಬಿಂಬಿಸುವ

ಬಯಲಾಟ ಸಣ್ಣಾಟ ದೊಡ್ಡಾಟವಂತೂ ನವಪೀಳಿಗೆಗೆ ಏನೆಂದೂ ಗೊತ್ತಿಲ್ಲ. ಎಲ್.ಬಿ.ಕೆ. ಆಲ್ದಾಳರ ಸಾಮಾಜಿಕ ನಾಟಕಗಳಲ್ಲಿ ಮಾನವೀಯ ಮೌಲ್ಯಗಳಿದ್ದವು ಭಾವೈಕ್ಯತೆಯ ಸಂದೇಶವಿತ್ತು. ಸ್ತ್ರೀಪರ ಸಂವೇದನೆ ಕಾಳಜಿ ಕಕುಲಾತಿ ಇತ್ತು. ಜೊತೆಗೆ ಸ್ತ್ರೀಶೋಷಣೆ ಧಿಕ್ಕರಿಸುವ ಅಂಶಗಳು ಅಧಿಕವಾಗಿವೆ. ಇವರೆಲ್ಲ ಸಾಮಾಜಿಕ ನಾಟಕಗಳಲ್ಲಿ ಕೌಟುಂಬಿಕ ಚಿತ್ರಣಗಳಿವೆ. ತುಂಬು ಸಂಸಾರದ ಆಧಾರಗಳಾದ ಪ್ರೀತಿ, ಸ್ನೇಹ, ಸಹಕಾರ, ಬಂಧುತ್ವ, ವಿಶ್ವಾಸ, ನಂಬಿಕೆಯಂಥ ಆಪ್ತ ಭಾವಗಳು ನಾಟಕಗಳ ಪಾತ್ರಗಳ ಸಂರಚನೆಯಲ್ಲಿ ಕಂಡು ಬರುತ್ತವೆ. ಎಲ್ಲಿಯೂ ದ್ವಂದಾರ್ಥ, ಅಶ್ಲೀಲ ಸಂವಾದ ಸಂಭಾಷಣೆಗೆ ಆಸ್ಪದವಿರದೆ ಬದಲಾಗಿ ಸಾಮಾಜಿಕ ಕಳಕಳಿ ಮತ್ತು ಉದಾತ್ತವಾದ ಶರಣರ ಸೂಫಿ ಸಂತರ ವಿಚಾರಗಳಿಂದ ತುಂಬಿ ಕೊಂಡಿರುತ್ತವೆ.

ಇವರ ಇನ್ನೂ ಅನೇಕ ಸಾಮಾಜಿಕ ನಾಟಕಗಳು ರಂಗಕ್ಕೇರಿವೆಯಾದರೂ ಪ್ರಕಟಗೊಂಡಿಲ್ಲ. ಏಕೆಂದರೆ ಆಲ್ದಾಳರು ಬಡತನದಲ್ಲೇ ಬೆಂದವರು. ಇವರ ನಾಟಕಗಳಿಂದ ಗಲ್ಲಾಪೆಟ್ಟಿಗೆ ತುಂಬಿಸಿಕೊಂಡ ಅದೆಷ್ಟೋ ಕಂಪನಿ ಮಾಲಿಕರು ಪುಡಿಗಾಸು ನೀಡಿ ಸಾಗಿಹಾಕಿದ ಉದಾಹರಣೆಗಳಿವೆ. ಎಂದೂ ಯಾರಿಗೂ ಪ್ರಶ್ನೆ ಮಾಡುವ ವ್ಯಕ್ತಿತ್ವ ಆಲ್ದಾಳರದಾಗಿತ್ತು. ಪ್ರಕಟಗೊಳ್ಳದ ಸಾಮಾಜಿಕ ನಾಟಕಗಳೆಂದರೆ ಹೆಣ್ಣು ಹರಕೆಯ ಕುರಿ, ಭಲ ತೀರಿತು, ನಮ್ಮೂರು ಹಿಂಗ್ಯಾಕಾಯ್ತು, ಮಾನವಂತರ ಮಗಳು, ನಡೆಯಿಲ್ಲದ ಹೆಣ್ಣು, ನುಡಿಯಿಲ್ಲದ ಗಂಡು, ಹೀಗೆ ಇಪ್ಪತ್ತಕ್ಕಿಂತ ಹೆಚ್ಚು ಬರೆದ ಸಾಮಾಜಿಕ ನಾಟಕಗಳು ಸಮಾಜ ಪರಿವರ್ತನೆಯ ಸೋಪಾನಗಳಾದವು. ಆಲ್ದಾಳರು ನಾಟಕಗಳಿಗಾಗಿ ನಾಟಕ ಬರೆಯಲಿಲ್ಲ. ಸಮಾಜ ಕಟ್ಟುವುದಕ್ಕಾಗಿ ನಾಟಕ ಬರೆದರು. ಬರೀ ನಾಟಕ ಬರೆದು ಕೈಕಟ್ಟಿ ಕುಳಿತುಕೊಳ್ಳದೆ ಸಂಯೋಜಿಸಿ, ಸಂಘಟಿಸಿ, ನಿರ್ದೇಶಿಸಿ, ಸ್ವತಃ ಪಾತ್ರ ಮಾಡಿ ರಂಗದ ಮೇಲೆ ತಂದ ರಂಗ ಸಾಮ್ರಾಟ ಆಲ್ದಾಳರು. ಇವರೆಲ್ಲ ಭಕ್ತಿ ಪ್ರಧಾನ ನಾಟಕಗಳು ನೂರಾರು ಪ್ರಯೋಗ ಕಂಡು ಯಶಸ್ವಿಯಾದವು. ಹಾಗೆಯೇ ಇವು ಕೂಡಾ ನೂರಾರು ಪ್ರಯೋಗ ಕಂಡಿವೆ ಹೆಚ್ಚಾಗಿ ಗ್ರಾಮೀಣ ಭಾಗಗಳಲ್ಲಿ ಆಲ್ದಾಳ ಕವಿಗಳ ನಾಟಕಗಳೆಂದರೆ ಮೋಡಿ ಮಾಡಿದ್ದವು.

ನೂರರ ಗಡಿ ದಾಟಿ ಗ್ರಂಥಗಳನ್ನು ಕನ್ನಡ ನಾಡ ಸಾಹಿತ್ಯ ಸಮೃದ್ಧಿಗೆ ನೀಡಿದ ಆಲ್ದಾಳರ ಖಾಸಗಿ ಬದುಕು ವ್ಯತಿರಿಕ್ತವಾದುದು. ಬಡತನದಲ್ಲೆ ಕಾಲ ಕಳೆಯಬೇಕಾಯಿತು. ಮಠಗಳಿಗೆ ಅಲೆದಲೆದು ಸುಸ್ತಾಗಬೇಕಾಯಿತು. ಬಸ್ ಸ್ಟ್ಯಾಂಡ, ರೇಲ್ವೆ ಸ್ಟೇಷನಗಳೇ, ವಿಶ್ರಮ ಸ್ಥಳಾದವು, ಏನಿಲ್ಲದಿದ್ದರೂ ಎಲ್ಲವಿರುವಂತೆ ಇರುವ ಪೂರ್ಣ ಪರಿಪೂರ್ಣ ಚೇತನ, ಅಳುನುಂಗಿ ನಗುತ್ತಾ ಬಾಳ ನೂಕಿದ ಕಾಯಕಯೋಗಿ. ಈ ಕೆಳಗಿನ ಬೋಳು ಬಸವನ ವಚನ ಇವರ ವ್ಯಕ್ತಿತ್ವಕ್ಕೆ ಹತ್ತಿರವಿದೆ.

ಜಗಕ್ಕೆ ನೀ ಬಂದಾಗ ನೀನೊಬ್ಬಳುತ್ತಿರಲು
ಜಗವೆಲ್ಲ ನಗುತ್ತಿತ್ತು ಸಂತಸದೊಳು
ಜಗವ ನೀ ಬಿಡುವಾಗ ನಗುತ ಬಿಡು
ನಿನಗಾಗಿ ಜಗವೆಲ್ಲ ಅಳುತಿರಲಿ..

# ಪವಾಡಗಳು ಮೌಢ್ಯಗಳಲ್ಲ

ಆಲ್ದಾಳರ ಸಾಮಾಜಿಕ ಮತ್ತು ಧಾರ್ಮಿಕ ಬಹುತೇಕ ನಾಟಕಗಳಲ್ಲಿ ಪವಾಡಗಳು ಜರಗುತ್ತವೆ. ಅನೇಕ ಜನ ವಿಮರ್ಶಕರು ಆಲ್ದಾಳರು ಪವಾಡಗಳ ಹೆಸರಿನಲ್ಲಿ ಜನರಲ್ಲಿ ಮೌಢ್ಯ ತುಂಬುವ ಕೆಲಸ ಮಾಡುತ್ತಿದ್ದಾರೆ. ಮೌಲಿಕ ವೈಚಾರಿಕ ತಳಹದಿಯ ಮೇಲೆ ನಾಟಕ ರಚನೆಗೊಳ್ಳಬೇಕು. ನಾಟಕಗಳಲ್ಲಿ ಪವಾಡಗಳೆಲ್ಲ ಅವೈಜ್ಞಾನಿಕ ಅವೈಚಾರಿಕ ಎಂದು ಹೇಳಿದ್ದುಂಟು.

ಕವಿ ಆಲ್ದಾಳರ ನಾಟಕ ಸಂರಚನೆ, ದೃಶ್ಯ ನಿರ್ಮಿತಿ, ಸಂಭಾಷಣಾ ಶೈಲಿ, ಪಾತ್ರಗಳ ಚಯನ ಅತ್ಯಂತ ಸೂಕ್ತ ಸೂಕ್ಷ್ಮತೆಯಿಂದ ಕೂಡಿರುತ್ತದೆ. ಇವರೆಲ್ಲ ಆಧ್ಯಾತ್ಮಿಕ ನಾಟಗಳ ವಿಷಯ ವಸ್ತು ಮಠಗಳಲ್ಲಿಯ ಐಹಿತ್ಯವಾಗಿದೆ. ಪುರಾಣದ ಪುಣ್ಯ ಪುರುಷರಾಗಿದ್ದಾರೆ, ಶರಣ ಜೀವಿಗಳಾಗಿದ್ದಾರೆ, ಸಂತರಾಗಿದ್ದಾರೆ, ಅವಧೂತರಾಗಿದ್ದಾರೆ. ಹೀಗಿರುವಾಗ ಈ ಶರಣರ ಸಂತರ ಅವಧೂತರ ಮಹಿಮಾಪುರುಷರ ಪವಾಡಪುರುಷರ ಪುಣ್ಯಪುರುಷರ ಕುರಿತು ನಾಟಕ ಬರೆದು ರಂಗಕ್ಕೆ ತಂದು ಜನಗಳಿಗೆ ತೋರಿಸಿ ಮೆಚ್ಚುಗೆ ಪಡೆದು ಸಾವಿರಾರು ಪ್ರಯೋಗ ಕಾಣಬೇಕಾದರೆ ಸಾಮಾನ್ಯ ಕಾರ್ಯವಲ್ಲ. ಶರಣರ ಕುರಿತು ಚರಿತ್ರೆ, ಪುರಾಣ, ಕಥೆ, ಕಾದಂಬರಿ ಬರೆಯುವುದು ಸರಳ ಆದರೆ ನಾಟಕ ಕಟ್ಟುವುದು ತುಂಬಾ ಕಷ್ಟ. ಇಂಥದರಲ್ಲಿ ಆಲ್ದಾಳರು ಮಹಿಮಾಪುರುಷರ ವ್ಯಕ್ತಿತ್ವ ಕೃತಿತ್ವಕ್ಕೆ ಕುಂದು ಬರದಂತೆ ಪ್ರೇಕ್ಷಕರನ್ನು ಭಕ್ತಿ ಭಾವಗಳಲ್ಲಿ ಕಟ್ಟಿ ಹಾಕಲಿಕ್ಕೆ ಕೆಟ್ಟ ಕೆಲಸಗಳಿಗೆ ವಾಲದಂತೆ ಸೂಚಿಸಲು ಆಲ್ದಾಳರು ಕೆಲ ತಂತ್ರಗಳನ್ನು ಬಳಸಿಕೊಂಡಿದ್ದು ನಿಜ. ಅವೇ ಪವಾಡಗಳು. ಪವಾಡಗಳು ಮೌಢ್ಯವಲ್ಲ ಅವುಗಳು ಸಾಂಕೇತಿಕಗಳು ಮಾತ್ರ. ವಿಷಯ ಮತ್ತು ವ್ಯಕ್ತಿ ವೈಭವೀಕರಿಸಲು ನಾಟಕದ ಆಕರ್ಷಣೆಗಾಗಿ, ಗ್ರಾಮೀಣ ಜನರ ನಂಬಿಗೆಗಳನುಸಾರ ಪವಾಡಗಳನ್ನು ಸೃಷ್ಟಿಸಲಾಗಿದೆ.

ದೇವವಾಣಿ, ಸತ್ತವರು ಮತ್ತೆ ಬದುಕುವುದು, ಮಕ್ಕಳಿಲ್ಲದವರಿಗೆ ಮಕ್ಕಳ ಭಾಗ್ಯ, ಕಬ್ಬಿಣ ತಿಂದು ಬಿಡುವುದು, ಬೆಂಕಿ ತುಳಿಯುವುದು, ಆಕಾಶದಿಂದ ಪುಷ್ಪ ಬೀಳುವುದು, ದೇವತೆಗಳು ಪ್ರತ್ಯಕ್ಷವಾಗಿ ಆಶೀರ್ವಾದ ನೀಡವುದು, ಕೃಪಾಶಿರ್ವಾದದಿಂದ ಮಂತ್ರದ ನೀರಿನಿಂದ ಅನಾರೋಗ್ಯ ದೂರಾಗುವುದು ಇಂಥ ಏನೆಲ್ಲ ಪ್ರಸಂಗಗಳನ್ನು ನಾಟಕಗಳಲ್ಲಿ ಕಾಣಬಹುದು. ಇಂಥ ಪವಾಡಗಳನ್ನು ಅವೈಜ್ಞಾನಿಕ ಎಂದು ತಳ್ಳಿಹಾಕಬಹುದು. ಪವಾಡಗಳು ನಿಜವಲ್ಲ ಸಾಂಕೇತಿಕ ಮಾತ್ರ. ಸತ್ಯಕ್ಕೆ ಜಯ ದೊರಕಿಸಿಕೊಡಲು ಗ್ರಾಮೀಣ ಜನಪದ ಕಲಾವಿದರು ಕಂಡುಕೊಂಡ ಮಾರ್ಗವಿದು. ಅದಕ್ಕಾಗಿ ಇವುಗಳನ್ನು

ವಾಚ್ಯಾರ್ಥದಲ್ಲಿ ಗ್ರಹಿಸುವುದಕ್ಕಿಂತ ಅಲಂಕಾರಿಕ ಅರ್ಥದಲ್ಲಿ ತಿಳಿದುಕೊಂಡರೆ ಸೂಕ್ತ. ಬಹಳ ತೊಂದರೆಯಲ್ಲಿರುವ ಪ್ರಾಮಾಣಿಕ ವಿಶ್ವಾಸವುಳ್ಳ ವ್ಯಕ್ತಿಗೆ ಒದಗಿಬಂದ ವಿಪತ್ತಿನಿಂದ ಪಾರಾಗಲು ಪವಾಡಗಳು ನೆರವಿಗೆ ಬರುತ್ತವೆ. ಸರಳತೆಗೆ ಸಜ್ಜನಿಕೆಗೆ ಪ್ರಾಮಾಣಿಕತೆಗೆ ಕೊನೆಗೆ ಜಯ ಸಿಗುತ್ತದೆ. ಎಂಬುದನ್ನು ಪವಾಡಗಳ ಮೂಲಕ ಸಾಂಕೇತಿಕವಾಗಿ ಆಲ್ದಾಳರು ತೋರಿಸಿದ್ದಾರೆ. ಪವಾಡ ಇಲ್ಲಿ ಪ್ರತಿಮೆ. ರೂಪಕ. ಧಾರ್ಮಿಕ ವಸ್ತುವಾದ್ದರಿಂದ ಜನಪದ ಧ್ವನಿಯೇ ಮುಖ್ಯವಾಗುತ್ತದೆ.

ಶೀಲಾವತಿ ನಾಟಕದಲ್ಲಿ ಮಗನ ಪ್ರಾಣ ಹೋದರೂ ಚಿಂತೆಯಿಲ್ಲ ತನ್ನ ಶೀಲ ರಕ್ಷಿಸಿಕೊಳ್ಳುವುದೇ ಮುಖ್ಯ ಎಂಬ ಶೀಲಾವತಿಯ ನಿಲುವಿಗೆ ತನ್ನ ಕಣ್ಣೆದುರೇ ಮಗನ ಹತ್ಯೆ ಮಾಡಲಾಗುತ್ತದೆ. ಒಬ್ಬ ಮಹಿಳೆ ತನಗೆ ಒದಗಿದ ಕಂಟಕಗಳನ್ನೆಲ್ಲ ಚಾಣಾಕ್ಷೆಯಿಂದ ಜಯಿಸುತ್ತಾಳೆ ಕೊನೆಗೆ ಅವಳ ಛಲಕ್ಕೆ ಒಲಿದ ಅಂಬಾ ಸತ್ತ ಮಗನನ್ನು ಬದುಕಿಸುತ್ತಾಳೆ

ಆಲ್ದಾಳರು ಹೇಳುವಂತೆ 'ಆಧ್ಯಾತ್ಮ ಮಾಧ್ಯಮದ ಮೂಲಕ ಮೂಢನಂಬಿಕೆಗಳನ್ನು ಹೋಗಲಾಡಿದುವುದು ನನ್ನ ಗುರಿ. ನಾಟಕದ ಪ್ರಾರಂಭದಲ್ಲಿ ಪವಾಡಗಳ ಕುರಿತು ಹೇಳಿದರೂ ನಾಟಕ ಮುಗಿಯುವಾಗ ಶರಣರ ಬದುಕೆ ಒಂದು ಪವಾಡವಾಗಿ ಧ್ವನಿಸಿದ್ದೇನೆ. ಭಕ್ತಿ ಜ್ಞಾನ ವೈರಾಗ್ಯಗಳನ್ನು ಕ್ರಮವಾಗಿ ವಿವರಿಸಿದ್ದೇನೆ. ಯೌವುದೇ ವ್ಯಕ್ತಿ ತೂರ್ಯಾತೀತ ಸ್ಥಿತಿಗೆ ತಲುಪಿದಾಗ ಆತ ಅಲ್ಲಮ ಪ್ರಭುವಿನಂತೆ ನಾ ದೇವನಲ್ಲದೆ ನೀ ದೇವನೆ? ನೀ ದೇವನಾದರೆ ನನ್ನನೇಕೆ ಸಲಹೆ ? ಎಂಬ ಎತ್ತರದ ಸ್ಥಿತಿಗೆ ತಲುಪುತ್ತಾನೆ ನನ್ನ ನಾಟಕಗಳಲ್ಲಿ ಭಾವೈಕ್ಯತೆ ತಂದಿದ್ದೇನೆ. ಅನೇಕರು ಆಧ್ಯಾತ್ಮಿಕತೆಯ ಹೆಸರಿನಲ್ಲಿ ಜನರನ್ನು ಮೌಢ್ಯತೆಯ ಕತ್ತಲೆಗೆ ದೂಡುತ್ತಿರುವುದನ್ನು ನಾಟಕಗಳಲ್ಲಿ ಕ್ರೂರತನದಿಂದ ಚಿತ್ರಿಸಿದ್ದೇನೆ. ಆದ್ದರಿಂದ ನನ್ನ ಪವಾಡ ದೃಶ್ಯಗಳು ಮೌಢ್ಯಗಳಲ್ಲ' ಎಂದಿದ್ದಾರೆ.

# ರಂಗ ಚಳುವಳಿಕಾರ

ಹೈದ್ರಾಬಾದ ಕರ್ನಾಟಕದ ಅದರಲ್ಲೂ ಸಗರನಾಡಿನ ಬಹುಮುಖಿ ಬಹುಶ್ರುತ ಕಾಣಿಕೆಯನ್ನು ದೇಶದ ಸಾಂಸ್ಕೃತಿಕ ಪರಿವೇಶಕ್ಕೆ ಸಲ್ಲಿಸಿದ್ದಾರೆ. ಈ ಮಣ್ಣಿಗೆ ಕೋಮು ಸೌಹಾರ್ದತೆಯ ಪರಂಪರೆಯಿದೆ. ಇಂಥ ಸೌಹಾರ್ದತೆಯ ಪರಂಪರೆಯನ್ನು ನಾಟಕಗಳ ಮೂಲಕ ರಕ್ಷಿಸಿಕೊಂಡ ಹಿರಿಯ ಚೇತನ ಅಲ್ಲಾಳರು.

ಹುಟ್ಟಿದ ಜೀವಿ ಸಾಯುವವರೆಗೂ ಈ ಭೂಮಿಯ ಮೇಲೆ ಅನಿವಾರ್ಯವಾಗಿ ಬದುಕಲೇ ಬೇಕು. ಬದುಕಿನಲ್ಲಿ ಆಯಸ್ಸು ವಯಸ್ಸು ಮುಖ್ಯವಾಗದೆ ಸಾಧನೆ ಸಾರ್ಥಕತೆ ಮುಖ್ಯ. ಈ ಹಿರಿಯ ಮಾವಿನ ಮರ ರುಚಿಯಾದ ಫಲಗಳನ್ನು ನೀಡುತ್ತ ಹೋಯಿತು. ಬದುಕಿನಲ್ಲಿ ಪಡೆದ್ದೆಷ್ಟು ಕಳೆದುಕೊಂಡಿದ್ದೆಷ್ಟು ಎಂಬುದನ್ನು ಮನೋಗತ ಮನವರಿಕೆ ಹೆಜ್ಜೆ ಹೆಜ್ಜೆಗೆ ಮಾಡಿಕೊಂಡಾಗ ಜೀವನ ಸಾರ್ಥಕವಾಗುತ್ತದೆ. ಇಂಥವರ ಸಾಲಿಗೆ ಎಲ್.ಬಿ.ಕೆ. ಅಲ್ಲಾಳ ಬರುತ್ತಾರೆ. ಅಲ್ಲಾಳರ ಕ್ರಿಯಾಶೀಲತೆಯು ಲೇಖನಿಯನ್ನು ಬಿಡುವಿಲ್ಲದಂತೆ ದುಡಿಸಿಕೊಂಡಿದೆ. ಜನತೆಯ ಹೃದಯ ತುಡಿಯುವಂಥ ಕೃತಿಗಳ ಸೃಜನೆಯಲ್ಲಿ ಇಂದಿಗೂ ಲೀನವಾಗಿದ್ದಾರೆ.

ವಜ್ರಮಹೋತ್ಸವದ ಹೊಸ್ತಿಲಲ್ಲಿಯ ಅಲ್ಲಾಳರ ಬದುಕು ಚಿರಂತನ ಪ್ರತಿಭೆಯ ನಾಟಕ, ಚರಿತ್ರೆ ನಾಮಾವಳಿ, ಕಾವ್ಯ, ಪುರಾಣ, ವೈಚಾರಿಕ ಸಾಹಿತ್ಯದ ಒಟ್ಟು ಶತಕೃತಿಗಳನ್ನು ರಚಿಸಿ ಸಾರ್ಥಕ ಬದುಕನ್ನು ಬದುಕಿದ ಈ ರಂಗಸಾರಥಿ ರಂಗ ದಿಗ್ಗಜ, ರಂಗ ಸಾಮ್ರಾಟ.

ಪ್ರಾಥಮಿಕ ಶಾಲೆಯಲ್ಲೇ ಶಿಕ್ಷಣ ಸ್ಥಗಿತಗೊಂಡಿದೆ. ಆದರೆ ಜೀವನ ವಿಶ್ವವಿದ್ಯಾಲಯ ಅವರನ್ನು ಎತ್ತಿಕೊಂಡು ಅಕ್ಷರ ಶಿಕ್ಷಣಕ್ಕಿಂತ ಅರಿವು ಅನುಭಾವ ಶಿಕ್ಷಣ ನೀಡಿ ಸಾರಸ್ವತ ಲೋಕಕ್ಕೆ ತಳ್ಳಿದೆ. ವಿಶ್ವವಿದ್ಯಾಲಯದ ಅಧ್ಯಾಪಕ ಮಾಡದೇ ಇರುವ ಕೆಲಸವನ್ನು ಯಾವುದೇ ಆರ್ಥಿಕ ಬೆನ್ನೆಲುಬು ಇಲ್ಲದೆ, ಮಾರ್ಗದರ್ಶಕರಿಲ್ಲದೆ, ಪ್ರಶಸ್ತಿ ಪುರಸ್ಕಾರಗಳಿಲ್ಲದೆ ಮೂಲಾಜಿಗಳಿಲ್ಲದೆ ರೇಶ್ಮೆ ಹುಳುವಿನಂತೆ ನಿರಂತರ ಕಾರ್ಯಮಾಡಿದ ಸಾರ್ಥಕ ಜೀವನ ಅಲ್ಲಾಳರದು.

ನಾಟ್ಯಕವಿರತ್ನ, ಸರಸ್ವತಿ ಪುತ್ರ, ಮಹ್ಮದ್ ಫೀರ್, ಶರಣ ಸಾಹಿತಿ ಹೀಗೆ ಹಲವು ವಿಶೇಷಣಗಳಿಂದ ಗುರುತಿಸಲ್ಪಡುವ ವಿಶಿಷ್ಟ ಗುಣಗಳಿಂದ ಜನಪ್ರೀಯರಾಗಿ ಶ್ರೀಯುತ ಎಲ್.ಬಿ.ಕೆ. ಅಲ್ಲಾಳರು ಸಗರನಾಡಿನ ಮಣ್ಣಿನ ಸತ್ವ ಗಟ್ಟಿಗೊಳಿಸಿದ್ದಾರೆ. ಇಸ್ಲಾಂ

ಮತದಲ್ಲಿ ಜನಿಸಿದರೂ ಕೂಡಾ ಶರಣರ ಸಂತರ ಮಹಾತ್ಮರ ಪುಣ್ಯ ಪುರುಷರ ಮತ್ತು ವೀರಶೈವ ಧರ್ಮ ಸಿದ್ಧಾಂತಗಳ ಕುರಿತು ಕೃತಿ ರಚನೆಯಲ್ಲಿ ಅಗಾಧ ನೈಪುಣ್ಯತೆ ಪಡೆದವರು.

ಓ ನನ್ನ ಚೇತನ ಆಗುನೀ ಅನಿಕೇತನ... ಎಂಬಂತೆ ಅಲ್ಲಾಳರು ಇಸ್ಲಾಂ, ಹಿಂದೂ, ವೀರಶೈವ ಎನ್ನುವ ಗೋಡವೆಗಳನ್ನು ಸರಿಸಿ ಸಹಜ ಸರಳ ಮಾನವ ಧರ್ಮದ ಮಾರ್ಮಿಯ ಮೌಲ್ಯಗಳನ್ನು ಅಪ್ಪಿಕೊಂಡರು. ಒಪ್ಪಿಕೊಂಡರು. ಹುಟ್ಟಿದ್ದು ಇಸ್ಲಾಂ ಧರ್ಮವಾಗಿರಬಹುದು ಆದರೆ ಅಟ್ಟಿದ್ದು ಮೆಟ್ಟಿದ್ದು ಹಿಂದೂ ಧರ್ಮ. ಅದರಲ್ಲೂ ವೀರಶೈವ ಪರಂಪರೆಯ ಗೂಡಿನೊಳಗೆ ಬೆಳೆದರು. ಜ್ಞಾನ ಪರಿಧಿ ಹೆಚ್ಚಿಸಿಕೊಂಡರು. ಅಧ್ಯಯನಗೈದರು ಶಾಸ್ತ್ರವನ್ನರಿತರು ಶ್ಲೋತ್ರನ್ನೋಳಿದರು. ಪುರಾಣ ಬರೆದರು. ಚರಿತ್ರೆ ಬರೆದರು. ಆದರೆ ಕುರಾನ್ ಓದುವ ಪ್ರಯತ್ನವು ಮಾಡದೇ ಇರುವುದು ಖೇದವೆನಿಸುತ್ತದೆ ತಾನು ಹುಟ್ಟಿದ ಧರ್ಮಾಚರಣೆಯೊಂದಿಗೆ ಪರಧರ್ಮ ಸಹಿಷ್ಣತೆ ಇರಬೇಕು.

ಸೈದಾಪುರದ ಶ್ರಿ ರಾಚೇಂದ್ರ ಶೀವಯೋಗಿಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಅವರಿಂದ ದೀಕ್ಷಾ ಮೋಕ್ಷಾ ಸಂಸ್ಕಾರ ಪಡೆದ ಅಲ್ಲಾಳರು ಭಸ್ಮ ಧರಿಸಿ ಪ್ರಸಾದಿಕರಂತೆ ಊಟ ಮಾಡುವ ಶಿಸ್ತು ಅದ್ಭುತ. ನಿರಾಡಂಬರತೆ, ಸೌಜನ್ಯ, ವಿನಯ ಸರಳತೆಗಳು ಅವರ ಬದುಕಿನ ಘನತೆ ಹೆಚ್ಚಿಸಿವೆ ಬಿರುನುಡಿ ಇವರ ಬಾಯಿಯಿಂದ ಯಾವತ್ತು ಬಂದಿಲ್ಲ. ಇವರ ಮೃದುತ್ವ ಸಾಹಿತ್ಯದಷ್ಟೆ ಆಕರ್ಷಕ. ಮೋಸ ವಂಚನೆ, ಕಪಟ, ಸುಳ್ಳು ಗೊತ್ತೆ ಇಲ್ಲ. ಹೀಗಾಗಿ ರಂಗ ಭೂಮಿಯ ಕಳಕಳಿ ಹೊತ್ತ ಚಿಂತನಶೀಲರಾಗಿ ಆಡಂಬರ ಬಿಟ್ಟು ಸರಳ ಹೆಜ್ಜೆಯಲಿ ಬದುಕು ಸಾಗಿಸುತ್ತಿರುವ ರಂಗ ಸಾರಥಿ ನಿಜವಾದ ರಂಗ ಚಳುವಳಿಗಾರ ಆಗಿದ್ದಾರೆ.

# ಅಳು ನುಂಗಿ ನಗು ಒಮ್ಮೆ

ಹಿಂದುಳಿದ ಹೈದ್ರಾಬಾದ ಕರ್ನಾಟಕದಲ್ಲಿ ರಂಗಭೂಮಿಗೆ ಜೀವಂತಿಕೆಯನ್ನು ತಂದು ಅದು ಸುಸಂಪನ್ನಗೊಳಿಸುವುದರಲ್ಲಿ ಆಲ್ದಾಳರು ಪ್ರಮುಖರು. ಜನಸಾಮಾನ್ಯರಿಗೆ ದೃಶರೂಪಗಳನ್ನು ಸಮಾಜಿಕ ನೀತಿಬೋಧನೆಯನ್ನು ಕೃಷಿಗೈದಿರುವ ಸಂತೃಪ್ತಿ ಅವರಿಗಿದೆ.

ಕರಿಯನಿತ್ತಡೆ ಒಲ್ಲೆ
ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನ್ನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿ
ಒಂದರಗಳಿಗೆಯನಿತ್ತಡೆ
ನಿಮ್ಮನಿತ್ತೆ ಕಾಣಾ ಮಾಮನಾಥ ॥

ಎಂಬ ದೇವರ ದಾಸಿಮಯ್ಯನವರ ವಚನದಂತೆ ಆಲ್ದಾಳರ ಬದುಕಿಗೆ ಶರಣರ ವಚನಗಳು ತತ್ವಗಳು ಸತ್ಸಂಗಗಳು ಹೊಸತಿರುವನ್ನು ಒದಗಿಸಿಕೊಟ್ಟವು. ಹನ್ನೆರಡನೆಯ ಶತಮಾನದ ಶರಣರ ಆಚಾರ, ಕಾಯಕ, ದಾಸೋಹ ತತ್ವಗಳು ಆಲ್ದಾಳರಿಗೆ ಪ್ರೇರಣೆ ನೀಡಿವೆ. ಸದ್ದಿಲ್ಲದ ವ್ಯಕ್ತಿ ಎಂದು ಕರೆಯಿಸಿಕೊಳ್ಳುವ ಆಲ್ದಾಳರಿಗೀಗ ೭೫ ವಸಂತಗಳು. ರಂಗಭೂಮಿಯೆಂಬ ಓದದವರ ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ. ಪಡೆದವರು. ನಾಟಕ ರಂಗದಲ್ಲಿ ಹೆಮ್ಮರ ಆಲದ ಮರ. ಇದರ ಬಿಳಲುಗಳನ್ನು ಹಿಡಿದು ಜೋಕಾಲಿಯಾಡುತ್ತಿರುವ ಕಿರಿಯ ಸಾಹಿತಿಗಳು ನೂರಾರುಜನ. ಅದೆಷ್ಟೋ ಜನ ವಿಶ್ರಮಿಸಿದ್ದಾರೆ ಆಲದ ಮರದ ತಂಪಾದ ನೆರಳಿನಲ್ಲಿ.

ಸಗರ ನಾಡು ಎಂದರೆ ತತ್ವಪದಕಾರರ ಪ್ರಯೋಗಶಾಲೆ. ಅನುಭಾವಿಗಳ ಕಮ್ಮಟ. ಸಂತ, ಸಿದ್ಧ, ಅವಧೂತ, ಆರೂಡ, ಸೂಫಿಗಳ ಕೇಂದ್ರಸ್ಥಾನ ಇಂಥ ಹತ್ತೆಂಟು ಭಿನ್ನಧಾರೆಗಳನ್ನು ಒಂದುಮಾಡಿಕೊಂಡು ತನ್ನ ವಿಶಿಷ್ಟ ಸಂಸ್ಕೃತಿ ಹೊಂದಿದ ಈ ಪ್ರದೇಶದಲ್ಲಿ ಆಲ್ದಾಳರಂಥ ಆಲದ ಮರ ಹೆಮ್ಮರವಾದುದ್ದು ಈ ಮಣ್ಣಿನ ಗುಣಧರ್ಮವೇ ಸರಿ. ಆಲ್ದಾಳರು ಶರಣ ಸಂತರೂ ನಾಟಕಗಳನ್ನು ಭಕ್ತಿ ಪ್ರಧಾನ ಕಾವ್ಯಗಳನ್ನು ಕರಗತ ಮಾಡಿಕೊಂಡಿದ್ದರು. ಸಗರ ನಾಡಿನ ತಾತ್ವಿಕ ಧಾರೆಗಳನ್ನು ಅಧ್ಯಯನಗೈದಿದ್ದರು. ಇವರ ರಂಗಭೂಮಿಯ ಆಸಕ್ತಿ ಒಲವು ಕಾಳಜಿ ಉದಾತ್ತವಾಗಿತ್ತು. ನಾಟಕಗಳನ್ನು ಬರೆದಷ್ಟೆ

ಶ್ರದ್ಧೆಯಿಂದ ನಾಟಕ ಮಂಡಳಿಗಳನ್ನು ಕಟ್ಟಿಕೊಂಡು ರಂಗತಾಲೀಮು ನಡೆಸಿ ಅವುಗಳ ಪ್ರಯೋಗವಾಗುವವರೆಗೆ ಅವ್ಯಾಹತ ಹೋರಾಟ ಜಾರಿಯಲ್ಲಿರುತ್ತಿತ್ತು. ಹೀಗೆ ಆಲ್ದಾಳರು ನಾಟಕ, ಸಾಹಿತ್ಯ ಸಮಾರಂಭ, ಮಠ ಜಾತ್ರೆ, ಉತ್ಸವ, ಖಾಂಡ, ಭಜನಾಗೋಷ್ಠಿ ಹೀಗೆ ನಿರಂತರ ಕ್ರೀಯಾಶೀಲರಾಗಿದ್ದರು. ಅನನ್ಯ ಜೀವನ ಪ್ರೇಮಿಯಾದ ಆಲ್ದಾಳರು ಸಗರನಾಡಿನ ಭಾವೈಕ್ಯತೆಯ ಧ್ಯೋತಕರಾಗಿದ್ದರು. ಧರ್ಮ ಜಾತಿಗಳನ್ನು ಮೀರಿ ಬೆಳೆದ ವ್ಯಕ್ತಿ. ಆಶಾಕಿರಣ ಆಲ್ದಾಳರ ಬದುಕು ಬರಹಗಳನ್ನು ಅಧ್ಯಯನ ಮಾಡುವ ಇಂದಿನ ಪೀಳಿಗೆಗೆ ಅವಶ್ಯಕತೆ ಇದೆ.

ಜನಸಮುದಾಯದ ಮೇಲೆ ಅಗಾಧ ಪರಿಣಾಮ ಬೀರುವ ಸೂಕ್ಷ್ಮ ಮಾಧ್ಯಮವೆಂದರೆ ನಾಟಕ ಕಲೆ. ಪರರನ್ನು ನಗಿಸಿ ನೋವಮರೆಸಿ ಹೊಟ್ಟೆ ತುಂಬಿಸಿಕೊಂಡು ತನ್ನ ಜೀವನದ ನೋವ ಮರೆಯುವ ಕಲಾವಿದನ ಬದುಕು ದೂರದ ಬೆಟ್ಟದಂತೆ ಎಲ್ಲರಿಗೂ ಸುಂದರವಾಗಿ ಗೋಚರಿಸಬಹುದು, ಸಮಾಜ ಸಂಸ್ಕೃತಿ, ಧರ್ಮ, ಸಂಪ್ರದಾಯಗಳ ಉಳುವಿಗಾಗಿ ದುಡಿದ ದಾಂಡಿಗರಲ್ಲಿ ಆಲ್ದಾಳರು ಒಬ್ಬರು. ತಮ್ಮ ನೋವ ಮರೆತು ನಮ್ಮನ್ನು ನಗಿಸಿದರು.

ಇಂಥ ಮಹಾಸಾಗರ ಶಾಂತವಾಗಿ ಹರಿದರೂ ತೆರೆಗಳು ಒಳಸುಳಿಗಳು ದಡಕ್ಕಪ್ಪಳಿಸಿ ಮಣ್ಣು ಕೊಚ್ಚೊಯ್ದಿವೆ. ಒಮ್ಮೆ ಮಳ್ಳಿಯಲ್ಲಿ ತನ್ನ ತಾಯಿ ತೀಕೊಂಡಾಗ ಅಂತ್ಯ ಸಂಸ್ಕಾರಕ್ಕಾಗಿ ಮುಸ್ಲಿಂ ಬಂಧುಗಳು ಕುಂಟು ನೆಪವೊಡ್ಡಿ ಜನಾಜಾ ಕೊಡಲು ತಿರಸ್ಕಸಿದಾಗ ಇಡೀ ಊರೆ ನೆರವಿಗೆ ನಿಂತು ಮನವೊಲಿಸಿ ಇಸ್ಲಾಂ ಧರ್ಮದನ್ವಯ ಅಂತ್ಯಸಂಸ್ಕಾರ ಮಾಡಲಾಯಿತು. ಜಾತ್ಯಾತೀತ ನಿಲುವಿನ ಆಲ್ದಾಳರು ಅನೇಕ ಆಘಾತಕಾರಿ ಸಂದರ್ಭಗಳನ್ನು ಧೃತಿಗೆಡದೆ ಎದುರಿಸಿದ್ದುಂಟು. ಇವರ ಹೆಸರು ಲಾಲಮಹ್ಮದ ಬಂದೇನವಾಜ ಖಲೀಫ್ ಆಲ್ದಾಳ ಎಂದಾಕ್ಷಣ ಇವರು ಮುಸ್ಲಿಂರಾ ? ಎಂದು ಹುಬ್ಬೇರಿಸಿದ ಬಹುಮಂದಿ ನಮ್ಮಲ್ಲಿದ್ದಾರೆ. ಇವರು ನಿಂತರೂ ಬಸವ ಬಸವ ಕುಳಿತರೂ ಬಸವ ಬಸವ ಎಂದು ಉಸುರುವ ಭಕ್ತಿವಂತರು. ೨ ಗಂಡುಮಕ್ಕಳು ೧ ಹೆಣ್ಣುಮಗಳು ಅದರಲ್ಲಿ ಒಬ್ಬ ಆರ್.ಎಮ್.ಪಿ. ವೈಧ್ಯ ಇನ್ನೊಬ್ಬ ಅಂಗವಿಕಲನು ಕಿರಾಣಿ ಅಂಗಡಿ ನಡೆಸುತ್ತಾನೆ. ಹೆಣ್ಣು ಮಗಳು ಮದುವೆಯಾಗಿ ಗಂಡನ ಮನೆಯಲ್ಲಿ ಇದ್ದಾಳೆ ಇಂಥ ಆಲ್ದಾಳರ ಬರಹವೇ ಆಸ್ತಿ. ಈ ಬರಹ ಅದೆಷ್ಟರ ಮಟ್ಟಿಗೆ ಬದುಕಿಸುತ್ತದೆ ಕಾದು ನೋಡಬೇಕು.

# ಕಲಿಯೋಕೆ ಕೋಟಿ ಭಾಷೆ...

'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂಬ ಹಾಡು ಆಲ್ದಾಳರ ಬದುಕಿನ ಸಾಕ್ಷಿಪ್ರಜ್ಞೆ. ಯಾಕೆಂದರೆ ಇಸ್ಲಾಂ ಧರ್ಮವೆಂದರೆ ಉರ್ದುಭಾಷಿಕರೆಂದೇ ತಿಳಿಯಲಾಗುತ್ತದೆ. ೧೯೪೭ ಕ್ಕಿಂತ ಮುಂಚೆ ಹೈ.ಕ. ಪ್ರದೇಶದಲ್ಲಿ ಉರ್ದು ಮೋಡಿಯ ಪ್ರಭಾವವಿತ್ತು. ಆದರೆ ಆಲ್ದಾಳರು ಕನ್ನಡಾಂಬೆಯ ಸೆರಗನ್ನೆ ಹಿಡಿದು ನಡೆದದ್ದು ನೋಡಿದರೆ ಆಶ್ಚರ್ಯ ಅಭಿಮಾನ ಮೂಡುತ್ತವೆ. ಇವರ ಶಿಕ್ಷಣ ಏಳನೆಯಾದರೂ ಜೀವನಪಾಠ ಶಾಲೆಯಲ್ಲಿ ಪಿ.ಹೆಚ್.ಡಿ.ಯಾಗಿದೆ. ಸಾಹಿತ್ಯ ರಚನೆಯಲ್ಲಿ ಯಾವ ಭಾಷೆ ವಿದ್ಯಾರ್ಥಿಗಿಂತ ಕಡಿಮೆಯೇನಲ್ಲ.

ಇವರ ಕನ್ನಡಾಭಿಮಾನಕ್ಕೆ ಅವರ ಪೂರ್ವಜರ ಕೊಡುಗೆ ಅಪಾರ ೧೯೪೮ ಕ್ಕಿಂತ ಮೊದಲೇ ಶ್ರೀರಾಮಕೃಷ್ಣ ಜಠಾರ ಕೊಂಕಣಿಭಾಷೆಯಲ್ಲಿ ವಿರಚಿತ ಅವ್ಯಕ್ತ ಭೋಧಾಮೃತ ಅವ್ಯಕ್ತಭೋಧ ಕೃತಿಗಳನ್ನು ಆಲ್ದಾಳರ ಸೋದರಮಾವ ಕನ್ನಡಕ್ಕೆ ಅನುವಾದಿಸಿದ್ದರು ಶ್ರೀ ಸರ್ಪಭೂಷಣ ಶೀವಯೋಗಿಗಳು ರಚಿಸಿದ ಕೈವಲ್ಯ ಕಲ್ಪವಲ್ಲರಿಗೆ ಆಲ್ದಾಳರ ಅಜ್ಜ ಟೀಕಾ ಬರೆದಿದ್ದರೆಂದು ತಿಳಿದು ಬರುತ್ತದೆ. ಹೀಗೆ ಆಲ್ದಾಳರ ಅಜ್ಜಂದಿರು ಸೋದರ ಮಾವಂದಿರು ಕನ್ನಡ ಕಟ್ಟುವ ಕೆಲಸ ಕೈಗೊಂಡಿದ್ದರು. ಆ ವಂಶವಾಹಿನಿಯು ಆಲ್ದಾಳರ ಮೂಲಕ ಹರಿಯುತ್ತಿದೆ. ಅಪ್ಪಟ ಕನ್ನಡ ಪ್ರೇಮ ಕನ್ನಡಾಭಿಮಾನ ಭಾಷಾಜ್ಞಾನ ಮೆಚ್ಚುವಂಥದ್ದು. ಅವರ ರಕ್ತದ ಕಣಕಣದಲ್ಲೂ ಕನ್ನಡದ ಕಿಚ್ಚು ಹಚ್ಚುತ್ತಲಿದೆ. ಇಲ್ಲಿ ಆಲ್ದಾಳರ ತ್ರಿಪದಿ ಗಮನಿಸಬಹುದು.

ಕನ್ನಡವ ಬಿತ್ತೋಣ । ಕನ್ನಡ ಬೆಳೆಯೋಣ ।
ಕನ್ನಡದ ರಾಶಿ ಮಾಡೋಣ । ಕನ್ನಡಿಗೆ ।
ಕನ್ನಡದ ಕಣಜ ತುಂಬೋಣ ॥

ಎಲ್ಲ ಬಲ್ಲವರಿದ್ದರೂ ಏನಿಲ್ಲವೆಂಬಂತಿರುವ ಎಲ್.ಬಿ.ಕೆ.ಯವರ ವ್ಯಕ್ತಿತ್ವವು ಸದಾ ಚೇತೋಹಾರಿ. ಅವರು ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ತತ್ವಪಾಲಕರು. ಮುಗಿದ ಕೈ ಬಾಗಿದ ತಲೆಯನ್ನುವಂತೆ ಸರಳ ಸಜ್ಜನ ವ್ಯಕ್ತಿ. ಆದ್ದರಿಂದ ಅವರ ಸರಳತೆಯ ಸೋಪಾನಗಳೆ ಮೇಲೆತ್ತರಕ್ಕೆ ಒಯ್ಯುತ್ತಿವೆ. ಪ್ರಶಸ್ತಿ ಪುರಸ್ಕಾರಗಳ ಭಾರ ಹೆಚ್ಚುತ್ತಲಿದ್ದರೂ ಉಬ್ಬುವ ವ್ಯಕ್ತಿಯಲ್ಲ ನಿರಾಡಂಭರ ನಿರಾಳ ವಿರಳ ಶಕ್ತಿ. ಸೌಜನ್ಯ ಮೂರ್ತಿ. ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ ಎನ್ನುವಂತೆ ಇವರು ಅಳಿವಿಲ್ಲದ

ಸಾವಿಲ್ಲದ ಸಾಹಿತ್ಯ ಜಂಗಮರು. ಚರಜಂಗಮರು. ಗುರುಜಂಗಮರು. ನಡೆದಾಡುವ ವಿಶ್ವವಿದ್ಯಾಲಯದಂತಿರುವ ಆಲ್ದಾಳರು ನಾ ಎಂಬ ಪದವೆ ಗೊತ್ತಿಲ್ಲದವರು.

ರಂಗಭೂಮಿಯ ಬಗೆಗಿನ ಅವರ ನಿಜಕಾಳಜಿ ಅನನ್ಯ. ರಂಗಭೂಮಿಯ ಯಾವುದೇ ರಗಳೆ ಸಿದ್ಧಾಂತಕ್ಕೆ ಬಲಿಯಾಗದೆ ರಾದ್ಧಾಂತದ ಬಣಗಳಿಗೆ ಮರುಳಾಗದೆ ಸಮಗ್ರ ಬಣ್ಣದ ಬಣಕ್ಕೆ ಸೇರಿದ್ದರಿಂದಲೆ ರಂಗಜಂಗಮರಂತೆ ಅವರನ್ನು ಎಲ್ಲೆಡೆಗಳಲ್ಲೂ ಸಕಲ ಗೌರವಾದರಗಳೊಂದಿಗೆ ಸಲಾಮು ಹೊಡೆದು ಮಾತನಾಡಿಸುತ್ತಾರೆ. ಇವರ ಆಧ್ಯಾತ್ಮಿಕ ನಾಟಕಗಳು ರಂಗದ ಮೇಲೆ ಸರ್ವಜಾತಿಯ ಶರಣರನ್ನು ತಂದಿದ್ದಾರೆ ಹಾಗೂ ವೈಭವೀಕರಿಸಿದ್ದಾರೆ.

ಆಲ್ದಾಳರು ಮಾನವ ಜನ್ಮ ದೊಡ್ಡದು ಅದು ಹಾಳು ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ ಎಂಬ ದಾಸರ ವಾಣಿಯನ್ನು ಪಾಲಿಸಿದ್ದಾರೆ. ಬದುಕನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ನಾಡಿನ ಮೂಲೆ ಮೂಲೆಯಲ್ಲಿ ಆಲ್ದಾಳರ ಹೆಸರಿದೆ. ಸಾಧಿಸಿದರೆ ಮಾತ್ರ ಬದುಕು ಸಾರ್ಥಕ ಇಲ್ಲದಿದ್ದರೆ ಸ್ವಾರ್ಥಕವೆನಿಸುತ್ತದೆ. ಒಂದು ನೂರು ಮೌಲಿಕ ಕೃತಿಗಳನ್ನು ಲೋಕಾರ್ಪಣೆಯೆಂದರೆ ಸಾಮಾನ್ಯವೇ ? ಇವರ ಭಕ್ತಿಗೀತೆಗಳು, ಭಕ್ತಿಪ್ರಧಾನ ನಾಟಕಗಳು, ಪುರಾಣ ಚರಿತ್ರೆಗಳು ಯಶಶಿನ ಉತ್ತುಂಗಕ್ಕೇರಿವೆ. ಅವರೊಬ್ಬ ರಂಗದೇವತೆಯ ವಜ್ರಖಚಿತ ಮುಕುಟಮಣಿ ಎಂಬುದು ತಿಳಿಯುತ್ತದೆ. ಏಕೆಂದರೆ ಅಷ್ಟಾವರಣ ಷಟಸ್ಥಲಗಳನ್ನು ದೃಶ್ಯಕಾವ್ಯದ ರೂಪದಲ್ಲಿ ವಿವರಿಸುವುದೆಂದರೆ....? ನವರಸಭರಿತ ಒಂದು ನಾಟಕ ರಂಗಭೂಮಿಗೆ ಬಂದು ಪರಿಶೋಭಿಸುವುದೆಂದರೆ? ಅದರ ಹಿಂದಿನ ಶ್ರಮ ಅಗಾಧ. ಶರಣ ಸಾಹಿತ್ಯ ಇವರ ಮೇಲೆ ಗಾಢವಾದ ಪ್ರಭಾವ ಬೀಸಿದೆ. ಅಲ್ಲಮ ಬಸವಣ್ಣ ಷಣ್ಮುಖ ಶಿವಯೋಗಿಗಳ ಬದುಕು ಬರಹವನ್ನು ಆಸ್ವಾಧಿಸಿ ಅರಗಿಸಿಕೊಂಡಲ್ಲೆ ಆಧ್ಯಾತ್ಮದ ತೂಗುವ ತೊಟ್ಟಿಲು ಎನಿಸಿಕೊಂಡಿದ್ದು ಸಾರ್ಥಕ ಪಡೆಯುತ್ತದೆ.

ಸೌಜನ್ಯ ಸಜ್ಜನಿಕೆ ಇವರ ವ್ಯಕ್ತಿತ್ವದ ಹೊಳಹುಗಳು. ಸಾಮಾನ್ಯರಲ್ಲಿ ಅಸಾಮಾನ್ಯ ರೂಪ ಆಲ್ದಾಳರದು. ಓದು ಒಕ್ಕಾಲು ಬುದ್ಧಿ ಮುಕ್ಕಾಲುವೆಂಬಂತೆ ಅನುಭವವೇ ಅವರಿಗೆ ದಾರಿದೀಪವಾಯಿತು. ಬಡತನ ಕಷ್ಟಗಳೇ ಸೋಪಾನಗಾಳದವು. ಸಕಲಕಲಾವಲ್ಲಭರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೈಯಾಡಿಸಿದವರು. ಆಡು ಮುಟ್ಟದ ಗಿಡವಿಲ್ಲ ಆಲ್ದಾಳ ಬಿಟ್ಟ ವಿಷಯವಿಲ್ಲವೆಂದಂತಾಗಿದೆ. ಅವರ ಭಕ್ತಿ ಪೂರ್ಣ ಹೃದಯವೇ ಬದುಕಿಗೆ ಶಕ್ತಿ ನೀಡಿತು. ಅದರಿಂದಾಗಿಯೇ ನಾಡಿನಲ್ಲೆಲ್ಲ ಮುಕ್ತಿ ದೊರೆಯುತ್ತಿದೆ. ಹದವರಿತು ಅವರಾಡುವ ಮಾತೇ ಮುತ್ತುಗಳು. ಆ ಮಾತುಗಳೇ ಕೃತಿ ಕುಸುಮಗಳಾದವು. ಆ ಕೃತಿ ಕುಸುಮಗಳ ಸೌರಭ ವಿಶ್ವಪರಿಸರದಲಿ ಬೆರೆತು ಎಲ್ಲೆಲ್ಲು ಘಮಘಮ ಸುಮ ಸುಮ.

ಪರಿಸರದ ಎಲ್ಲ ಹೂವುಗಳು ದೇವರಿಗರ್ಪಿತವಾಗುವುದಿಲ್ಲ. ಆದರೆ ಆಲ್ದಾಳರೆಂಬ ಈ ಹೂವು ದೇವರ ಅಡಿಗೆ ಅರ್ಪಿತಗೊಂಡು ಪುನೀತವಾಗಿದೆ. ಬದುಕು ಸಾರ್ಥಕಗೊಳಿಸಿದೆ ಪೂಜೆಗೊಂಡ ಈ ಬಿಡಿ ಹೂವು. ಹೌದಲ್ಲವೇ?

# ಆಡಿಸಿ ನೋಡು... ಬೀಳಿಸಿ ನೋಡು...

ಹೈದ್ರಾಬಾದ್ ಕರ್ನಾಟಕದ ರಂಗಭೂಮಿಯನ್ನು ಅತ್ಯಂತ ಪ್ರೀತಿಯಿಂದ ಮತ್ತು ಗೌರವದಿಂದ ಬೆಳೆಸಿದ ಆಲ್ದಾಳರು ಬರೆದ ಅನೇಕ ನಾಟಕಗಳು ಈ ಪ್ರದೇಶದ ಮನೆ ಮಾತಾಗಿವೆ. ಅವರು ಬರೆದ ನಾಟಕಗಳು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಬಹುತೇಕ ಹಳ್ಳಿಗಳಲ್ಲಿ ಆಡಿಸುತ್ತಾರೆ. ಆಡುತ್ತಾರೆ.

## ಪತಿಭಕ್ತಿ

ಇದು ಆಲ್ದಾಳರ ಪ್ರಥಮ ಕೃತಿ. ಆಗಿನ ಕಾಲದಲ್ಲಿ ಮನೆಮಾತಾದ ರಂಗ ಪ್ರಯೋಗವಿದು. ೧೯೬೪ಳರಲ್ಲಿ ಪ್ರಕಟನೆಯಾದ ನಾಟಕವಿದು. ಕೌಟುಂಬಿಕ ಸಮಸ್ಯೆಯಿಂದ ಕೇಂದ್ರಿತವಾದ ನಾದಿನಿ ಶಾಂತಾ ಹಾಗೂ ಅತ್ತೆ ಕಮಲಮ್ಮ ಸೇರಿ ಸೊಸೆ ಜಮುನಾಳಿಗೆ ತೊಂದರೆ ಕೊಡುವುದಲ್ಲದೆ ಗುರುವಿನೊಂದಿಗೆ ಅಕ್ರಮ ಸಂಬಂಧದ ಅಪವಾದ ಹೊರೆಸುತ್ತಾರೆ. ಇದನ್ನು ಕೇಳಿ ಗಂಡ ಹುಚ್ಚನಾಗುತ್ತಾನೆ ಇಲ್ಲಿ ಮನೋಹರ ಖಳನಾಯಕ ಪಾತ್ರ ನಿರ್ವಹಿಸುತ್ತಾನೆ. ಪತಿವ್ರತೆ ಜಮುನಾ ಅಪವಾದಕ್ಕೆ ಹೆದರದೇ ಬದುಕಿ ಬಾಳುತ್ತಾ ಬೆಳೆಯುತ್ತಾಳೆ ಮಕ್ಕಳಿಗೆ ಉತ್ತಮ ಶಿಕ್ಷಣ ಸಂಸ್ಕಾರ ನೀಡುತ್ತಾಳೆ ಒಡೆದ ಸಂಸಾರ ಮಕ್ಕಳ ಮಧ್ಯಸ್ಥಿಕೆಯಿಂದ ಒಂದಾಗುತ್ತದೆ. ಹೀಗೆ ಸಾತ್ವಿಕದ ಮೇಲೆ ಅಸತ್ಯದ ಸವಾರಿ. ಕೊನೆಗೆ ಸತ್ಯಕ್ಕೆ ಜಯವೆಂಬುದನ್ನು ಅತ್ತೆ ನಾದಿನಿ ಜಮುನಾಳ ಮೂಲಕ ಮನಮುಟ್ಟುವಂತೆ ಕಥೆ ಹಣೆದು ಪ್ರಯೋಗಿಸಿದ್ದಾರೆ. ಭಾವಿಕಟ್ಟಿ ಪ್ರಕಾಶನದಿಂದ ಹೊರಬಂದ ನಾಟಕವಿದು. ಇದುವರೆಗೆ ೧೫ ಮುದ್ರಣ ಕಂಡಿದೆ. ಕರ್ನಾಟಕದ ತುಂಬ ಪ್ರಯೋಗ ಕಂಡಿತು. ಮಹಾರಾಷ್ಟ್ರದ ಬಾಂಬೆ ಮನೆಯಲ್ಲೂ ಇದು ಪ್ರಯೋಗ ಕಂಡಿದೆ. ಚಲನಚಿತ್ರ ನಟರಾದ ಉದಯಕುಮಾರ ಪ್ರಮಿಳಾ ಜೋಷಾಯ, ಸುಭದ್ರಮ್ಮ ಮನಸೂರ, ಕೆ. ನಾಗರತ್ನ,  ಮುಂತಾದವರು ಈ ನಾಟಕದಲ್ಲಿ ಪಾತ್ರ ಮಾಡಿದ್ದಾರೆ. ಸ್ವಂತ ಊರು ಆಲ್ದಾಳದಲ್ಲಿ ಮೊಟ್ಟಮೊದಲು ೫೦ ಪ್ರಯೋಗ ಕಂಡಿತು ಈ ನಾಟಕ.

## ಕಲಿಯುಗದ ಕನ್ಯೆ

ಇದು ಕೂಡಾ ಕೌಟಂಬಿಕ ನಾಟಕ. ೧೯೬೭ ರಲ್ಲಿ ಪ್ರಪ್ರಥಮ ಮಳ್ಳಿಯಲ್ಲಿ ಪ್ರಯೋಗಗೊಂಡು ಕರ್ನಾಟಕದಲ್ಲಿ ನೂರಾರು ಪ್ರಯೋಗ ಕಂಡಿತು.

ಕುಟುಂಬವೊಂದರಲ್ಲಿಯ ಎರಡೂ ಮಕ್ಕಳನ್ನು ಓದಲು ನಗರಕ್ಕೆ ಕಳುಹಿಸಿದ್ದ ತಂದೆ ತಾಯಿಗಳು ಏನೆಲ್ಲ ಆಕಾಂಕ್ಷೆ ನಿರೀಕ್ಷೆಗಳನ್ನಿಟ್ಟುಕೊಂಡಿರುತ್ತಾರೆ. ಸತೀಶನೆಂಬ ಮಗ ಆದರ್ಶವ್ಯಕ್ತಿಯಾಗಿ ಹೊರಹೊಮ್ಮಿದರೆ ನಾಗೇಂದ್ರನೆಂಬ ನಗರೀಕರಣಕ್ಕೆ ಬಲಿಯಾಗಿ ಕುಡಿತದಂಥ ಕೆಟ್ಟ ಚಟಕ್ಕೆ ದಾಸನಾಗಿ ಹೊರಹೊಮ್ಮುತ್ತಾನೆ. ತಂದೆಗೆ ತೊಂದರೆ ಕೊಡುತ್ತಾನೆ. ಒಮ್ಮೆ ಹಲ್ಲೆಯೂ ಮಾಡುತ್ತಾನೆ. ಕಣ್ಣು ಹೋಗಿ ಬಿಕ್ಷೆ ಬೇಡುವ ತಂದೆಯ ಕರುಣಾಜನಕ ದೃಶ ಅದ್ಬುತವಾಗಿ ಚಿತ್ರಿಸಿದ್ದಾರೆ. ಕೊನೆಗೆ ತಂದೆಗೆ ಕಣ್ಣು ಬರುತ್ತವೆ. ನಾಟಕ ಸುಖಾಂತ್ಯದಲ್ಲಿ ಕೊನೆಗೊಳ್ಳುತ್ತದೆ. ಇಲ್ಲಿ ಶೋಭಾ ಎಂಬ ಪಾತ್ರದ ಮೂಲಕ ಆದರ್ಶ ಸಂದೇಶ ನೀಡಿದ್ದಾರೆ ಇವಳೇ ಕಲಿಯುಗದ ಕನ್ಯೆ

## ನಮಸ್ಕಾರ

ಆಲ್ದಾಳರ ಬಹುತೇಕ ನಾಟಕಗಳಲ್ಲಿ ರಾಜಕೀಯದ ದುರಾಡಳಿತದ ವಿಡಂಭನೆಯೂ ಕಾಣಸಿಗುತ್ತದೆ. ಇದಕ್ಕೆ ಉದಾಹರಣೆಯು ಈ ನಾಟಕ. ೧೯೭೦ ರಲ್ಲಿ ಪ್ರಥಮವಾಗಿ ಮಳ್ಳಿಯಲ್ಲಿ ಪ್ರಯೋಗ ಕಂಡಿತು. ವೃತ್ತಿರಂಗಭೂಮಿಯಲ್ಲಿ ನೂರಾರು ಪ್ರಯೋಗ ಕಂಡಿದೆ. ಸದ್ಯ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸ್ನಾತಕೊತ್ತರ ತರಗತಿಗೆ ಪಠ್ಯಪುಸ್ತಕವಾಗಿದೆ.

ಇಲ್ಲಿ ಕಥಾವಸ್ತು ಕೌಟುಂಬಿಕಕ್ಕೆ ಸೀಮಿತವಾಗಿರದೆ ಸಮಾಜಿಕ ಮೌಲ್ಯಗಳ ಸಂದೇಶವು ಇದೆ. ಪತಿ ಅಮೃತಗೌಡ ಬ್ರಷ್ಟ, ಸತಿ ನೀಲಾ ಆದರ್ಶಳು. ನೀಲಾ ಸುಶಿಕ್ಷಿತಳೂ, ಸರಳ ಸ್ವಭಾವದವಳೂ ಬ್ರಷ್ಟಚಾರಕ್ಕೆ ವಿರೋಧ ಒಡ್ಡುತ್ತಾಳೆ. ಗಂಡನ ಬ್ರಷ್ಟಚಾರ, ದುರಾಚಾರಗಳಿಂದ ಬೇಸತ್ತು ಹೆಂಡತಿ ನೀಲಾ ಗಂಡನಿಂದ ದೂರಾಗುತ್ತಾಳೆ. ತನ್ನ ಒಂದೇ ಒಂದು ಮಗುವನ್ನು ಬೆಳೆಸಿ ಸಂಸ್ಕಾರ ಶಿಕ್ಷಣ ಕೊಟ್ಟು ಸಬ್ ಇನ್ಸಪೆಕ್ಟರ್ ಮಾಡುತ್ತಾಳೆ. ಮುಂದೆ ಮಗನ ಮೂಲಕ ಗಂಡನ ಅಕ್ರಮ ಸಂಪತ್ತೆಲ್ಲ ಜಪ್ತಿ ಮಾಡಿಸಿ ಬಂಧಿಸಲು ಯಶಸ್ವಿಯಾಗುತ್ತಾಳೆ ತನ್ನ ತಂದೆಯೆಂಬ ಸತ್ಯ ಮಗನಿಗಿರುವದಿಲ್ಲ. ಆಗ ಸತಿ(ಸತ್ಯ) ಗೆಲ್ಲುತ್ತಾಳೆ ಪತಿ (ಅಸತ್ಯ) ಸೋಲುತ್ತಾನೆ. ಗಂಡ ಹೆಂಡತಿಗಿಬ್ಬರಿಗೂ ವಾಗ್ವಾನವಾಗುತ್ತದೆ. ಕೊನೆಗೆ ಗಂಡ ಸೋಲೊಪ್ಪಿಗೊಂಡು ಶರಣಾಗುತ್ತಾನೆ.

## ಬಾಳಿಗೊಂದು ಬೆಲೆ ಬೇಕು

೧೯೭೦ ರಲ್ಲಿ ಬರೆದ ನಾಟಕವಿದು. ಈ ನಾಟಕದ ಕಥಾವಸ್ತು ವಿಚಿತ್ರವಾಗಿದೆ ಪುರಾಣ ಪುರುಷರನ್ನ ಧರೆಗಿಳಿಸಿ ಮಾನವರನ್ನು ಪಾವನಮಾಡುವ ಸಾಹಸ ಆಲ್ದಾಳರು ಈ ನಾಟಕದ ಮೂಲಕ ಮಾಡಲೆತ್ನಿಸಿದ್ದಾರೆ. ಪಾರ್ವತಿ, ಪರಮೇಶ್ವರ ಮತ್ತು ನಾರದ ಇವರನ್ನು ಭೂಲೋಕಕ್ಕೆ ತಂದು ಆದರ್ಶಮಹಿಳೆ, ನ್ಯಾಯಾಧೀಶ, ನ್ಯಾಯವಾದಿಗಳ ರೂಪದಲ್ಲಿ ಚಿತ್ರಿಸಿ ಸಂಸಾರದ ವಾಜ್ಯ ಬಗೆಹರಿಸುವ ವಿನೂತನ ಪ್ರಯೋಗ ಇದಾಗಿದೆ.

ಇಲ್ಲಿ ಕುಡುಕನೊಬ್ಬ ತನ್ನ ಹೆಂಡತಿಯ ತಂದೆ (ಮಾವ) ಯನ್ನು ಕೊಲೆ ಮಾಡುತ್ತಾನೆ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಕ್ಕಾಗಿ ಬರುತ್ತದೆ. ನಾರದ ಮಾರುವೇಶ (ದಾಸನಾಗಿ)ದಲ್ಲಿ ಕುಡುಕ ಗೌಡನ ಮನೆಗೆ ಬಂದು ದಾನ ಕೇಳುವ ಪ್ರಸಂಗ. ಅಲ್ಲಿ ಲಿಂಗವಂತ ಮತ್ತು ವೀರಶೈವ ಸಿದ್ಧಾಂತದ ಬಗ್ಗೆ ಯಥೇಚ್ಚ ವಿವರಣೆ ಇದೆ. ಪಾರ್ವತಿ ಪರಮೇಶ್ವರ ನ್ಯಾಯಾಲಯದಲ್ಲಿ ಕುಡುಕಗೌಡ ಹಾಗೂ ಆತನ ಹೆಂಡತಿಯ ಮನಸ್ಸು ಪರಿವರ್ತನೆ ಮಾಡಿಕೊಂಡು ಒಂದಾಗಿ ಬಾಳಲು ಅಣಿಯಾಗುತ್ತಾರೆ. ನಾಟಕ ಸುಖಾಂತ್ಯ ಕಾಣುತ್ತದೆ.

ಈ ನಾಟಕದಲ್ಲಿ ಸಾಮಾಜಿಕ ಮೌಲ್ಯಗಳಿವೆ. ಕೃಷಿ ಬಗ್ಗೆ ಮಾಹಿತಿ ಇದೆ. ಕುಡುಕ ಗೌಡನ ಹೆಂಡತಿ ವೈದ್ಯಳಾಗಿ ಗಂಡಸರ ಅಟ್ಟಹಾಸವನ್ನು ಮೆಟ್ಟಿ ನಿಂತು ಸ್ತ್ರೀ ಪರ ಧ್ವನಿಯಾಗುತ್ತಾಳೆ. ಚನ್ನ-ಚನ್ನಿ ಮೂಲಕ ಹಾಸ್ಯ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತಳ್ಳುತ್ತದೆ.

## ಮೂರು ಮುತ್ತುಗಳು

ಅರ್ಥಾರ್ತ ಕರಿಗೂಳೇಶ್ವರ ಮಹಾತ್ಮೆ ಇದು. ಮೇಲ್ನೋಟಕ್ಕೆ ಆಧ್ಯಾತ್ಮ ನಾಟಕವೆನಿಸಿದರೂ ಇದೊಂದು ಸುಂದರ ಕೌಟುಂಬಿಕ ನಾಟಕ. ಮೊದಲು ಪ್ರಯೋಗ ಸೇಡಂ ತಾಲೂಕಿನ ಹಂಗನಳ್ಳಿಯಲ್ಲಿ ಆಗಿ ತರುವಾಯ ತಾಲೂಕಿನ ನಾಚವಾರ, ಭೀಮನಳ್ಳಿ, ಕಟಗಿಹೊಸಳ್ಳಿ ಸೇರಿದಂತೆ ಸೇಡಂ ತಾಲೂಕು ತುಂಬಾ ಈ ನಾಟಕ ಮನೆ ಮಾತಾಯಿತು.

ಶಿವಯ್ಯ ಮತ್ತು ಶರಣಮ್ಮ ಜಂಗಮ ದಂಪತಿಗಳಿಗೆ ಮೂರು ಮಕ್ಕಳು (೧) ಕರಿಗೂಳೇಶ್ವರ(ವೈರಾಗ್ಯ ಚಕ್ರವರ್ತಿ) (೨) ರಾಮಲಿಂಗೇಶ್ವರ (ಅವಧೂತ) (೩) ಮೃಗೇಂದ್ರ (ಸಂಸಾರಿಕ ಸಾಹಿತಿ) ಹೀಗೆ ಜಂಗಮ ದಂಪತಿಗಳು ರಾಯಚೂರಿಗೆ ವಲಸೆ ಹೋಗಿ ಅಲ್ಲಿ ಬಂಡಿಗುರುವಿನ ಮಠದಲ್ಲಿ ಆಶ್ರಯ ಪಡೆದು ಮಕ್ಕಳಿಗೆ ವಿದ್ಯೆ ಸಂಸ್ಕಾರ ನೀಡಿದರು. ಬಂಡಿಗುರುಗಳಿಂದ ಮೂರು ಮಕ್ಕಳಿಗೆ ದೀಕ್ಷೆಯೂ ಆಯ್ತು ಮೂರು ಮಕ್ಕಳು ಕಿರಾಣಿ ಅಂಗಡಿ, ಬಟ್ಟೆ ಅಂಗಡಿ, ಧವಸಧಾನ್ಯದ ಅಂಗಡಿಗಳ ಕಾಯಕ ಮಾಡುತ್ತ ಶರಣ ಜೀವನ ನಡೆಸುತ್ತಾರೆ. ಕರಿಗೂಳೇಶ್ವರ ಬ್ರಹ್ಮಚಾರಿಗಾಗಿ ಉಳಿಯುತ್ತಾನೆ. ಉಳಿದಿಬ್ಬರೂ ಸಂಸಾರಿಗಳಾದರು. ಆಧ್ಯಾತ್ಮ, ಸಾಹಿತ್ಯ, ತತ್ವಗೀತೆಗಳೆಡೆಗೆ ಒಲವು ಹೀಗಾಗಿ ೧೯೬೪ ರಲ್ಲಿ ೭೦೦ ತತ್ವಪದ ಬರೆದಿದ್ದಾರೆ.

ಕರಿಗೂಳೇಶ್ವರ ಚರಸಂಚಾರಿ. ಪರತಾಬಾದಿಗೆ ಬಂದು ಅಲ್ಲೆ ಶಿಷ್ಯರ ಮನೆಯಲ್ಲೆ ಉಳಿದುಕೊಂಡು ಐಕ್ಯವಾಗುತ್ತಾನೆ. ಇಂದಿಗೂ ಜಾತ್ರೆ ನಡೆಯುತ್ತದೆ ಅಲ್ಲಿ ಮಂದಿರ ಕಟ್ಟಿದ್ದಾರೆ. ರಾಮಲಿಂಗೇಶ್ವರ ಯಾದಗಿರಿಯ ಖಾನಾಪುರದಲ್ಲಿ ಐಕ್ಯವಾಗುತ್ತಾರೆ. ಮೃಗೇಂದ್ರ ಇವರು ಸೇಡಂ ತಾಲೂಕಿನ ಎಲಿರಾಜೊಳ್ಳಿಯಲ್ಲಿ ಐಕ್ಯವಾಗುತ್ತಾರೆ. ಹೀಗೆ ಈ ಜಂಗಮ ದಂಪತಿಗಳ ತ್ರಿಸುಪುತ್ರರು ನಾಡಿಗೆ ನೀಡಿದ ಕೊಡುಗೆ ಅಪಾರ. ಜಾತಿ ಮತ ಪಂಥ ಮೀರಿ ಬೆಳೆದವರು. ಆಧ್ಯಾತ್ಮ ಸಾಹಿತ್ಯ, ಗುರುಪರಂಪರೆ ಉಳಿಸಿ

ಬೆಳಿಸಿಕೊಂಡು ಕಾಯಕದೊಂದಿಗೆ ಸರಳ ಸಹಜ ಜೀವನ ನಡೆಸಿದ ಈ ಮೂರು ಮಕ್ಕಳ ಮೌಲ್ಯಗಳನ್ನು ನಾಟಕದಲ್ಲೇ ಅದ್ಭುತವಾಗಿ ಚಿತ್ರಿಸಿದ್ದಾರೆ. ಅದಕ್ಕಾಗಿಯೇ ನಾಟಕಕ್ಕೆ ಮೂರು ಮುತ್ತುಗಳು ಎಂದು ನಾಮಕರಣ ಮಾಡಿದ್ದಾರೆ.

## ತಿಂಥಣಿ ಮೌನೇಶ್ವರ

ಈ ನಾಟಕ ಮೊಟ್ಟಮೊದಲು ಅಳ್ಳಳ್ಳಿಯ ಗದ್ದಗಿ ಮಠದಲ್ಲಿ ನೂರಾರೂ ಪ್ರಯೋಗ ಕಂಡಿತು. ಇದು ಕಾಲಘಟ್ಟದಲ್ಲಿ ಅವಶ್ಯ ಮತ್ತು ಅನಿವಾರ್ಯವಾದ ಕಥಾನಾಯಕನ ಸಿದ್ಧಾಂತವನ್ನು ಹಳ್ಳಿಯ ಮುಗ್ಧ ಜನರಿಗೆ ತೋರಿಸಿ ಕೊಟ್ಟಿತು. ಭಾವೈಕ್ಯದ ಮಂತ್ರ ಈ ನಾಟಕದ ಮೂಲ ವಸ್ತು. ಹಿಂದೂ-ಮುಸ್ಲಿಮರ ಮನಸ್ಸುಗಳನ್ನು ಕಟ್ಟುವ ಒಕ್ಕಟ್ಟಿನ ನಾಟಕವಿದು ತಿಂಥಣಿ ಮೌನೇಶ್ವರ ಎರಡನೇ ಆದಿಲ್ ಶಾಹಿಯ ದರಬಾರದಲ್ಲಿ ವಾದ ಮಾಡಿದಾಗ ಮನಸೋತ ರಾಜನು ತಿಂಥಣಿಯಲ್ಲಿ ಮಂದಿರ ಕಟ್ಟಿಸುತ್ತಾನೆ.

ಮೌನೇಶ್ವರ ವಚನಕಾರ, ಕಾಲಜ್ಞಾನಿ, ಕೊಡೇಕಲ್ ಬಸವಣ್ಣನ ಸಮಕಾಲೀನ ನೂರಾರು ವಚನಗಳನ್ನು ಬರೆದಿದ್ದಾರೆ. ತನ್ನ ವಚನಗಳಿಗೆ ಬಸವಣ್ಣನೇ ಸಾಕ್ಷಿ ಎಂದ ಮೌನೇಶ್ವರ ವಚನಾಂಕಿತವನ್ನು ಕೇಳೊ ಬಸವಣ್ಣ ಹೇಳೋ ಬಸವಣ್ಣ ಎಂದು ಬರೆದಿದ್ದಾರೆ. ಇಲ್ಲಿ ಕೆಲವು ವಚನಗಳನ್ನು ಗಮನಿಸಬಹುದು.

ಹಿಂದು ತುರುಕರಿಗೊಬ್ಬನೆ ಚಂದ್ರ
ಕುಲ ಹದಿನೆಂಟು ಜಾತಿಗೆ ಕುಲುಮೆಯೇ ದೀಕ್ಷಾಗುರು.

## ಗರತಿ ವಿಶ್ವದ ಜ್ಯೋತಿ

ಮೂವತ್ತು ವರ್ಷಗಳ ಹಿಂದೆ ಬರೆದ ನಾಟಕವಿದು. ಕಂಪನಿ ಪರಂಪರೆಯ ನಾಟಕಗಳಲ್ಲಿಯ ಎಲ್ಲಾ ವಿಶೇಷತೆಗಳು ಇಲ್ಲಿ ಕಾಣಬಹುದು. ೧೯೮೭ ರಲ್ಲಿ ರಚಿಸಿದ ಈ ನಾಟಕದಲ್ಲಿ ಎರಡು ಆಧ್ಯಾತ್ಮ ಜೀವಿಗಳ ಸುತ್ತ ಹಣೆದ ಕಥೆಯಾಗಿದೆ. ಇದು ಕಟ್ಟು ಕಥೆಯಲ್ಲ ತನ್ನ ದೈನಂದಿನ ಜೀವನದಲ್ಲಿ ಪ್ರಾರಂಭಿಸಿದ ಕಹಿ-ಸಿಹಿ ಘಟನೆಗಳನ್ನು ಕಂಡುಂಡ ಗರತಿ ವಿಶ್ವದ ಜ್ಯೋತಿಯಾಗಿ ಹೊರಬಂದ ಮಹಾತಾಯಿ ಮೊಗಲಾಂಬಿಕಾ ದೇವಿಯ ಅಪಾರ ತಪಸ್ಸಿನ ಫಲದಿಂದ ಅವಳ ಗರ್ಭದಲ್ಲಿ ಜನಿಸಿದ ಬಾಲಯೋಗಿ ರಾಜೇಂದ್ರರ ಬದುಕಿನಲ್ಲಿ ಘಟಿಸಿದ ಮಹತ್ವದ ಸಂದರ್ಭವು ನಾಟಕದ ವಿವಿಧ ಸನ್ನಿವೇಶವಾಗಿ ರೂಪಗೊಂಡಿದೆ.

ನಾಟಕದ ಆರಂಭ ಹೋಗಮಹೇಶ್ವರಿ ಮತ್ತು ಮೊಗಲಾಂಬಿಕಾ ದೇವಿಯ ಪ್ರಾರ್ಥನೆಯುಳ್ಳ ನಾಂದಿಗೀತೆಯೊಂದಿಗೆ ಆಗುತ್ತದೆ. ಹಲವು ಸನ್ನಿವೇಶಗಳು ಕಂದ ಪದ್ಯ ಅಥವಾ ಹಾಡುಗಳೊಂದಿಗೆ ಶುರುವಾಗುತ್ತದೆ. ಕನ್ನಡ ಹಿಂದಿಯ ಜನಪ್ರಿಯ

ಹಳೆಯ ಸಿನೇಮಾ ಧಾಟಿಯನ್ನು ಅನುಕರಣೆ ಮಾಡಿ ಹಾಡುಗಳ ಸಂಯೋಜನೆ ಮಾಡಿದ್ದಾರೆ. ಜೋಗುಳ ಲಾಲಿ ಪದ್ಯಗಳು ಇವೆ. ಸಾಂದರ್ಭಿಕವಾಗಿ ಅಖಂಡೇಶ್ವರ, ಮಡಿವಾಳ, ಅಕ್ಕಮಾಹಾದೇವಿ, ಅಲ್ಲಮಪ್ರಭು ಅನೇಕರ ವಚನಗಳನ್ನು ಬಳಸಿ ನಾಟಕಕಾರ ಸನ್ನಿವೇಶ ಗಟ್ಟಿಗೊಳಿಸಿದ್ದಾರೆ. ಇಲ್ಲಿಯೂ ಗಂಭೀರ ಹಾಗೂ ಹಾಸ್ಯದ ದೃಶ್ಯಗಳೂ ಇವೆ. ಶಾಮ ರಾಮ ಸೀತಾ ನಾಟಕದ ಕೊನೆವರೆಗೆ ಹಾಸ್ಯದ ಹೊನಲನ್ನು ಹರಿಸಿದ್ದಾರೆ.

ನಾಟಕದಲ್ಲಿ ಜನಪದ ನುಡಿಗಳು, ನುಡಿಗಟ್ಟುಗಳು, ಗಾದೆ ಮಾತುಗಳು ಚತುರೋಕ್ತಿಗಳು ಯಥಾವತ್ತಾಗಿ ಬಂದಿವೆ. ನಾಟಕದಲ್ಲಿ ಅತಿ ಪ್ರಾಸಬದ್ಧತೆ ಇಲ್ಲವೆಂಬುದನ್ನು ಗಮನಿಸಬಹುದು. ತಳಿರ ಮಾಮರದಂಚಿನಲ್ಲಿ ತನ್ನ ಪಂಚಮದಿಂಚರದಿಂದ ಕುಕಿಲಿಡುವ ಕೋಗಿಲೆಯಂತೆ ಇಂಥ ಕೆಲವು ವಾಕ್ಯಗಳನ್ನು ಅಲ್ಲಲ್ಲಿ ಗಮನಿಸಬಹುದಾಗಿದೆ. ಒಟ್ಟಾರೆ ಈ ನಾಟಕ ಆಧ್ಯಾತ್ಮಿಕ ವ್ಯಕ್ತಿಗಳ ಜೀವನ ಸಾಧನೆಯನ್ನು ಪರಿಚಯಿಸುತ್ತದೆ. ಇಂಥ ಅಮೂಲ್ಯ ಪೌರಾಣಿಕ ನಾಟಕದ ಮೂಲಕ ಪುಣ್ಯ ಪುರುಷರ ಪುಣ್ಯಕಾರ್ಯಗಳ ಬಗ್ಗೆ ಮನೋಜ್ಞವಾಗಿ ನಾಟಕದ ಮೂಲಕ ರಂಗಕ್ಕೆ ತಂದ ರಂಗ ಸಂತ ಆಲ್ದಾಳರಿಗೆ ಅಭಿನಂದನೆ.

## ಶರಣ-ಕಿರಣ

ತಪೋವನ ಮಠಾಧೀಶ ಅಂಕಿತದಿಂದ ಐದು ನೂರು ವಚನಗಳನ್ನು ಬರೆದ ಆಲ್ದಾಳರು ವಿಶ್ವಾರಾಧ್ಯರ ಆರಾಧ್ಯ ಭಕ್ತರು ಅಬ್ಬೆ ತುಮಕೂರಿನ ವಿಶ್ವಾರಾಧ್ಯ ಮಹಾತ್ಮೆ ಎಂಬ ನಾಟಕ ಬರೆದಿದ್ದಷ್ಟೆ ಅಲ್ಲದೆ ವಿಶ್ವಾರಾಧ್ಯರ ಕುರಿತು ಬರೆದ ಭಕ್ತಿಗೀತೆಗಳ ಸಂಕಲನವೆ ಶರಣ-ಕಿರಣವಾಗಿದೆ.

ಶರಣ-ಕಿರಣ ದಲ್ಲಿ ೪೩ ಭಕ್ತಿಗೀತೆಗಳಿವೆ. ಆಲ್ದಾಳರು ಗಣಪತಿ ಸ್ತುತಿಯಿಂದ ಭಕ್ತಿಗೀತೆಗಳ ಸಂಕಲನವನ್ನು ಪ್ರಾರಂಭಿಸಿದ್ದಾರೆ ಗಜಮುಖನೆ ಗಣಪತಿಯೆ ಧಾಟಿಯಲ್ಲಿ ಹಾಡಬೇಕೆಂದು ಸೂಚಿಸಿದ್ದಾರೆ. ಸನ್ಮತಿಯ ನೀಡೆನಗೆ ಲಂಭೋಧರನೆ ಎಂದು ಪ್ರಾರ್ಥಿಸುತ್ತಾರೆ ಇವರ ದೃಷ್ಟಿಯಲ್ಲಿ ವಿಶ್ವಾರಾಧ್ಯರು ಭವರೋಗ ವೈದ್ಯರಾಗಿ ಕಂಡಿದ್ದಾರೆ.

ಬೇಡಿದ್ದು ಕೊಡತಾನ । ದೃಢ ಭಕ್ತಿಬೇಡತಾನ ।<br>
ನುಡಿಯಂತೆ ನಡೆಯೆಂದು । ಕೈ ಹಿಡಿದು ಕೇಳ್ತಾನ ॥

## ಭಕ್ತಿಗೀತೆಗಳ ಕೆಲವು ಸಾಲುಗಳು

ಹೋಗಿ ನೋಡೋಣ ಬಾರೆ ತುಮಕುರ ಜಾತ್ರೆ<br>
ಶರಣರು ಬರತ್ತಾರ ತಂಗಿ, ಎಚ್ಚರಿರಬೇಕ

ಸಿದ್ಧರು ಬರುತ್ತರ ತಂಗಿ ನಿದ್ದಿ ಬಿಡಬೇಕ
ಹಾಲ್ಜೇನು ಸವಿದಂಗ ಶರಣ ಸಂಗದಿ ಬೆರೆದು

ದೇವರ ಪ್ರಾರ್ಥನೆಗಾಗಿ ಹುಟ್ಟಿಕೊಂಡಿರುವ ಈ ಹಾಡುಗಳಲ್ಲಿ ದೇವರ ಕುರಿತು ಶ್ರದ್ಧೆ ಭಕ್ತಿ ಅನನ್ಯತೆ ಅವಿರ್ಭವಿಸುವುದು ಸಹಜವಾಗಿ ಗಮನಿಸಬಹುದು. ಒಟ್ಟಾರೆ ಈ ಭಕ್ತಿಗೀತೆಗಳು ಭಕ್ತರನ್ನು ತಲೆ ತೂಗಿ ತಲೆಬಾಗುವಂತೆ ಮಾಡುತ್ತಾವೆ. ಇಲ್ಲಿ ಕವಿಯ ಲೋಕಾನುಭವ ಮತ್ತು ಆಧ್ಯಾತ್ಮ ಭಕ್ತಿ ತನ್ಮಯತೆಯೂ ಹೊರಹೊಮ್ಮಿದೆ.

## ಚರಬಸವೇಶ್ವರ ಮಹಾತ್ಮೆ

ದೃಶ್ಯ ಮಾಧ್ಯಮವಾದ ನಾಟಕಗಳು ಅತ್ಯಂತ ಪ್ರಭಾವಿ ಮತ್ತು ಪರಿಣಾಮಕಾರಿಯಾದ ಸಾಹಿತ್ಯ ಪ್ರಕಾರ. ಸಮಾಜ ಪರಿವರ್ತನೆಯ ಕನ್ನಡಿಯಿದ್ದಂತೆ. ಕಾವ್ಯಗಳಿಗಿಂತ ನಾಟಕ ರಮ್ಯ ನವರಸಗಳು ಚಿಮ್ಮುವ ಚಿಲುಮೆಯೆಂದರೆ ನಾಟಕಗಳು. ಆಲ್ದಾಳರ ಒಟ್ಟು ನಾಟಕಗಳಲ್ಲಿ ಪೌರಾಣಿಕ ನಾಟಕಗಳು ಅವರನ್ನು ನಾಡಿಗೆ ತೋರಿಸಿಕೊಟ್ಟವು. ಭಕ್ತಿಪ್ರಧಾನ ಮತ್ತು ಆದರ್ಶ ಸಂದೇಶ ಹೊತ್ತು ಮಹಾತ್ಮರ ಜೀವನ ದರ್ಶನ ಮಾಡಿಸುವ ಅವರ ನಾಟ್ಯ ರಚನೆಯ ಕಲೆ ಕರಗತವಾಗಿತ್ತು. ಅವರ ಶೈಲಿ ಪದಪ್ರಯೋಗ ಅದ್ಭುತವಾದ ಶಿಸ್ತಿನಿಂದ ನಾಟ್ಯಕಲೆ ಶ್ರೀಮಂತಗೋಳಿಸಿದರು. ಯಾವುದೇ ಆಡಂಬರ ಸಿದ್ಧಾಂತಗಳ ಗೋಜಿಗೆ ಹೋಗದೆ ಸರಳ ಸಹಜವಾಗಿ ಅವರ ನಾಟಕಗಳು ತೆರೆ ಕಂಡಿವೆ.

ಮಹಾತ್ಮಾ ಚರಬಸವೇಶ್ವರ ಮಹಾತ್ಮೆ ನಾಟಕವು ಅನವಾರ ಮಠದಿಂದ ಆರಂಭಗೊಳ್ಳುತ್ತದೆ. ಕಂಬಳಿ ಹೊದ್ದು ವ್ಯಾಪಾರ ಮಾಡುವ ಒಬ್ಬ ಜಂಗಮ ಪುಂಗವ ಚರಬಸವೇಶ್ವರರು ಸಮಾಜಕ್ಕೆ ನೀಡಿದ ಕಾಯಕ, ದಾಸೋಹ, ದುಡಿಮೆ, ಶ್ರಮದಾನ ತತ್ವಗಳು ಮಾನಸಿಕ ನೆಮ್ಮದಿ ನೀಡಿ ಜೀವನ ಪಾವನವಾಗುತ್ತದೆ. ಎಂಬ ಸಂದೇಶ ಈ ನಾಟಕದಲ್ಲಿ ಮಹಾದಾಸೋಹ ಶರಣ ಬಸವೇಶ್ವರ ಪರಾವರ್ತಿಗಳಾದ ಚರಬಸವೇಶ್ವರರು ಜ್ಞಾನ ರತ್ನವನ್ನಲಂಕರಿಸಿ ಕೊಂಡವರು ಮತ್ತು ಶರಣಸಂಸ್ಕೃತಿಯನ್ನು ಪಡೆದವರು. ಇವರ ಸದ್‌ಭಕ್ತಿ ಸದ್‌ವರ್ತನೆಗೆ ಶಹಾಪೂರದ ಭಕ್ತರು ಇವರಿಗಾಗಿಯೇ ಪಂಚಕಂತಿ ಮಠವನ್ನು ಸ್ಥಾಪಿಸಿದರು. ಸತ್ಯ ಶುದ್ಧವಾಗಿ ವ್ಯಪಾರ ಮಾಡುತ್ತ ಶರಣರ ಕಾಯಕವನ್ನು ಅಳವಡಿಸಿಕೊಂಡವರು. ಈ ನಾಟಕ ೧೨ನೇ ಶತಮಾನದ ಶರಣರ ಕಾಯಕವೆ ಕೈಲಾಸ ಸಿದ್ಧಾಂತದ ದರ್ಶನಮಾಡಿಸುತ್ತದೆ. ನಾಟಕದಲ್ಲಿಯ ಪಾತ್ರ ಸಂಯೋಜನೆ ತಕ್ಕುದಾಗಿದೆ ಶೀಲವಂತಯ್ಯ ಅವ್ವಮಾಂಬೆ ಚನ್ನವೀರ ಶಿವಾಚಾರ್ಯರು, ಊರ ಗೌಡ, ಸಾಹುಕಾರ, ಸುರಪೂರ ದೊರೆ ಇನ್ನಿತರ ಹಾಸ್ಯ ಪಾತ್ರಗಳು ಸೃಷ್ಟಿಸಿರುವುದು ಇವರ ನಾಟಕ ಕಲೆಗೆ ಹಿಡಿದ ರನ್ನಗನ್ನಡಿ. ಈ ನಾಟಕ ಸುವರ್ಣಮಹೋತ್ಸವ ಕಂಡಿತು. ಸಗರನಾಡಿನ ತುಂಬ ಮನೆ ಮಾತಾಯಿತು ಚರಬಸವೇಶನ ಶುದ್ಧ ಕಾಯಕ ತತ್ವ

# ಶ್ರೀ ಅಯ್ಯಪ್ಪಯ್ಯ ಮಹಾತ್ಮೆ

ಜನಪ್ರೀಯ ನಾಟಕಕಾರ ಆಲ್ದಾಳರು ಸಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ರಚಿಸಿದರು. ಆದರೆ ಜನ ಮನ ಸೆಳೆದದ್ದು ಭಕ್ತಿ ಪ್ರಧಾನ ನಾಟಕಗಳು ಅದರಲ್ಲೂ ವಿಶ್ವಾರಾಧ್ಯರ ಮಹಾತ್ಮೆ, ಜೇವರ್ಗಿ ಜ್ಯೋತಿ, ಕಡಕೋಳ ಮಡಿವಾಳೇಶ್ವರರು, ಅಯ್ಯಪ್ಪಯ್ಯ ಮಹಾತ್ಮೆ ಈ ನಾಟಕಗಳಿಂದ ಅಲ್ದಾಳ ಕವಿ ನಾಡಿಗೆ ಪರಿಚಯವಾದದ್ದು.

೧೬ನೇ ಶತಮಾನದಲ್ಲಿ ವಿಶ್ವಕರ್ಮ ಧರ್ಮ ಪರಂಪರೆಯಲ್ಲಿ ಮನುಕುಲಕ್ಕೆ ಬೆಳಕಾಗಿ ನಿಂತ ತಿಂಥಣಿ ಮೌನೇಶ್ವರರ ದಿವ್ಯ ಪಥದಲ್ಲಿ ಬಾಳಿ ಬದುಕಿದವರೆಂದರೆ ಅಳ್ಳೊಳ್ಳಿಯ ಅಯ್ಯಪ್ಪಯ್ಯನವರು. ಮೂಢ ನಂಬಿಕೆ, ಅತ್ಯಾಚಾರ, ಅನಾಚಾರಗಳನ್ನು ಖಂಡಿಸಿ ಅನುಯಾಯಿಗಳಿಗೆ ದೀಪದಂತಿದ್ದರು. ಅವರು ಸ್ಥಾಪಿಸಿದ ಮಹಾತ್ಮಾಪೀಠ ಕರ್ನಾಟಕದಲ್ಲಿ ಸುಕ್ಷೇತ್ರವಾಯಿತು.

ಈ ನಾಟಕ ವಿಶಿಷ್ಟವಾದುದು. ಇದರಲ್ಲಿಯ ಒಂದೊಂದು ಪ್ರಕರಣವೂ ನಾಟಕಕಾರರ ಅಪ್ರತಿಮ ನಿರೂಪಾಣಾ ಸಮರಕ್ಕೆ ನಿದರ್ಶನ. ನಾಟಕ ಪ್ರವಚನದಿಂದ ಆರಂಭಗೊಳ್ಳುತ್ತದೆ. ಅಯ್ಯಪ್ಪಯ್ಯರ ಮೂಲವಂಶ ಸ್ಥಳ ಪರಿಚಯ, ಜನನ, ಮೌನೇಶ್ವರರ ಅವತಾರ ಪುರುಷರಾಗಿ ಭೂಮಿಗಿಳಿದರೆಂದು, ಜಾತಿ ಮತಗಳ ಅಂತರ ಕಡಿಮೆ ಮಾಡಲು ಮೌನೇಶ್ವರರ ಆದೇಶದೊಂದಿಗೆ ಅಳ್ಳೊಳ್ಳಿಯಲ್ಲಿ ಮಹಾತ್ಮಾ ಪೀಠ ಸ್ಥಾಪನೆಯ ಅನುಗ್ರಹ ಹೀಗೆ ನಾಟಕಕಾರರು ಚಿತ್ರಿಸಿದ್ದಾರೆ.

ಮರ್ತ್ಯ ಅಮರ್ತ್ಯಗಳ ಸಂಘರ್ಷದಲ್ಲಿ ಸಾತ್ವಿಕ ಚೇತನವು ತಾಮಸಿ ಪ್ರವೃತ್ತಿಯನ್ನು ಗೆಲ್ಲುತ್ತದೆ. ಇದು ನಾಟಕದ ಮೂಲ ಆಶಯವಾಗಿದೆ. ಬಸವರೆಡ್ಡಿ ಆತನ ಧರ್ಮಪತ್ನಿ ವಸುಂಧರಾ, ಅಯ್ಯಪ್ಪಯ್ಯ ಹಾಗೂ ಅವರ ಪತ್ನಿ ಶಿವಾಂಬಿಕೆಯರು ನಿಷ್ಠೆಯಿಂದ ಎತ್ತರದ ಸ್ಥಾನದಲ್ಲಿ ನಿಲ್ಲುತ್ತಾರೆ. ಆದರೆ ಇಲ್ಲಿ ಭೀಮರಡ್ಡಿಯದು ತದ್ವಿರುದ್ಧದ ಪಾತ್ರ, ಅನ್ಯಾಯ, ಅಧರ್ಮ, ಶೋಷಣೆಯ ಪ್ರತೀಕವಾಗಿ ನಿಲ್ಲುತ್ತಾನೆ. ನಾಟಕದ ಕೆಲವು ಡೈಲಾಗಗಳು ಇಲ್ಲಿವೆ.

* ಸತ್ಯಕ್ಕೆ ಸಾವಿರ ಕಂಟಕಗಳು ಬಂದದ್ದು ಭೋಗಿಸಿ, ತಿಂದದ್ದು ಅರಗಿಸಿ ಕಳೆದದ್ದನ್ನು ಹುಡಿಕಿ ಆಳುವದೇ ಜಾಣತನ.

* ಮಕ್ಕಳು ಆಗಿಲ್ಲ ಅಂತ ಅನ್ನುವ ಚಿಂತೆ ನನಗಿಲ್ಲ ಮಠಕ್ಕೆ ಬರುವವರೆಲ್ಲ ನನ್ನ ಮಕ್ಕಳು ಅಂದಾಗ ನನಗೆ ಯಾವ ಚಿಂತೆ?

* ನಾವು ಈ ಭೂಮಿಗೆ ಬರುವಾಗ ಯಾರಿಗೂ ಹೇಳಿ ಕೇಳಿ ಬಂದಿಲ್ಲ. ಜೊತೆಗೆ ಯಾರನ್ನು ಕರೆದುಕೊಂಡು ಬಂದಿಲ್ಲ. ಇಲ್ಲಿ ನಾವು ಒಂದಾಗಿದ್ದೇವೆ ಮಧುರ ಬಾಂಧವ್ಯ ಬೆಳೆದು ಈ ಭೂಮಿಯ ಸಿರಿಯನ್ನು ಕಂಡಿದ್ದೇವೆ ಯಾರಿಗೆ ಆಶೆ ಆಕಾಂಕ್ಷೆಗಳಿರುವುದಿಲ್ಲವೋ ಅವರಿಗೆ ದುಃಖ ದುಮ್ಮಾನಗಳಿರುವುದಿಲ್ಲ.

ಒಟ್ಟಿನಲ್ಲಿ ನಾಟಕದಲ್ಲಿ ಅಯ್ಯಪ್ಪಸ್ವಾಮಿಗಳ ಅನುಗ್ರಹದಿಂದ ಖಳನಾಯಕ ಭೀಮರಡ್ಡಿಗೌಡನ ಅಟ್ಟಹಾಸ, ಅಜ್ಞಾನ, ಅಂಧಕಾರ ಗರ್ವ ದೂರಾಗಿ ಸಾತ್ವಿಕ ಶಕ್ತಿ ಒಡಮೂಡುತ್ತದೆ. ಆತನಿಗೆ ಸ್ವಾಮಿಗಳ ಅನುಗ್ರಹದಿಂದ ಜ್ಞಾನೋದಯವಾಗುತ್ತದೆ. ಭೀಮರಡ್ಡಿ ಪ್ರಾಯಶ್ಚಿತ್ತದಿಂದ ಗುರುಗಳ ಕಾಲಿಗೆ ಬೀಳುತ್ತಾನೆ.

ಈ ಸನ್ನಿವೇಶವನ್ನು ನಾಟಕಕಾರರು ಅದ್ಭುತವಾಗಿ ನಿರೂಪಿಸಿದ್ದಾರೆ. ಸಭಾಂಗಣದಲ್ಲಿ ತಾರಾವಳಿ, ಧರಾಂಗಣದಲ್ಲಿ ದೀಪಾವಳಿ, ನಿಮ್ಮ ದಿವ್ಯಂಗಣದಲ್ಲಿ ಭಕ್ತಿ ಕುಸುಮಾವಳಿ, ಜಡದಲ್ಲಿ ಚೇತನ ಶಕ್ತಿಯಾಗಿ ಅವತರಿಸಿ ಬಂದು ಮೂಢ ಭಕ್ತರ ಹೃದಯ ಬೆಳಗಿದ ನಿಮಗೆ ನಿಮ್ಮ ಚರಣಕ್ಕೆ ದಿವ್ಯಾಂಜಲಿ. ನನ್ನೆಲ್ಲಾ ಆಸ್ತಿ ತಮ್ಮ ಪಾದತಲಕ್ಕೆ ಅರ್ಪಿಸುವೆ ಹಿಡಿದೆತ್ತು ಇಲ್ಲವೆ ಬಡಿದೆತ್ತು ಎಂಬ ಭೀಮರೆಡ್ಡಿ ಮಾತುಗಳ ಮೂಲಕ ಆಲ್ದಾಳರ ಭಕ್ತಿ ಹಾಗೂ ಪ್ರಾಸ ಪದಬಳಕೆಗಳು ಅದ್ಭುತವಾಗಿವೆ.

ಒಟ್ಟಾರೆ ಈ ನಾಟಕ ಪ್ರಸಿದ್ಧಿ ಪಡೆಯಿತು. ನೂರಾರು ಪ್ರಯೋಗ ಕಂಡಿತು. ಸಧ್ಯದ ಮಠದ ಪೀಠಾಧಿಕಾರಿಗಳಾದ ಶ್ರೀ ಹಂಪಯ್ಯ ಹಾಗೂ ಶ್ರೀ ನಾಗಯ್ಯ ಸ್ವಾಮಿಗಳವರು ಸಂಗೀತ ನಾಟ್ಯಕಲೆಗಳ ಆರಾಧಕರು. ಹೆಗ್ಗೋಡಿನಲ್ಲಿಯ ನೀನಾಸಂನಂತೆ ನಾನಾಸಂ ಎಂಬ ನಾಟ್ಯ ಸಂಘ ಕಟ್ಟಿ ಅತ್ಯಾಧುನಿಕ ರಂಗಸಜ್ಜಿಕೆ ಹೊಂದಿಸಿ ಅಯ್ಯಪ್ಪಯ್ಯ ಮಹಾತ್ಮೆ ನಾಟಕವನ್ನು ನೂರಾರು ಪ್ರಯೋಗದಲ್ಲಿ ನಾಡಿಗೆ ಸಂದೇಶ ನೀಡಿದರು. ನೂರಾರು ರಂಗ ಕಲಾವಿದರನ್ನು ಗುರುತಿಸಿದರು.

## ಹಾರಕೂಡ ಚನ್ನಬಸವೇಶ್ವರ ಮಹಾತ್ಮೆ

ಆಲ್ದಾಳರ ಪೌರಾಣಿಕ ನಾಟಕಗಳಲ್ಲಿಯೇ ಖ್ಯಾತಿಪಡೆದ ನಾಟಕವೆಂದರೆ ಹಾರಕೂಡ ಚೆನ್ನಬಸವೇಶ್ವರರ ಮಹಾತ್ಮೆ. ಕೆಲವೇ ವರ್ಷಗಳ ಹಿಂದೆ ಲಿಂಗೈಕ್ಯರಾದ ಪುಣ್ಯಪುರುಷರ ಕಥೆಯನ್ನು ನಾಟಕಕ್ಕಿಗಿಳಿಸುವದು ಸುಲಭದ ಕೆಲಸವನ್ನಲ್ಲ. ಪಾತ್ರಗಳ ರಚನೆ ಸಂಭಾಷಣೆಯ ಚೌಕಟ್ಟು ಸೊಗಸಾಗಿ ಮೂಡಿ ಬಂದಿದೆ. ಈ ನಾಟಕದಲ್ಲಿಯ ಬಿಂದುಮಾಧವನ ಪಾತ್ರ ಪ್ರಮುಖವಾದುದು. ಖಳನಾಯಕ ಪಾತ್ರವನ್ನು ಶ್ರೀಧರ ಹೆಗಡೆಯವರು ಅಭಿನಯಿಸಿದ್ದಾರೆ. ಗುಲಬರ್ಗಾದಲ್ಲಿ ಕುಮಾರೇಶ್ವರ ನಾಟ್ಯಸಂಘ ಹಾನಗಲ್ ಅವರ ನಾಟಕ ಪ್ರಾರಂಭೋತ್ಸವಕ್ಕೆ ಹಾರಕೂಡ ಮಠದೊಡೆಯರಾದ ಚನ್ನವೀರ ಶಿವಾಚಾರ್ಯರು ನಾಟಕ ಉದ್ಘಾಟಿಸಿ ಸತತ ಮೂರು ದಿನಗಳ ಕಾಲ ನಾಟಕ ವೀಕ್ಷಿಸಿ ಆಲ್ದಾಳರಿಗೆ ಪ್ರೇರಣೆ ಮತ್ತು ಆಶೀರ್ವಾದ ಮಾಡಿದನ್ನು ಗಮನಿಸಬಹುದು.

ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಹಾರಕೂಡದ ಸಧ್ಯದ ಪೀಠಾಧಿಪತಿಗಳು ಸಾಹಿತ್ಯ ಪ್ರೇಮಿಗಳು ಇತ್ತಿಚಿಗೆ ಆಲ್ದಾಳರಿಗೆ ಚನ್ನಬಸವ ಪ್ರಶಸ್ತಿ ನೀಡಿ ಗೌರವಿಸಿದೆ. ಗೀತೆಗಳು ಜನಪದ ಜಂಗಮ(೧೦೦೦ ತ್ರಿಪದಿಗಳು)ಗಳನ್ನು ಬರೆದಿದ್ದಾರೆ. ಈ ಮಠದ ಒಡೆಯರು ಆಲ್ದಾಳರನ್ನು ಬೆನ್ನುತಟ್ಟಿ ಮೇಲಕ್ಕೆತ್ತುವದರಲ್ಲಿ ಮಾತೃವಾತ್ಸಲ್ಯ ಮೆರೆದಿದ್ದಾರೆ. ಆಲ್ದಾಳರ ಅಭಿನಂದನಾ ಗ್ರಂಥ ರಂಗಸಂತ ಜಂಗಮ ಎಂಬ ಉದ್ಗ್ರಂಥವನ್ನು ಶ್ರೀಮಠವೆ ಪ್ರಕಟಿಸಿದೆ.

## ಶರಣ ಸಿಂಚನ

ಸೇಡಂನ ಶರಣ ಜೀವಿ ಶ್ರೀ ಸಿದ್ರಾಮಪ್ಪ ತಳ್ಳಳ್ಳಿಯವರ ಜೀವನ ಪರಿಚಯದ ಕಿರುಹೊತ್ತಿಗೆ. ಇದರಲ್ಲಿ ೩೧ ತಲೆಬರಹಗಳಿವೆ. ಅವರ ಜೀವನದ ವಿವಿಧ ಮುಖಗಳನ್ನು ಕಷ್ಟಸುಖಗಳನ್ನು ಸಹಾಯ ಸಹಕಾರ ಗುಣಗಳನ್ನು ಮಾರ್ಗದರ್ಶನದ ಮಾದರಿಯನ್ನು ವಿವರಿಸಲಾಗಿದೆ. ಈ ಕೃತಿಯಲ್ಲಿ ಪ್ರಾಚೀನ ಕಾಲದ ಅವಿಭಕ್ತ ಕಟುಂಬ, ಗ್ರಾಮೀಣ ಜನರ ನಡೆ–ನುಡಿ, ಮುಗ್ಧ ಭಾವ ಸ್ವಭಾವ ಕುರಿತ ಚಿತ್ರಣವಿದೆ.

ಶರಣಸಿಂಚನ ಪುಸ್ತಕದಲ್ಲಿ ಶರಣ ಜೀವಿ ತಳ್ಳಳ್ಳಿಯವರ ಜೀವನಾದರ್ಶಗಳ ಪರಿಚಯ ಮಾಡುವದರ ಮೂಲಕ ಇತರರಿಗೆ ಮಾದರಿಯ ಮಾರ್ಗದರ್ಶನ ಮಾಡಿದ್ದಾರೆ. ಅದರೊಂದಿಗೆ ಗ್ರಾಮೀಣದ ಬದುಕಿನ ವಿವರಗಳನ್ನು ಕೊಟ್ಟಿದ್ದಾರೆ. ತಳ್ಳಳ್ಳಿ ಪರಿವಾರದ ಗೌರವಯುತ ಭಾವನಾತ್ಮಕ ಸಂಕೇತವೆಂದರೆ ೧೯೭೭ ರಲ್ಲಿ ಪ್ರಾರಂಭವಾದ ನೀಲಕಂಠ ಪುಸ್ತಕ ಅಂಗಡಿ. ಈ ಅಂಗಡಿಯ ಮೂಲಕ ನಾಡಿನ ಅನೇಕ ಹಿರಿಕಿರಿ ಸಾಹಿತಿಗಳ ಸಾಹಿತ್ಯವನ್ನು ಉಣಬಡಿಸಿದ ಪ್ರೇರಣೆ ನೀಡಿದ ಪ್ರೇರಣಾಕೇಂದ್ರವು ಇದಾಗಿದೆ.

ಒಟ್ಟಿನಲ್ಲಿ ಈ ಕೃತಿಯಲ್ಲಿ ಸಿದ್ರಾಮಪ್ಪ ತಳ್ಳಳ್ಳಿಯವರ ಬಾಲ್ಯ, ಬದುಕು, ಕೃಷಿ, ವ್ಯಾಪಾರ, ದುಡಿಮೆ, ಪ್ರಾಮಾಣಿಕತೆ ಇತ್ಯಾದಿ ವಿವರಗಳು ಓದುಗರಿಗೆ ಪ್ರಭಾವ ಬೀರುತ್ತದೆ.

## ತವನಿಧಿ

ಶರಣರ ಸತ್ಪುರುಷರ ದರ್ಶನ ಭಾಗ್ಯದಿಂದ ಸನ್ಮಾರ್ಗವೆಂದರೆ ಅವರ ಆಚಾರ ವಿಚಾರ ಜೀವನ ಚರಿತ್ರೆಯ ಪಾರಾಯಣದಿಂದಲೂ ಸನ್ಮಾರ್ಗ ದೊರೆಯುತ್ತದೆ. ಪೂಜ್ಯ ಶ್ರೀ ಕಾರ್ತಿಕೇಶ್ವರ ಶಿವಾಚಾರ್ಯರ ಜೀವನ ಚರಿತ್ರೆಯು ತವನಿಧಿ ಹೆಸರಿನಿಂದ ಬೆಳಕು ಕಾಣುತ್ತಿರುವುದು ನಿಜಕ್ಕೂ ತವನಿಧಿಯೇ ಆಗಿದೆ.

ತವನಿಧಿ ಒಂದು ಜೀವನ ಚರಿತ್ರೆಯೊಂದಿಗೆ ಮೂವರು ಸತ್ಪುರುಷರ ಪರಿಚಯ ನೀಡುವ ಅಕ್ಷಯನಿಧಿ ಕಾರ್ತಿಕೇಶ್ವರ ಶಿವಾಚಾರ್ಯರ ಜೀವನದೊಂದಿಗೆ ಅವರಿಗೆ ಗುರುವಾಗಿ ದಾರಿ ತೋರಿರುವ ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳ ಮಹತ್ವ ಒಂದಾದರೆ, ಪೂಜ್ಯರ ಸಹೋದರ ನೀಲಕಂಠಯ್ಯಾ ಅವರ ಬದುಕಿನ ಪರಿಚಯ ಇನ್ನೊಂದಾಗುತ್ತದೆ. ಜೀವನ ಚರಿತ್ರೆ ಬರೆಯುವುದು ದೊಡ್ಡದೇನಲ್ಲ ಆದರೆ ಬರೆಯುವ ಬಗೆ ಅದರಲ್ಲೂ ಸತ್ಪುರುಷರ ಜೀವನ ಚರಿತ್ರೆ ಪರಿಪೂರ್ಣವಾಗಿ ವಿಷಯ ಮನೋಗತ ಮಾಡಿಕೊಂಡು ಬರೆಯುವ ವಿಶೇಷ ಶೈಲಿ ಎಲ್.ಬಿ.ಕೆ. ಆಲ್ದಾಳರದಾಗಿದೆ. ಸಾಂದರ್ಭಿಕವಾಗಿ ಡಿವಿಜಿಯವರ ಮಾತುಗಳು ತತ್ವಪದಗಳು ವಚನಗಳ ಬಳಕೆ

ಜಾಣ್ಮೆಯನ್ನು ಎತ್ತಿ ತೋರಿಸುತ್ತದೆ. ಒಂದಡೆ ಸತ್‌ಚಾರಿತ್ರ್ಯ ಇನ್ನೊಂದೆಡೆ ಸತ್‌ಪಥದ ಗ್ರಂಥಕರ್ತರು ಹೀಗಾಗಿ ತವನಿಧಿ ಸಾಹಿತ್ಯ ಲೋಕದ ಅಮೂಲ್ಯ ಸಂಪತ್ತಾಗಿದೆ.

## ಕಾಶೀ ಪ್ರವಾಸ ಕಥನ

ಇದು ಎಲ್.ಬಿ.ಕೆ. ಆಲ್ದಾಳರ ಏಕೈಕ ಪ್ರವಾಸ ಕಥನ. ಜೇವರ್ಗಿ ತಾಲೂಕಿನ ಶಕಾಪೂರ ತಪೋವನ ಮಠದೊಡೆಯರಾದ ಶ್ರೀ ಸಿದ್ದರಾಮ ಶಿವಾಚಾರ್ಯರ ಜೊತೆ ಕೈಗೊಂಡ ಪ್ರವಾಸದ ವಿವರಗಳನ್ನು ಈ ಕೃತಿಯಲ್ಲಿ ಕೊಟ್ಟಿದ್ದಾರೆ. ಪ್ರವಾಸದ ಅಗತ್ಯತೆ, ಮಹತ್ವ, ಪ್ರವಾಸದ ಸಂದರ್ಭ, ಶ್ರೀಗಳ ಸನ್ಮಾನ, ಧರ್ಮಸಭೆ, ಭಾಷಾಭಿಮಾನ, ಪುಣ್ಯಕ್ಷೇತ್ರ ದರ್ಶನ ಇತ್ಯಾದಿ ವಿಷಯಗಳೊಂದಿಗೆ ಪ್ರಯಾಣದ ವಿವರಗಳನ್ನು ಅಚ್ಚುಕಟ್ಟಾಗಿ ಬರೆದಿದ್ದಾರೆ. ಹೀಗೆ ಸರಳ ಸುಂದರ ಶೈಲಿಯ ಮೂಲಕ ಎಲ್ಲೂ ಉತ್ಪ್ರೇಕ್ಷ ಇಲ್ಲದಂತೆ ಓದುಗನಿಗೆ ಪ್ರಯಾಣಿಸುವ ಮಹಿಮೆ ಹಾಗೂ ಪ್ರಚಲಿತದಲ್ಲಿರುವ ಕಥೆಗಳನ್ನು ನಿರೂಪಿಸಿದ್ದಾರೆ.

# ರಂಗ ಸಂತ ಜಂಗಮ

ಎಲ್.ಬಿ.ಕೆ. ಆಲ್ದಾಳರ ಸಮಗ್ರ ಬದುಕು ಹಾಗೂ ವ್ಯಕ್ತಿತ್ವ ಕರ್ತೃತ್ವದ ಪರಿಚಯ ಕೊಡುವ ಅಭಿನಂದನ ಪುಸ್ತಕವಿದು. ರಂಗ ಸಂತ. ರಂಗ ಎಂದರೆ ಬಣ್ಣ, ಸಂತ ಎಂದರೆ ಸನ್ಯಾಸಿ ಅರ್ಥಾತ್ ರಂಗಭೂಮಿಯ ತಪಸ್ವಿ ಎಂದಾಗುತ್ತದೆ. ಆಲ್ದಾಳರು ಖಾಸಗಿ ಬದುಕನ್ನು ಲೆಕ್ಕಿಸದೆ ನಾಟಕ ಪ್ರಪಂಚದಲ್ಲಿ ತಪಸ್ವಿಯಂತೆ ಸನ್ಯಾಸಿಯಂತೆ ಏಕಾಗ್ರತೆಯಿಂದ ಸುಣ್ಣದ ಬದುಕನ್ನು ದಿಕ್ಕರಿಸಿ ಬಣ್ಣದ ಬದಕನ್ನು ಕಟ್ಟಿಕೊಂಡ ಈ ಸಾಧಕ ಆಲ್ದಾಳ ಮಾಸ್ತಾರ. ಇನ್ನೂ ರಂಗ ಜಂಗಮ ಎಂದರೆ ರಂಗಭೂಮಿಯ ಶ್ರೇಯಸ್ಸಿನೊಂದಿಗೆ ಚರಜಂಗಮನಾಗಿ ಅಲೆದ ಈ ಅಲ್ದಾಳ ಕವಿ ಅನುಭಾವ ಕವಿ. ಆಲ್ದಾಳರು ಜಂಗಮ ಮೂರ್ತಿಯಾಗಿ ಇಸ್ಲಾಂ ಧರ್ಮದ ಕಟ್ಟಳೆಗಳನ್ನು ಕಡೆಗಣಿಸಿ ನಾಡಿನೆಲ್ಲ ಮಠಗಳಿಗೆ ಆಲೆದಾಡಿದ. ಆಧ್ಯಾತ್ಮಿಕ, ಪುರಾಣ, ಪ್ರವಚನ, ತತ್ವಪದ, ಕಾವ್ಯ, ನಾಟಕ, ಗೀತೆ, ರೂಪಕ, ಕೀರ್ತನ, ನಾಮಾವಳಿ, ಚರಿತ್ರೆಗಳ ಹುಡುಕುತ್ತಾ ಬಹುದೂರ ಶ್ರಮಿಸಿದ್ದಾನೆ ಸಾಧನೆಯ ಹಾದಿಯನ್ನು ಈ ರಂಗ ಸಂತ ಜಂಗಮ.

ಆಲ್ದಾಳರ ಬಹುಶೃತ ಜ್ಞಾನದ ಬದುಕಿಗೆ ಹಿಡಿದ ಸಾರ್ಥಕ ಕನ್ನಡಿ ಈ ಶಿರೋನಾಮೆ. ಅವರ ಇಡೀ ಸಾಧನೆಯ ವೇದಿಕೆಯಾಗಿದೆ .ಈ ಅಭಿನಂದನ ಗ್ರಂಥ ನಾಡಿನ ಒಟ್ಟು ೭೩ ಜನ ಹಿರಿಯ ಸಾಹಿತಿಗಳು ಒಡನಾಡಿಗಳ ಹೃದಯ ಮಿಡಿತ ಇದರಲ್ಲಿ ಹಿಡಿದಿಡಲಾಗಿದೆ ಮೊದಲರ್ಧ ಭಾಗ ಆಲ್ದಾಳರ ಬಡತನದ ಬದುಕು, ಜೀವನ ವ್ಯಥೆ, ಬರೆಹ, ಸಾಹಸದ ಕಾರ್ಯಗಳಿದ್ದರೆ, ಇನ್ನರ್ಧದರಲ್ಲಿ ಅವರ ಕೃತಿಗಳ ವಿಮರ್ಶೆಗಳಿವೆ. ಕೊನೆಯಲ್ಲಿ ಸಾಧಕನ ಸಾಂದರ್ಭಿಕ ಛಾಯಾ ಚಿತ್ರಗಳಿವೆ.

ಅನುಭಾವ ಕವಿ ನಾಟಕ ಸಾಹಿತ್ಯಾಶಿರೋಮಣಿ ಎಲ್.ಬಿ.ಕೆ. ಆಲ್ದಾಳರ ಅಭಿಮಾನಿಗಳು ಒಪ್ಪಿಸಿದ (ಅರ್ಪಿಸಿದ) ಅಭಿನಂದನ ಗ್ರಂಥವಿದನ್ನು ೨೦೧೦ರಲ್ಲಿ ಜೇವರ್ಗಿಯಲ್ಲಿ ಬಿಡುಗಡೆಗೊಳಿಸಲಾಯಿತು. ಇದರ ಪ್ರಕಾಶನವನ್ನು ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಸುಕ್ಷೇತ್ರ ಹಾರಕೂಡ ತಾ. ಬಸವಕಲ್ಯಾಣ ಇವರು ನಿರ್ವಹಿಸಿದರು. ಈ ಪುಸ್ತಕದ ಗೌರವ ಸಂಪಾದಕನಾಗಿ ಡಾ॥ ವಸಂತ ಕುಷ್ಟಗಿ ಹಾಗೂ ಸಂಪಾದಕರಾಗಿ ಎಸ್.ಕೆ. ಬಿರಾದಾರ ಹಾಗೂ ಶಿವಕವಿ ಹಿರೇಮಠ ಕೆಲಸ ಮಾಡಿದ್ದಾರೆ. ಈ ಉದ್ಗ್ರಂಥ ಹೊರಬರಲು ಅಶೋಕ ಸಾಹು ಗೋಗಿ ಡಾ॥ ಪಿ.ಎಂ. ಮಠ, ಶಂಕರಗೌಡ ಹಾಲಗಡ್ಲಾ, ಸೋಮಶೇಖರ ಬಂಡಿ, ಶಿವಕುಮಾರ ಬಿದರಿ,

ಪಡಶೆಟ್ಟಿ, ಕಮರಿಮಠ, ಮಹಿಮೂದ ಪಟೇಲ, ಘಂಟಿಮಠ, ಶಿವಾನಂದ, ಪ್ರಾಣೇಶ ಕುಲಕರ್ಣಿ, ರಾಮಶೆಟ್ಟಿ ಹುಗ್ಗಿಯಲ್ಲದೆ ಅನೇಕರು ಶ್ರಮಿಸಿದ್ದಾರೆ.

ಈ ಅಭಿನಂದನ ಗ್ರಂಥದೊಂದಿಗೆ ಅದ್ದೂರಿ ಅಭಿನಂದನ ಕಾರ್ಯಕ್ರಮವನ್ನು ಜೇವರ್ಗಿಯಲ್ಲಿ ಹಮ್ಮಿಕೊಳ್ಳಲಾಗಿತ್ತು ನಾಡಿನ ಅನೇಕ ಸಾಹಿತಿಗಳು, ನಾಟಕಕಾರರು, ಹಿರಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಶೋಭೆ ಮತ್ತು ಶ್ರೇಯಸ್ಸು ತಂದುಕೊಟ್ಟರು.

# ಜನಪದ ಜೇನು

ಕನ್ನಡದ ಕಣ್ವ ಬಿ.ಎಂ.ಶ್ರೀ ಅವರು ಹೇಳಿಕೆಯಂತೆ ಜನವಾಣಿ ಬೇರು ಕವಿವಾಣಿ ಹೂವು ಶಿಷ್ಟ ಸಾಹಿತ್ಯಕ್ಕೆ ಜನಪದವೇ ಮೂಲ. ಶ್ರಮ ಜೀವಿಗಳ ದುಡಿಯುವರ ಬದುಕಿನ ಒಂದು ಸೆಲೆಯೆಂದರೆ ಜನಪದ ಸಾಹಿತ್ಯ. ಹೀಗೆ ಶ್ರಮಸಂಸ್ಕೃತಿಯಿಂದ ಒಡಮೂಡಿದ ಈ ಜನಪದ ಸಾಹಿತ್ಯದಲ್ಲಿ ತ್ರಿಪದಿಗಳು ತಮ್ಮದೇ ಆದ ಭಾವ, ನಾದ, ಲಯಗಳಿಂದ ಕೂಡಿವೆ.

ಎಲ್.ಬಿ.ಕೆ. ಆಲ್ದಾಳರನ್ನು ವೃತ್ತಿ ನಾಟಕ ಕ್ಷೇತ್ರದಲ್ಲಿ ಗುರುತಿಸಬಹುದು. ಇವರ ಪ್ರತಿಭೆ ಹತ್ತು ಹಲವು ಮುಖಗಳಲ್ಲಿ ಜಾನಪದ ತ್ರಿಪದಿಗಳು ಒಂದು ಮುಖ. ಜನಪದ ಜೇನು ಎಂಬ ಪುಸ್ತಕದ ಮೂಲಕ ಅವರೊಬ್ಬ ಜಾನಪದ ಕವಿಯೆಂಬುದನ್ನು ರುಜುವಾತು ಪಡಿಸಿದ್ದಾರೆ. ಇದರಲ್ಲಿ ನಾಲ್ಕು ನೂರು ತ್ರಿಪದಿಗಳಿವೆ. ಛಂದಸ್ಸು ಅಲಂಕಾರ ಮತ್ತು ಪ್ರಾಸಗಳು ತ್ರಾಸವಿಲ್ಲದೆ ಒಡಮೂಡಿವೆ ಪ್ರಾಸಭದ್ಧತೆ ತ್ರಿಪದಿಗಳ ಸೌಂದರ್ಯ ಹೆಚ್ಚಿಸಿದೆ. ಯಾವುದೇ ಒಂದೇ ವಿಷಯಕ್ಕೆ ಸಿಮೀತವಾಗಿರದೆ ವಿಷಯ ವೈವಿಧ್ಯತೆ ಇದೆ. ಬದುಕು ,ಸಮಾಜದ ಲೋಪ ದೋಷಗಳು, ಮಠ ಮಂದಿರ, ದೇವರು ಧರ್ಮ, ನಡೆ ನುಡಿ, ಮೌಢ್ಯ ಮೌಲ್ಯ, ಸ್ತ್ರೀ ಪರ ಸಂವೇದನಶೀಲತೆ ಗ್ರಾಮೀಣ ನಗರ ಜೀವನದ ಅಂತರ, ನಾಡು ನುಡಿ, ಗುರು ಹಿರಿಯರು, ಬಡತನ ಸಿರಿತನ, ಬದುಕಿನ ವ್ಯಕ್ತಿಯ ವಿವಿಧ ಮಜಲುಗಳನ್ನು ತ್ರಿಪದಿಗಳ ಮೂಲಕ ಜನಪದ ಸಂಪತ್ತನ್ನು ಹೆಚ್ಚಿಸಿದ್ದಾರೆ ಹಾಗೂ ನಾಡಿಗೆ ಹಂಚಿದ್ದಾರೆ .

* ಆಕಳ ಹೈನಿರಲು । ಅರಿವುಳ್ಳ ಪತಿಯಿರಲು  
ಲೋಕ ಬೆಳಗು ಮಗನಿರಲು । ನನಮಗಳ  
ನಾಕ ನೋಡವ್ವ ನಿನ್ನ ಮನೆಯು ॥

* ಮಕ್ಕಳ ಸಲುವಾಗಿ ಮರಗೋದು । ಮರಗೊದು ಬ್ಯಾಡವ್ವ  
ಸಿಕ್ಕ ದೇವರಿಗಿ ಹರಕಿ ಹೊರಬ್ಯಾಡ । ನನಮಗಳ  
ಮುಕ್ಕಣ್ಣ ಮಗನೆಂದು ನೀ ನಲಿಯ ॥

* ಲಂಚ ತಿಂದವರೆಲ್ಲ । ಮಂಚದ ಮ್ಯಾಲೇರಿ  
ವಂಚಿಸಿ ನಡಿತಾರ ಜಗದಾಗ । ಒಂದಿನ  
ಕುಂಚಿ ಕೊರವೇರಂಗ ತಿರಗ್ತಾರ ॥

* ಗುರುವಿಗೆ ನೆನೆಯುತ್ತ । ಗುರುವಿಗೆ ಬಾಗುತ್ತ
ಗುರು ಎನುತ ಕಾಲ ಕಳದೇನ । ವಿಶ್ವಾರಾಧ್ಯನ
ಅರಿವಿನ ದಾರಿ ತೋರ್‍ಯಾನ ॥

* ಹಾಲುಂಡ ತವರೀಗಿ । ಏನೆಂದು ಹರಸಲಿ
ಹಾಲುಕ್ಕಿ ಹಳ್ಳ ಹರಿಯಲಿ । ನನ ತವರು
ಹಾಲು ಬಾನವು ನಿತ್ಯ ಹಂಚಲಿ ॥

* ಕನ್ನಡವ ಬಿತ್ತೋಣ । ಕನ್ನಡವ ಬೆಳೆಯೋಣ
ಕನ್ನಡ ರಾಶಿ ಮಾಡೋಣ । ಕನ್ನಡಿಗ
ಕನ್ನಡದ ಕಣಜ ತುಂಬೋಣ ॥

* ಮನೆಮುಂದ ಗಿಡವಿರಲಿ । ಮನದಾಗ ನಯವಿರಲಿ
ಮನೆಗೆ ಬಂದವರಿಗಾದರಿಸ । ನನ ಮಗಳಾ
ಮನೆಯೆಂಬುದು ಕೈಲಾಸ ನೋಡವ್ವಾ ॥

* ಕೋಲಾಟ ಆಡುತ್ತ । ಕಾಲ್ಗೆಜ್ಜೆ ನುಡಿಸುತ್ತ
ಹಾಲ್ಜೇನಿನಂಗ ಬೆರೆಯೋಣ । ನನಗೆಳತಿ
ಮೇಳೈಸಿ ನಾವೆಲ್ಲ ಹಾಡೋಣ ॥

# ಅಲ್ಲಾಳರು ಕಲಬುರಗಿಯ ಕಬೀರ

ಐನೂರಾ ಒಂದು ಆಧುನಿಕ ವಚನಗಳನ್ನು ಹೊತ್ತುನಿಂತ ಹೆಮ್ಮರವೆಂದರೆ ವಚನವಾಹಿನಿ ಎಂಬ ಉತ್ಕೃಷ್ಠ ಪುಸ್ತಕ. ಇದರಲ್ಲಿಯ ಎಲ್ಲ ವಚನಗಳನ್ನು ನಾವು ಪಚನ ಮಾಡಿಕೊಂಡರೆ ಶ್ರೀ ಅಲ್ಲಾಳರ ವ್ಯಕ್ತಿತ್ವದ ದರ್ಶನವಾಗುತ್ತದೆ.

ಅಲ್ಲಾಳರು ಪ್ರವೃತ್ತಿಯಿಂದ ವೀರಶೈವ ತತ್ವಪ್ರೇಮಿಗಳು. ಇಸ್ಲಾಂ ಧರ್ಮದಲ್ಲಿ ಹುಟ್ಟಿದರೂ ಅಟ್ಟಿದ್ದು ಮೆಟ್ಟದ್ದು ವೀರಶೈವ ಪರಂಪರೆ ಮಠಮಂದಿರಗಳೆ ಅವರನ್ನು ಹದಗೊಳಿಸಿದ ಕುಲುಮೆಗಳೆನ್ನಬಹುದು. ಕಲ್ಬುರ್ಗಿಯ ಕಬೀರ ನಾಮಖ್ಯಾತಿಯ ಈ ರಂಗಸಂತ ಜಂಗಮ ಮಾನವ ಧರ್ಮದ ಚೇತನವಾದರು. ಅನಿಕೇತನವಾದರು. ಧರ್ಮ ಜಾತಿ ಮತ ಪಂಥಗಳೆಂಬ ಎಲ್ಲೆಯನು ದಾಟಿ ಆಚರಣೆ ಮೂಢನಂಬಿಕೆ ಕಂದಾಚಾರಗಳನ್ನು ಮೀಟಿ ಬೆಳೆದ ಅಲ್ಲಾಳರು ಶರಣ ಕವಿಯೆನಿಸಿಕೊಂಡರು. ವೀರಶೈವ ಧರ್ಮದ ಈ ಚರಜಂಗಮ ಕ್ರಮಿಸಿದ ಸಾಹಿತ್ಯದ ಹಾದಿ ಅಗಾಧವಾದುದು. ದುರ್ಗಮವಾದದ್ದು. ವಚನ ವಾಹಿನಿ ಇದೊಂದು ಉತ್ಕೃಷ್ಟ ವಚನ ಸಂಕಲನ ಇಲ್ಲಿಯ ವಚನಗಳ ಪ್ರವಾಹ ಓತಪ್ರೋತತೆಯನ್ನು ಅಳೆಯಲಾಗುವುದಿಲ್ಲವೋ ಹಾಗೆಯೇ ವಿಷಯ ವ್ಯಾಪ್ತಿಯನ್ನು ಕಟ್ಟಿಡಲಾಗುವುದಿಲ್ಲ ಆಡು ಮುಟ್ಟದ ಗಿಡವಿಲ್ಲ ಎಂಬಂತೆ ಅಲ್ಲಾಳರು ಬರೆಯದ ವಿಷಯವೇ ಇಲ್ಲ. ಇವರ ವಚನಾಂಕಿತ ತಪೋವನ ಮಠಾಧೀಶ. ಜೇವರ್ಗಿ ತಾಲೂಕಿನ ಶಕಾಪೂರ ಸುಕ್ಷೇತ್ರದಲ್ಲಿನ ವಿಶ್ವಾರಾಧ್ಯರ ಮಠ ಹಾಗೂ ಮಠದೊಡೆಯರ ಮೇಲಿನ ಅನನ್ಯತೆ, ಭಕ್ತಿ, ಪ್ರೀತಿ, ಹಂಬಲದ ಭಾವಗಳು ವಚನಾಂಕಿತ ಒಳಸುಳಿಗಳಾಗಿರಬಹುದು. ವಚನವಾಹಿನಿಯಲ್ಲಿ ಬರೀ ಮಹಾತ್ಮರನ್ನು ಹೊಗಳಿರುವುದಿಲ್ಲ ಜನರಿಗೆ ಮೌಲ್ಯಗಳನ್ನು ಜೀವನೋತ್ಸಾಹವನ್ನು ಎತ್ತಿ ತೋರಿಸಿದ್ದಾರೆ ತತ್ವಗಳನ್ನು ಬಿತ್ತರಿಸಿದ್ದಾರೆ.

* ಧೂಮ್ರಪಾನದಿಂದ ಶ್ವಾಸಕೋಶ ನಾಶ ನೋಡಯ್ಯ ।
ಮದ್ಯಪಾನದಿಂದ ಆರೋಗ್ಯ ಹಾಳಾಗುವುದಯ್ಯ ॥

* ಅಲ್ಲಿಲ್ಲದಾವೇವಾ ಇಲ್ಲೆಲ್ಲಿ ಇಹನಯ್ಯ ।
ಇಲ್ಲಿಲ್ಲದಾದೇವ ಅಲ್ಲೆಲ್ಲಿ ಬಹನಯ್ಯ
ಎಲ್ಲರೊಳು ಒಂದಾಗಿ ಅಲ್ಲಮನ ಕಂಡೊಡೆ
ನೀನೆ ದೇವರಿಗೆ ದೇವ ನೋಡಯ್ಯ ತಪೋವನ ಮಠಾಧೀಶ ॥

* ಏಸೂರು ತಿರುಗಿದರು ಸಾಧಿಸಿರುವುದೇನಯ್ಯ
ಹಲವು ವೇಷವ ತೊಟ್ಟುಗಳಿಸಿರುದೆಷ್ಟಯ್ಯ
ತಿರುಗುವುದು ಸಾಕು ಬೇಡುವುದು ಸಾಕು
ಹರಿದಾಡುವ ಮನಕೆ ಅಂಕುಶ ಹಾಕು ॥

* ಕಾಗೆ ಕಾ ಎಂದರೆ ಅಪಸ್ವರವೆನ್ನುವರಯ್ಯ
ಕೋಗಿಲೆಯ ಕುಹೂಕ ಜಗವೆಲ್ಲ ಶಿರತೂಗಿತಯ್ಯ
ಕಾಗೆ ಕಟ್ಟಿದ ಗೂಡಿನಲ್ಲಿ ಕೋಗಿಲೆ ಮೊಟ್ಟೆ ಇಡುವುದಯ್ಯ
ತನ್ನದೆಂದೂಹಿಸಿದ ಕಾಗೆ ಮರಿ ತೆಗೆಯಿತಯ್ಯ
ಗುಟಕಿಕ್ಕಿ ಬೆಳೆಸಿದ ಕಾಗೆ ಹೆಚ್ಚೊ ?
ಜಗಕೆ ಮರುಳು ಮಾಡುವ ಕೋಗಿಲ ಹೆಚ್ಚೋ ?
ನಗುವ ನಮ್ಮ ತಪೋವನ ಮಾಠಾಧೀಶ ॥

* ಬಸುರಿಲ್ಲದೆ ಹುಟ್ಟಿ ಬಂದ ಶಿಸುವಿನ ಸಂಗೀತ ಕೇಳಿದೆನಯ್ಯ ।
ಸತ್ತ ಹೆಣ ಎದ್ದು ಶಿವನಾಮ ಜಪಿಸುವದು ಕಂಡೆನಯ್ಯ
ಬೇರಿಲ್ಲದ ಮರದಲ್ಲಿ ಫಲ–ಪುಷ್ಪಗಳ ನೋಡಿ ಬೆರಗಾದೆನಯ್ಯ

* ತಾಯಿಯ ಮಡಿಲಲ್ಲಿರಬೇಕಾದ ಶಿಸು
ಯಾಂತ್ರಿಕ ತೊಟ್ಟಿಲದಲ್ಲಾಡುವುದಯ್ಯ
ಮಕ್ಕಳಾಶ್ರಯ ಪಡೆಯಬೇಕಾದ ವೃದ್ಧ
ವೃದ್ಧಾಶ್ರಮಗಳಲ್ಲಿ ಇರುವನು ನೋಡಯ್ಯ

* ಬಲುಗಳ್ಳನೊಬ್ಬ ವಾಲ್ಮಿಕಿ ಋಷಿ ಅಗಲಿಲ್ಲವೇನಯ್ಯ
ಕೃಪಣನೊಬ್ಬ ಪುರಂದರದಾಸ ಆಗಲಿಲ್ಲವೇನಯ್ಯ
ಸತಿ ಪ್ರೇಮಿಯೊಬ್ಬ ತುಳಸಿದಾಸನಾಗಲಿಲ್ಲವೇನಯ್ಯ
ಅತಿಕಾಮಿಯೊಬ್ಬ ವೇಮನ ಯೋಗಿಯಾಗಲಿಲ್ಲವೇನಯ್ಯ
ಪರಿವರ್ತನೆಗೆ ಅರೆನಿಮಿಷ ಸಾಕೆಂದ ನಮ್ಮ ತಪೋವನ ಮಠಾಧೀಶ ॥

* ಹಸಿಗಡಿಗೆಯ ಮೇಲೆ ಚಿತ್ತಾರ ತೆಗೆದೊಡೆ
ಅಗ್ನಿ ಸಂಸ್ಕಾರದಿಂದ ಅಳುಕಬಹುದೇ ?
ಎಳೆಮರದ ಟೊಂಗೆ ಬಗ್ಗಿಸಿ ಕಟ್ಟಿದೊಡೆ
ಬಲಿತ ಮೇಲೆ ನೀಟಾಗಬಹುದೆ ?
ಎಳೆಯ ಮನಸ್ಸಿನ ಮೇಲೆ ಒಳ್ಳೆಯ ಸಂಸ್ಕಾರ ಕೊಟ್ಟೊಡೆ
ಸಂಗದೋಷದಿಂದ ಕೆಡಬಹುದೆ ?
ಒಮ್ಮೆ ಸಂಸ್ಕರಣಗೊಂಡ ಭಕ್ತ ಚೊಕ್ಕ ಚಿನ್ನ
ಚಿನ್ಮಯನಾಗುವನ್ನ ತಪೋವನ ಮಠಾಧೀಶ॥

* ಧರ್ಮವೆಂಬ ಮರದ ಬುಡದಲ್ಲಿ
ಬೆಂಕಿಯನಿಟ್ಟು ಸಂಸ್ಕೃತಿ ಸಂಸ್ಕಾರವೆಂತೆಂಬ
ಶಾಖೆಗಳು ತರಿದೊಟ್ಟಿ ಮೇಲಿನ ಎಲೆಯೊಳಗೆ
ಫಲ–ಪುಷ್ಪ ಬಯಸುವವರ ಕಂಡು
ಬೆರಗಾದೆ ನೋಡಾ....

* ಕತ್ತಲೆಯ ಕಪ್ಪಳಿದು ಬೆತ್ತಲೆಯ ನೀನಾಗು
ಚಿತ್ತ ವೃತ್ತಿಗೆ ಬಿಗಿದು ಶಿವಸ್ಯೆಪು ನೀನಾಗು
ಅಂತರಂಗದ ಕದವ ಹಾಕಿ ಭಾವಗದ್ದುಗೆಯನೇರು
ಪಂಚಾಕ್ಷರದೊಳೈಕ್ಯವಾದೊಡೆ । ಆಗ
ನಿನ್ನನಪ್ಪಿ ಮುದ್ದಾಡುವನು ನೋಡಾ ....

* ಎಣ್ಣೆ ಬತ್ತಿಯ ಸಂಸ್ಕರಣದಿಂದ ಜೋತಿಯ ಉಗಮವಾಯಿತಯ್ಯ
ಭೂಮಿ ಬೀಜ ಸಂಸ್ಕರಣದಿಂದ ಸಸಿಯ ಉಗಮವಾಯಿತಯ್ಯ
ಗುರು–ಶಿಷ್ಯ ಸಂಸ್ಕರಣದಿಂದ ಪೂರ್ವಜನ್ಮ ಕಡಿಯಿತಯ್ಯ
ನಿಮ್ಮ ಕೃಪೆಯಿಂದ ಹರಜನ್ಮ ಪಡೆದು ನಿಮ್ಮ ನೆನೆವನಯ್ಯ

* ಲಕ್ಷ ದೀಪೋತ್ಸವ ಬೆಳಗಿಸುವದಕ್ಕಿಂದ
ಅಕ್ಷರ ಅಕ್ಷಯ ಜೋತಿ ಬೆಳಗಿಸಿರಯ್ಯ
ಮಠ ಮಂದಿರ ಮಸೀದಿಗಳು ಕಟ್ಟಿಸುವುದಕ್ಕಿಂತ
ವಿಶ್ವಮಂದಿರಗಳು ಕಟ್ಟಿಸಿರಯ್ಯ
ಜಡಕೆ ಪೂಜೆ ಸಲ್ಲಿಸುವುದಕ್ಕಿಂತ
ಚೇತನಗಳಿಗೆ ಪೂಜಿಸಿರಯ್ಯ...

* ಅಂಬರ ಹೊತ್ತರೆಲ್ಲ ವಿಶ್ವಾರಾಧ್ಯರಂತಾಗುವರೇನಯ್ಯ
ಅಂಬಲಿ ಬಿಟ್ಟವರೆಲ್ಲ ಮಾಣಿಕಮ್ಮನಂತಾಗುವರೇನಯ್ಯ
ಕಂಬಳಿ ಹೊದ್ದವರೆಲ್ಲ ಕೋರಿಸಿದ್ಧನಂತಾಗುವರೇನಯ್ಯ
ಎಲ್ಲ ಬಲ್ಲವರೆಲ್ಲ ಅಲ್ಲಮನಂತಾಗುವರೇನಯ್ಯ
ತನ್ನ ತಾನರಿದೊಡೆ ಅಂತಾಗುವರು ನೋಡಾ.....

* ಘಟದಿಂದ ಮಠ ಬೆಳಗಬೇಕಯ್ಯ
ಮಠದಿಂದ ಘಟ ಬೆಳಗಬಾರದಯ್ಯ
ಮಠದಿಂದ ಘಟ ಗಟ್ಟಿಗೊಂಡಲ್ಲಿ ದಾಸೋಹ ಭಾವಬರುವದಯ್ಯ

ಹೀಗೆ ಒಂದಾ ಎರಡಾ ಐನೂರು ಒಂದು ವಚನಗಳು. ವಚನಗಳ ವಾಹಿನಿಯೇ ಶರವೇಗದಿ ಧುಮುಕುತ್ತದೆ. ಸಾಮಾನ್ಯ ವಿಷಯಗಳನ್ನು ವೈಭವಕರಿಸಿದ್ದಾರೆ. ಈ ವೈಭವದಲ್ಲೆ ವೈರಾಗ್ಯ ವಿಚಾರವಿದೆ. ಜನರ ನಡೆನುಡಿಗಳನ್ನು ತಿದ್ದಿದ್ದಾರೆ. ಈ ವಚನಗಳು ನಮ್ಮನ್ನು ಆತ್ಮವಿಮರ್ಶೆಗೆ ಒಳಪಡಿಸುತ್ತವೆ. ಕೆಲವು ವಚನಗಳಲ್ಲಿ

ವೈಚಾರಿಕತೆಯ ಪ್ರಖರತೆ ಇದೆ. ಭಕ್ತಿ, ಯುಕ್ತಿ, ಮುಕ್ತಿ, ಗುರುಕರುಣೆಯೂ ಒಳಗೊಂಡಿದೆ. ಮೂಢನಂಬಿಕೆಗಳನ್ನು ಧಿಕ್ಕರಿಸಿದ್ದಾರೆ ಢಾಂಬಿಕ ಭಕ್ತಿಯನ್ನು ಕಡೆಗಣಿಸಿದ್ದಾರೆ. ಒಟ್ಟಿನಲ್ಲಿ ವಚನವಾಹಿನಿಯಲ್ಲಿಯ ಒಟ್ಟು ಆಧುನಿಕ ವಚನಗಳು ಮಾನವ ಜೀವನ ಪಾವನದ ಸೋಪಾನಗಳಂತಿವೆ. ಮೇಲೆತ್ತುವ ಸಹಾಸ ಶ್ರಮ ಮಾಡಿದರೆ ಸಾಕು ಜೀವನ ಪಾವನ ಪುನೀತವಾಗುತ್ತದೆ.

ಶರಣ ಸಾಹಿತಿ ಎಲ್.ಬಿ.ಕೆ. ಆಲ್ದಾಳ ಸರ್ವಶ್ರೇಷ್ಠ ಕೃತಿಗಳಲ್ಲಿ ಇದು ಒಂದು. ಈಗಾಗಲೆ ಇದು ಅನೇಕ ಮುದ್ರಣಗಳನ್ನು ಕಂಡಿದೆ. ಜೇವರ್ಗಿ ತಾಲೂಕಿನ ಮನೆ ಮನದಲ್ಲಿ ವಚನ ವಾಹಿನಿ ಇದೆ. ಈ ಪುಸ್ತಕದ ಮುಖೇನ ಆಲ್ದಾಳರು ಒಬ್ಬ ಸರಳ ಶರಣ ಸಾಹಿತಿ ಎಂಬುದನ್ನು ಧೃಡಪಡಿಸಿದ್ದಾರೆ.

## ಪರಿಚಯ ಪ್ರಭಾ

ಸೈದಾಪುರ ಶ್ರೀ ಬಾಲಯೋಗಿ ರಾಜೇಂದ್ರ ಮಹಾರಾಜರ ಬದುಕು ಮತ್ತವರ ಸಾಧನೆಯನ್ನು ದಾಖಲಿಸುವ ಪುಸ್ತಕ ಇದಾಗಿದೆ. ೧೯೮೭ ರಲ್ಲಿ ಪ್ರಟವಾದ ಈ ಪುಸ್ತಕ ೨೦೦ ಪುಟಗಳನ್ನು ಹೊಂದಿದೆ ರಾಜೇಂದ್ರ ಮಹಾರಾಜರು ಸ್ಥಾಪಿಸಿದ ಪರಾಶಕ್ತಿ ಆಶ್ರಮಕ್ಕೆ ಈ ಕೃತಿ ಸಮರ್ಪಿತವಾಗಿದೆ.

ಪರಿಚಯ ಪ್ರಭೆಯು ಮೂರು ಆಧ್ಯಾಯಗಳನ್ನು ಹೊಂದಿದೆ ಪ್ರಥಮ ಅಧ್ಯಾಯದಲ್ಲಿ ಗಣಪತಿ, ನವಗ್ರಹ, ಅಷ್ಟದಿಕ್ಪಾಲರು ಪಂಚ ಮಹಾಭೂತ, ಅಶ್ವಿನಿ ದೇವತೆಗಳು, ಇಂದ್ರ ಗಂಗಾದೇವಿ, ಪಾರ್ವತಿ ಶಿವ, ಷಣ್ಮುಖ, ವೀರಭದ್ರ, ನಂದಿ, ಬೃಂಗಿ, ವಿಷ್ಣು, ಲಕ್ಷ್ಮಿ, ಗರುಡ, ಬ್ರಹ್ಮ, ಸರಸ್ವತಿ, ನಾರದ, ಸಪ್ತ ಋಷಿಗಳು ಇನ್ನು ಅನೇಕ ದೇವಾನುದೇವತೆ ಗುರು ಸದ್ಗುರುಗಳ ವರ್ಣನೆ ವಿವರಣೆ ಇದೆ. ದ್ವಿತೀಯ ಅಧ್ಯಾಯದಲ್ಲಿ ದೇಶಸಂಚಾರ, ಜ್ಞಾನ ಸಂಪಾದನೆ, ಯೋಗಭ್ಯಾಸ, ತೀರ್ಥಯಾತ್ರೆ, ಪವಾಡ ಸದೃಶ್ಯ ಪ್ರಸಂಗಗಳ ಚಿತ್ರಣವನ್ನು ಕಾಣಬಹುದು. ಸೋಲಾಪುರ, ತುಳಜಾಪುರ, ಪಂಡರಾಪುರ, ನಾಸಿಕ, ಪಂಚವಟಿ, ಬಹ್ಮಗಿರಿ ಪರ್ವತ, ಉಜ್ಜಯಿನಿ, ಹಿಮಾಲಯ ದರ್ಶನ ಮಾಡಿಕೊಡಲಾಗಿದೆ. ಬಾಲಕ ರಾಜೇಂದ್ರನ ಮಹಿಮೆಯ ವ್ಯಕ್ತಿತ್ವದ ಒಳನೋಟವನ್ನು ಗುರುತಿಸುವಲ್ಲಿ ಆಲ್ದಾಳರು ಸಫಲರಾಗಿದ್ದಾರೆ.

ತೃತಿಯ ಅಧ್ಯಾಯದಲ್ಲಿ ಮಹಾರಾಜರ ವಿವಿಧ ಸಾಧನೆಗಳ ಪರಿಚಯವಿದೆ. ಪುಣ್ಯ ಕಾರ್ಯಗಳನ್ನು ವಿವರಿಸಲಾಗಿದೆ. ಮಹಾರಾಜರ ಬದುಕಿನ ವಿಶೇಷ ಘಟನೆಗಳನ್ನು ಪ್ರಸಂಗಗಳನ್ನು ಬರೆಯಲಾಗಿದೆ. ಪರಿಚಯ ಪ್ರಭಾ ಪುಸ್ತಕದಲ್ಲಿ ದೇವಾನುದೇವತೆಗಳ ಪರಿಚಯ, ಆಧ್ಯಾತ್ಮ ಪುಣ್ಯಕ್ಷೇತ್ರಗಳ ಪರಿಚಯವಲ್ಲದೆ ರಾಜೇಂದ್ರ ಮಹಾರಾಜರ ಬದುಕು ಸಾಧನೆಗಳ ವಿವರಣೆ ವರ್ಣನೆ ಇದೆ. ಇದೊಂದು ಉತ್ತಮ ಆದಾರ ಗ್ರಂಥ. ಆಧ್ಯಾತ್ಮ ಕ್ಷೇತ್ರಕ್ಕೆ ಸಂಬಂಧಿಸಿದ ವಿಫುಲ ಮಾಹಿತಿಯನ್ನು ಆಲ್ದಾಳರು ಒದಿಗಿಸಿಕೊಟ್ಟಿದ್ದಾರೆ.

## ಕಣ್ಣೆಟ್ಟಿ ಕೈಕೊಟ್ಟಿ

೧೯೭೨ ರಲ್ಲಿ ಬರೆದ ಸಾಮಾಜಿಕ ನಾಟಕವಿದು. ೨೪ ದೃಶ್ಯಗಳ, ೧೨ ಪಾತ್ರಗಳು, ೧೧೦ ಪುಟಗಳ ಈ ನಾಟಕ ವೃತ್ತಿ ರಂಗಭೂಮಿಗಾಗಿ ಬರೆದ ಸಾಮಾಜಿಕ ನಾಟಕವಿದು. ಅನೇಕ ಸಾಮಾಜಿಕ ಪೆಡಂಭೂತಗಳ ಒಳಸುಳಿಯಿಂದ ಮನುಷ್ಯ ಹೇಗೆ ನುಸುಳಿ ಹೊರಬರಬೇಕೆಂಬ ಸಂದೇಶವು ಇದೆ. ಜಾತಿ ವ್ಯವಸ್ಥೆ, ಸ್ತ್ರೀ ಶೋಷಣೆ, ಮಾನಸಿಕ ತೊಳಲಾಟ, ಬರಗಾಲ, ಧನಿಕರ ದರ್ಪ ಹೀಗೆ ಹಲವು ಸಮಸ್ಯೆಗಳನ್ನೆತ್ತಿ ಈ ನಾಟಕ ಹೆಣೆದಿದ್ದಾರೆ. ಆಲ್ದಾಳರ ಸಾಮಾಜಿಕ ಕಳಕಳಿಯನ್ನು ಈ ನಾಟಕದಲ್ಲಿ ಯಥೇಚ್ಚವಾಗಿ ನೋಡಬಹುದು ನಲ್ವತ್ತು ವರ್ಷಗಳ ಹಿಂದಿನ ನಾಟಕವಾದರೂ ಪ್ರಸ್ತುತತೆಗೆ ಧಕ್ಕೆ ಬಂದಿಲ್ಲ.

ಕಣ್ಣೆಟ್ಟ ಕೈಕೊಟ್ಟ ನಾಟಕದ ಕಥಾ ಹಂದರವೇನೆಂದರೆ ಒಬ್ಬ ಕಾಮುಕ ಧನಿಕ ಕಾಮಾಂಧನಾಗಿ ದುರ್ಬಲ ವರ್ಗದ ಮಹಿಳೆಯೊಡನೆ ಸಂಬಂಧ ಬೆಳೆಸಿ ಎರಡು ಮಕ್ಕಳನ್ನು ಪಡೆದೂ ಜಾತಿಯ ಕಾರಣವೊಡ್ಡಿ ಹೆಂಡತಿ ಮಕ್ಕಳನ್ನು ತ್ಯೆಜಿಸಿ ಸಾಮಾಜಿ ಪ್ರತಿಷ್ಠೆಗಾಗಿ ಸಂಸಾರವನ್ನು ದು:ಖ ಸಾಗರದಲ್ಲಿ ಮುಳುಗಿಸಿ ವಿಕೃತ ಸಂಭ್ರಮವನ್ನನುಭವಿಸುವ ಸಮಾಜ ಘಾತುಕ ವ್ಯಕ್ತಿತ್ವದ ಬಣ್ಣ ಬಯಲುಗೊಳಿಸುವ ವಿಷಯ ವಸ್ತುವುಳ್ಳ ಈ ಸಂಸಾರಿಕ ನಾಟಕ ಆಗಿನ ಕಾಲದಲ್ಲಿ ವೃತ್ತಿರಂಗಭೂಮಿ ಕಲಾವಿದರಿಗೆ ಹೊಟ್ಟೆ ತುಂಬಿಸಿತು.

ಇದು ಕಂಪನಿ ನಾಟಕ. ಭಾಷಾಶೈಲಿ ಸಮರ್ಪಕವಾಗಿದೆ ಗ್ರಾಂಥಿಕ ಆಡುಭಾಷೆಯನ್ನು ಹಿತಮಿತವಾಗಿ ಬಳಸಿದ್ದಾರೆ. ಹೈದ್ರಾಬಾದ ಕರ್ನಾಟಕದ ತುಂಬಲ್ಲದೆ ಉತ್ತರ ಕರ್ನಾಟಕದಲ್ಲಿ ಈ ನಾಟಕ ನೂರಾರು ಪ್ರಯೋಗ ಕಂಡಿದೆಯೆಂದರೆ ಇದರ ಹೆಚ್ಚುಗಾರಿಕೆ ಎತ್ತಿ ತೋರಿಸುತ್ತದೆ.

## ಬಡದಾಳ ಭಗವಂತ

ಈ ಕೃತಿಯಲ್ಲಿ ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯರ ಚರಿತ್ರೆ ಬರೆಯಲಾಗಿದೆ. ಇದರಂತೆ ಅನೇಕ ಮಠ ಮತ್ತು ಮಠದೊಡೆಯರ ಚರಿತ್ರೆಗಳನ್ನು ಬರೆದು ಭಕ್ತಿರಸವನ್ನು ಸಾಗರವಾಗಿ ಹರಿಸಿದ್ದಾರೆ ಆಲ್ದಾಳರು. ಮಠದ ಪರಂಪರೆಯನ್ನು ಮಠಾಧೀಶರ ಕಾಯಕ ಭಕ್ತಿ ಸಾಧನೆಗಳನ್ನು ಬಿಂಬಿಸಿದ್ದಾರೆ. ಬಡದಾಳದ ಭಗವಂತ ಈ ಚರಿತ್ರೆಯಲ್ಲಿ ಮೂರು ಘಟಕಗಳನ್ನು ಮಾಡಲಾಗಿದೆ.

ಮೊದಲ ಘಟಕದಲ್ಲಿ ತೇರಿನ, ಮಠದ ಪರಂಪರೆ, ಭಕ್ತರ ಪರಿಚಯ, ದಾನದತ್ತಿಗಳ ವಿವರ, ಗ್ರಾಮದ ದರ್ಶಿನ ಮುಖಂಡರು, ಮಠದ ಬಂಗಾರ ಬೆಳ್ಳಿ, ಬೆತ್ತ, ಮಚ್ಚು, ಕೊಡ್ಲಿ, ಬಂದೂಕುಗಳ ಪರಿಚಯ ಕೊಡಲಾಗಿದೆ.

ಎರಡನೆ ಘಟಕದಲ್ಲಿ ಲಿಂ.ಷ.ಬ್ರ. ಚನ್ನಮಲ್ಲೇಶ್ವರ ಶಿವಾಚಾರ್ಯರ ಪವಾಡಗಳ ವಿವರಣೆ ಇದೆ. ಮಹಿಮೆಯ ಮಹಾಪೂರವೇ ಇಲ್ಲಿದೆ. ಮೂರನೆ ಘಟಕದಲ್ಲಿ ಸಿದ್ಧಾಂತ ಶಿಖಾಮಣಿ ನಿಜಗುಣ ಶಿವಯೋಗಿ ಹಾಗೂ ಬಸವಾದಿ ಪ್ರಮಥರ ವಚನಗಳನ್ನು ಉಲ್ಲೇಖಿಸಿ ಮಠ ಹಾಗೂ ಊರಿನ ಜನರ ಸೌಹಾರ್ದತೆಯ ಬಗ್ಗೆ ಉಲ್ಲೇಖಿಸಿದ್ದಾರೆ.

ಬಡದಾಳ ಭಗವಂತ ಇದೊಂದು ಚರಿತ್ರೆ, ಇಲ್ಲಿ ಬಡದಾಳದ ಮಠ ಹಾಗೂ ಶ್ರೀಗಳ ಪವಿತ್ರ ಪರಂಪರೆಯನ್ನು ಎತ್ತಿಹಿಡಿಯುವಲ್ಲಿ ಆಲ್ದಾಳರು ಸಫಲರಾಗಿದ್ದಾರೆ. ಆಧ್ಯಾತ್ಮ ಪದಬಳಕೆಯ ಮಾರ್ಮಿಕತೆ ಅವರ ಜಾಣ್ಮೆಯನ್ನು ಎತ್ತಿ ತೋರಿಸುತ್ತದೆ.

## ಹೊನ್ನಳ್ಳಿಯ ಹೊಂಗಿರಣ

ಹೊನ್ನಳ್ಳಿಯ ವೇದಮೂರ್ತಿ ಶ್ರೀವೀರಘಂಟಯ್ಯ ತಾತನವರ ಜೀವನ ಚರಿತ್ರೆ ಇದಾಗಿದೆ. ಸ್ವಾಮಿಗಳ ಹುಟ್ಟು, ಬೆಳವಣಿಗೆ, ಮಠದಂಗಳದ ಪರಿಸರದ ನಿರ್ಮಾಣಕ್ಕೆ ಶ್ರೀಗಳ ಪಾತ್ರ ಜನಸಾಮಾನ್ಯರಲ್ಲಿ ಭಕ್ತಿ, ಶ್ರದ್ದೆ, ನಂಬಿಕೆ ಮುಂತಾದ ಧಾರ್ಮಿಕ ವಿಷಯಗಳ ಬಗ್ಗೆ ವಿವರಿಸಿದ್ದಾರೆ.

ಹೊನ್ನಳ್ಳಿ ಐತಿಹಾಸಿಕ ಸ್ಥಳವಾಗಿದ್ದು ಸಂಸ್ಕೃತಿಕ ಲೋಕದ ಕೇಂದ್ರಬಿಂದು. ಇಂಥ ಗ್ರಾಮದ ಪರಿಸರ ಅಲ್ಲಿರುವ ಜನರ ಮುಗ್ಧತೆಯನ್ನು ಬರೆದಿದ್ದಾರೆ. ಶ್ರೀ ಶಿವಯೋಗಿ ವೀರಘಂಟಯ್ಯ ತಾತವನವರ ಜೀವನ ಚರಿತ್ರೆ ಭಕ್ತ ಸಂಕುಲಕ್ಕೆ ಓದಲು ಹಾಗು ಅವರ ಸಾಧನೆಯನ್ನು ತಿಳಿದುಕೊಳ್ಳಲು ಇದು ಅತ್ಯುತ್ತಮ ಕೃತಿಯಾಗಿದೆ.

ಸತ್ಯ ಶುದ್ಧ ಕಾಯಕದಿಂದ ಬಂದ ಸಂಪತ್ತು ನಮ್ಮ ವಿಪತ್ತನ್ನು ಕಳೆಯುತ್ತದೆ ಎಂದು ಬೋಧಿಸುತ್ತಿದ್ದರೆಂದು ಸ್ವಾಮಿಜಿಯವರ ಕಾರ್ಯವೈಖರಿಯನ್ನು ಭಕ್ತ ಮಂಡಳಿಗೆ ತಿಳಿಸಿದ್ದಾರೆ. ಕೆಲವು ಪವಾಡಗಳನ್ನು ಮಾಡಿದ ಉಲ್ಲೇಖಗಳು ಈ ಕೃತಿಯಲ್ಲಿ ಕಾಣುತ್ತೇವೆ.

## ಜೇವರ್ಗಿ ಜ್ಯೋತಿ ಶ್ರೀ ಷಣ್ಮುಖಶಿವಯೋಗಿ

ಇಪ್ಪತ್ತೈದು ವರ್ಷಗಳ ಹಿಂದೆ ಬರೆದು ನಿರ್ದೇಶಿಸಿ ನೂರಾರು ಪ್ರಯೋಗ ಕಂಡ ನಾಟಕವಿದು. ಜೇವರ್ಗಿಯ ಷಣ್ಮುಖ ಶಿವಯೋಗಿ ಮಠದ ಒಡೆಯರಾದ ಶ್ರೀ ಶಾಂತಲಿಂಗ ಮಹಾಸ್ವಾಮಿಗಳ ನೇತೃತ್ವದಲ್ಲಿ ಸ್ವಯಂ ಜ್ಯೋತಿ ಷಣ್ಮುಖ ಶಿವಯೋಗಿ ನಾಟ್ಯಸಂಘ ಹುಟ್ಟಿಕೊಂಡಿತು. ಈ ಸಂಘದ ವತಿಯಿಂದ ಈ ನಾಟಕ ನೂರಾರು ಪ್ರಯೋಗ ಕಂಡಿತು. ಜೇವರ್ಗಿಯ ಹಿರೇಗೌಡ ಮನೆತನದಲ್ಲಿ ಹುಟ್ಟಿದ ರಕ್ತವನ್ನು ಬಿಟ್ಟು ವಿರಕ್ತನಾದ ಷಣ್ಮುಖ ಶಿವಯೋಗಿ ಅಖಂಡೇಶ್ವರ ಮಠದ ಪೀಠಾಧಿಪತಿಗಳಾದರು. ಇಂಥ ಹದಿನೇಳನೆ ಶತಮಾನದ ವಚನಕಾರರನ್ನು ೨೦ ಪಾತ್ರಗಳ ಮೂಲಕ

ದೃಶ್ಯಮಾಧ್ಯಮದಲ್ಲಿ ಆಲ್ದಾಳರು ತೋರಿಸಿಕೊಟ್ಟರು. ಪ್ರತಿಯಾಗಿ ಆಲ್ದಾಳರಿಗೆ ನಿಜಾಮನ ಕಾಲದ ಒಂದು ಬೆಳ್ಳಿ ನಾಣ್ಯ ಕೊಟ್ಟು ಮಠದೊಡೆಯರು ಗೌರವಿಸಿದ್ದರು.

ಷಣ್ಮುಖ ಶಿವಯೋಗಿಗಳು ಜೇವರ್ಗಿಯನ್ನು ಕಾರ್ಯಕ್ಷೇತ್ರವಾಗಿರಿಸಿಕೊಂಡು ಬಸವಾನುಯಾಯಿಗಳಿಗೆ ಆಧ್ಯಾತ್ಮ ಲೋಕದ ದೊಡ್ಡ ಶಕ್ತಿಯಾದರು. ಏಳುನೂರಾ ಹದಿನೈದು ವಚನಗಳನ್ನು ಬರೆದ ವಚನಕಾರರ ಬದುಕು ಬರಹವನ್ನು ನಾಟಕ ರೂಪದಲ್ಲಿ ತೋರಿಸುವುದೆಂದರೆ ಸಾಮಾನ್ಯ ಕಾರ್ಯವೇನಲ್ಲ. ಅಸಾಮಾನ್ಯ ಕಾರ್ಯವನ್ನು ಅಸಮಾನ್ಯ ಆಲ್ದಾಳರು ನಿರ್ವಹಿಸಿದ್ದು ತುಂಬಾ ಶ್ಲಾಘನೀಯ ಮತ್ತು ಅಭಿನಂದನಾರ್ಹವಾದದು.

## ವಿಶ್ವಾರಾಧ್ಯ ಮಹಾತ್ಮೆ

ಈ ನಾಟಕ ೧೯೮೧ರಲ್ಲಿ ಪ್ರಯೋಗ ಕಂಡಿತು. ನಾಟಕ ಆಲ್ದಾಳರ ವ್ಯಕ್ತಿತ್ವದ ಹೊಳಹು ಇನ್ನಷ್ಟು ರೂಪಗೊಂಡಿತು. ಇಲ್ಲಿಯತನಕ ಆಲ್ದಾಳೆಂದರೆ ಗಮನಿಸದ ಜನ ವಿಶ್ವಾರಾಧ್ಯರ ನಾಟಕದಿಂದ ಹುಡುಕುತ್ತಾ ಬಂದರು ಆಲ್ದಾಳರನ್ನು. ಜೇವರ್ಗಿ ತಾಲೂಕಿನ ಗಂವ್ಹಾರದಲ್ಲಿ ೭೫೦ಕ್ಕೂ ಹೆಚ್ಚು ಪ್ರಯೋಗ ಕಂಡು ತಾಲೂಕು ಜಿಲ್ಲೆ ರಾಜ್ಯದ ಮೂಲೆ ಮೂಲೆಯಲ್ಲಿ ಸಾವಿರಾರು ಪ್ರಯೋಗ ಕಂಡಿತು. ವೃತ್ತಿರಂಗಭೂಮಿಯ ಕಲಾವಿದರಾದ ವಿಶ್ವಾರಾಧ್ಯ ನಾಟ್ಯ ಸಂಘ ಜೇವರ್ಗಿ, ಶರಣಬಸವೇಶ್ವರ ನಾಟ್ಯ ಸಂಘ ಜೇವರ್ಗಿಯವರು ಬಹಳ ಪ್ರಯೋಗ ಕೊಟ್ಟರಲ್ಲದೆ. ಹವ್ಯಾಸಿ ಕಲಾವಿದರು ಹಳ್ಳಿ ಹಳ್ಳಿಗಳಲ್ಲಿ ರಂಗಭೂಮಿಗೆ ತಂದರು ಮಹಾತ್ಮಾನ ಮಹಿಮೆಯನ್ನು.

ಗುರು ಮನೆತನದ ನೀಲಾಂಬಿಕಾ ಮತ್ತು ಬನದಯ್ಯ ಶಾಸ್ತ್ರೀಗಳ ಮಕ್ಕಳಾದ ವಿಶ್ವಾರಾಧ್ಯ, ಬಸವಲಿಂಗ ಶಾಸ್ತ್ರೀ ಸಿದ್ದಮ್ಮ ತಾಯಿ. ಈ ಮೂರರಲ್ಲಿ ವಿಶ್ವಾರಾಧ್ಯರು ಕಾಶಿ ಪಂಡಿತರಾಗಿ ಬಂದು ನಾಯ್ಕಲ್‌ನಲ್ಲಿ ಸಂಸ್ಕೃತ ಶಾಲೆ ನಡೆಸುತ್ತಾ ಅಣ್ಣ ತಂಮ್ಮಂದಿರಲ್ಲಿ ಮನಸ್ತಾಪವಾಗಿ ಅಲ್ಲಿಂದ ಶಕಾಪೂರಕ್ಕೆ ಬಂದು ಕೃಷಿ ಕಾಯಕದಲ್ಲಿ ತೊಡಗಿ ಗುಳೇದ ಗುಡ್ಡದ ಅಡವಿತಾತನಿಂದ ದೀಕ್ಷೆ ಪಡೆದು ಶಿಷ್ಯಂದಿರ ಅನುಭವ ಮಂಟಪದಲ್ಲಿ ಚರ್ಚೆ. ಮುಂದೆ ಅನುಷ್ಠಾನ ಕೈಕೊಳ್ಳುತ್ತಾರೆ. ವೃತ್ತಿ ಬದಲಾಗಿ ಮೌನಿಗಳಾಗುತ್ತಾರೆ. ಇವರ ಪತ್ನಿ ಬಸವಾಂಬೆ ಪತಿಗೆ ಆದ್ಯಾತ್ಮದಲ್ಲಿ ತುಂಬಾ ಸಹಕಾರ ನೀಡುತ್ತಾ ಪತಿಗೆ ತಕ್ಕ ಸತಿಯಾಗುತ್ತಾಳೆ. ಪ್ರತಿಯಾಗಿ ವಿಶ್ವಾರಾಧ್ಯರು ಪತ್ನಿಯನ್ನು ದೇವಿಯ ರೂಪದಲ್ಲಿ ಕಾಣುತ್ತಾರೆ. ಪೂಜೆ ಮಾಡುತ್ತಾರೆ ದೇವಿರೂಪದಲ್ಲಿ ಪತ್ನಿ ಬಸವಾಂಬೆ ವಿಶ್ವಾರಾಧ್ಯರಿಗೆ ಖಡ್ಗ ನೀಡುತ್ತಾಳೆ. ಆ ಖಡ್ಗ ಇನ್ನೂ ಶಕಾಪೂರ ಮಠದಲ್ಲಿದೆ. ಮುಂದೆ ವಿಶ್ವಾರಾಧ್ಯರು ಆರೂಢ, ಅವಧೂತ, ಅರವ್ಯಕ್ತ ಸ್ಥಾನಕ್ಕೆ ತಲುಪುತ್ತಾರೆ. ಪರತಾಬಾದ್, ತಿಳಗೂಳ, ಗುಲ್ಬರ್ಗಾ, ಶಹಾಬಾದ, ಬಾಂಬೆಗಳಲ್ಲಿ ಸಂಚರಿಸುತ್ತಾ ಪವಾಡಗೈಯುತ್ತಾ ಸಮುದ್ರ ಸ್ನಾನ ಮಾಡುತ್ತಾ ಗಂಗೆ ಪ್ರತ್ಯಕ್ಷಯಾಗುತ್ತಾಳೆ. ಕೊನೆಗೆ ಶಹಾಬಾದ ಮೂಲಕ ಅಬ್ಬೆತುಮಕೂರಿಗೆ ಬಂದು ಸಕ್ರೆಪ್ಪಗೌಡರ ಸುಪರ್ಧಿಯಲ್ಲಿ ವಾಸ ಮಾಡುತ್ತಾರೆ.

ಅಲ್ಲಿಯೇ ಮಠ ಕಟ್ಟಿಸಿ ಅನೇಕ ಪವಾಡಗೈದು ಜೀವಂತ ಸಮಾಧಿಯಾಗುತ್ತಾರೆ. ಹೀಗೆ ವಿಶ್ವಾರಾಧ್ಯರನ್ನು, ಬುದ್ಧನಾಗಿ, ಕ್ರಿಸ್ತನಾಗಿ, ಪೈಗಂಬರನಾಗಿ, ವೀರಶೈವ ಧರ್ಮಶ್ರೇಷ್ಠ ಶರಣನಾಗಿ ತೋರಿಸಿದ ಕಲೆಯನ್ನು ಇಡೀ ನಾಡು ಹೊಗಳಿತು.

## ಕಡಕೋಳ ಮಡಿವಾಳೇಶ್ವರ ಮಹಾತ್ಮೆ

೧೯೮೩ರಲ್ಲಿ ರಂಗಕ್ಕೆ ಬಂದ ಅನುಭಾವ ನಾಟಕವಿದಾಗಿದೆ. ಪ್ರಥಮವಾಗಿ ಜೇವರ್ಗಿಯ ಯಡ್ರಾಮಿಯಲ್ಲಿ ಪ್ರಯೋಗಕಂಡಿತು. ೧೦೦೮ ರೇಣುಕಾಚಾರ್ಯ ನಾಟ್ಯ ಸಂಘ ಮೈಂದರ್ಗಿ, ರಾಘವೇಂದ್ರ ನಾಟ್ಯ ಸಂಘ ಶಿರಸಿ, ಬಸವೇಶ್ವರ ನಾಟ್ಯ ಸಂಘ ಬೆನಕಟ್ಟಿ ಹಾಗೂ ಕ.ಕ. ನಾಟ್ಯ ಸಂಘ ಯಂಕಂಚಿಯಂಥ ಅನೇಕ ವೃತ್ತಿರಂಗ ಕಂಪನಿಗಳು ನೂರಾರು ಪ್ರಯೋಗ ಮಾಡಿದ್ದಾರೆ. ಹವ್ಯಾಸಿ ಕಲಾವಿದರು ಕೂಡಾ ಹಳ್ಳಿಗಳಲ್ಲಿ ನಾಟಕ ಆಡಿದ್ದಾರೆ. ಆಲ್ದಾಳ ಕವಿಗೆ ಗೌರವ ಕೊಟ್ಟಂಥ ಆಗಿನ ಕಾಲದಲ್ಲಿ ರಂಗ ನಿರ್ದೇಶಕ ರಹಿಮಾನಸಾಬ ಶಿರಹಟ್ಟಿಯ ನಿರ್ದೇಶನದಲ್ಲಿ ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ೩೦೦ ಕ್ಕೂ ಹೆಚ್ಚು ಪ್ರಯೋಗ ಕಂಡಿದ್ದು ಹಿರಿಮೆಯ ಸಂಗತಿ.

ಕಥಾವಸ್ತು ಅತ್ಯಂತ ರೋಚಕವಾದುದು. ಮಡಿವಾಳಪ್ಪನ ತಾಯಿ ಬಿದನೂರಿನ ಗಂಗವ್ವ ತಂದೆ ವಿರೂಪಾಕ್ಷಯ್ಯ, ಚಿನಮಗೇರಿಯ ಗುರುಬಸವ ದೇವರು, ಅರಳಗುಂಡಗಿ ಶರಣಬಸವೇಶ್ವರರು, ಹಳಿಪೇಟಿ ಬಸಯ್ಯ, ಮಲ್ಲನಗೌಡ, ಮಲ್ಲನಗೌಡನ ತಂಗಿ ಭಾಗಮ್ಮ ಎಂಬ ಅನೇಕ ಪಾತ್ರಗಳ ಮೂಲಕ ಕಡಕೋಡ ಮಡಿವಾಳಪ್ಪನ ಹುಟ್ಟು, ಹುಟ್ಟಿನ ಗುಟ್ಟು, ಬೆಳವಣಿಗೆ, ಕೆಲವರು ಮಡಿವಾಳನಿಗೆ ಕಾಡಿಸಿದ ಪೀಡಿಸಿದ ವಿವರ, ಗುರುದೀಕ್ಷೆ, ಅವರ ಮೇಲಿನ ಗುರುತರ ಅಪವಾದಗಳನ್ನು ನಿಪುಣ ಕೌಶಲ್ಯತೆಯಿಂದ ಕಥೆಯ ಹಂದರ ಹೆಣೆದಿದ್ದಾರೆ. ಅರಳಗುಂಡಗಿ ಶರಣರ ಸಲಹೆ ಊರು, ನೀರು, ಮೇರು, ಇರುವಲ್ಲಿ ನೆಲೆ ನಿಲ್ಲಲು ಮಡಿವಾಳನಿಗೆ ಸೂಚಿಸುತ್ತಾರೆ ಹೀಗಾಗಿ ಕಾಟಕರಾದರೂ ಕೀಟಕರಲ್ಲದ ಕಡಕೋಳ ಗ್ರಾಮದ ದಿನ್ನೆಯಲ್ಲಿ ತಳವೂರಿ ಧ್ಯಾನ ಮಾಡುತ್ತಾ ತತ್ವಪದ ಬರೆಯುತ್ತಾರೆ ಅವರ ಬದುಕು ಸಾಹಿತ್ಯ ನಾಡಿನ ಅಗಾಧ ತವನಿಧಿ.

## ಯಾರದೊ ದುಡ್ಡು ಯಲ್ಲಮ್ಮನ ಜಾತ್ರೆ

ವೃತ್ತಿರಂಗ ಕಲಾವಿದರೂ ಇಂದಿಗೂ ಎಲ್ಲೆಲ್ಲೂ ಆಡಿಸುತ್ತಿದ್ದಾರೆ ಈ ನಾಟಕ. ೧೯೭೨ರ ಬರಗಾಲದಲ್ಲಿ ಬರೆದ ನಾಟಕ ಇಲ್ಲಿಯವರೆಗೆ ಸಾವಿರಾರೂ ಪ್ರಯೋಗ ಕಂಡಿದೆ. ಹಾನಗಲ್ಲ ಕುಮಾರೇಶ್ವರ ನಾಟ್ಯ ಸಂಘ ಗುಲ್ಬರ್ಗಾದಲ್ಲಿ ಸಾವಿರಾರು ಪ್ರಯೋಗ ಕಂಡಿದ್ದು. ಸಂಕೀರ್ಣ ಕಥಾ ವಸ್ತು ಹೊಂದಿದೆ. ಅನೇಕ ತಿರುವು ಮುರುವುಗಳಿಂದ ಕಥೆ ನೇರವಾಗಿ ತಿಳಿಯುವುದಿಲ್ಲ ಕೊನೆಯವರೆಗೆ ಪ್ರೇಕ್ಷಕರನ್ನು ಹಿಡಿದಿಡುವ ನಾಟಕವಿದು. ನಾಟಕದ ಕೊನೆಯ ಪ್ರವೇಶದಲ್ಲಿ ಕಥೆಯ ಗುಟ್ಟು ಬಿಚ್ಚುತ್ತದೆ.

ಕೀರ್ತಿ, ಜ್ಯೋತಿ, ಮೂರ್ತಿ, ಸೀನಪ್ಪ, ರಂಗಪ್ಪ, ಕುರುಡ, ಕುಂಟಿ, ರೇಶನ ಅಂಗಡಿ ಗುಮಾಸ್ತ ಮುಂತಾದ ಪಾತ್ರಗಳ ಮೂಲಕ ಆಧುನಿಕ ಸಮಾಜದಲ್ಲಿ ಗುಲ್ಲೆಬ್ಬಿಸಿದೆ. ಇದರಲ್ಲಿ ಸಾಮಾಜಿಕ ಮೌಲ್ಯಗಳನ್ನು ಬಿತ್ತರಿಸಲಾಗಿದೆ.

೧೯೮೧ರಲ್ಲಿ ಪ್ರಕಟಗೊಂಡ ನಾಟಕ ಪ್ರಥಮ ಪ್ರಯೋಗ ಬೀದರಿನಲ್ಲಿ ಜರುಗಿತು. ಅಲ್ಲಿ ನೂರಾರು ಯಶಸ್ವಿ ಪ್ರಯೋಗ ಕಂಡಿತು. ಶ್ರೀಶೈಲ ನಾಟ್ಯ ಸಂಘ ಸುಳ್ಯ ಜಿ॥ ಬಾಗಲಕೋಟರವರು ಈ ನಾಟಕ ಹೊತ್ತುಕೊಂಡು ಗಲ್ಲಾಪೆಟ್ಟಿಗೆ ತುಂಬಿಸಿಕೊಂಡರು.

## ನನ್ನ ದೇವರು

ಇದೊಂದು ಕೌಟುಂಬಿಕ ನಾಟಕ. ಪತಿಯನ್ನೇ ಆರಾಧ್ಯದೈವವೆಂದು ಆರಾಧಿಸುವ ಸತಿಶಿರೋಮಣಿಯ ಭಾವವನ್ನು ಈ ನಾಟಕದಲ್ಲಿ ಕಟ್ಟಿ ಹಾಕಿದ್ದಾರೆ. ಆದರೆ ಈ ನಾಟಕ ಈ ಭಾಗದಲ್ಲಿ ಪ್ರಯೋಗ ಕಂಡಿಲ್ಲ ದಕ್ಷಿಣ ಕರ್ನಾಟಕದಲ್ಲಿ ವೃತ್ತಿರಂಗ ಕಲಾವಿದರು ಓಡಿಸಿದ್ದಾರೆ.

ಹೀಗೆ ಆಲ್ದಾಳರು ೧೯೬೪ರಲ್ಲಿ ಪತಿಭಕ್ತಿ ನಾಟಕದ ಮೂಲಕ ಸಾಹಿತ್ಯ ಕ್ಷೇತ್ರದ ರಂಗ ಪ್ರವೇಶಿಸಿದವರು ಮುಂದೆ ಮಾನವಂತರ ಮಗಳು, ಕಲಿಯುಗದ ಕನ್ಯೆ, ನಮಸ್ಕಾರ, ಕಣ್ಣಿಟ್ಟ ಕೈಕೊಟ್ಟ, ಯಾರದರೆ ದುಡ್ಡು ಯಲ್ಲಮ್ಮನ ಜಾತ್ರೆ, ಹೆಣ್ಣು ಹರಕೆಯ ಕುರಿ, ಋಣ ಮುಟ್ಟಿತು ಛಲ ತೀರಿತು, ಬಾಳಿಗೊಂದು ಬೆಲೆ ಬೇಕು, ವಂಚಕ, ಗರತಿ ವಿಶ್ವದ ಜ್ಯೋತಿ ಹೀಗೆ ಅನೇಕ ಸಾಮಾಜಿಕ ನಾಟಕಗಳನ್ನು ಬರೆದು ನಿರ್ದೇಶಿಸಿ ನಾಟ್ಯ ಸಂಘ ಸಂಘಟಿಸಿ ಬಣ್ಣ ಹಚ್ಚಿಕೊಂಡು ಪ್ರಯೋಗಕ್ಕೆ ಅಣಿಮಾಡಿದ ದಿಗ್ಗಜ ಈ ಆಲ್ದಾಳ ಮಾಸ್ತರ.

ಪ್ರತಿಯೊಂದು ಸಾಮಾಜಿಕ ನಾಟಕ ಒಂದೊಂದು ಕಿವಿಮಾತು ಅದಮ್ಯ ಸಂದೇಶ ಹೊತ್ತು ಪ್ರಕಟಗೊಂಡಿತು. ಇವರೆಲ್ಲ ನಾಟಕಗಳಲ್ಲಿ ಸಾಮಾಜಿಕ ಮೌಲ್ಯಗಳು, ಮಾನವೀಯ ಕಾಳಜಿ ಕಳಕಳಿ, ಸಹೋದರತೆ, ಸಮಾನತೆ, ಸ್ತ್ರೀಪರ ಸಂವೇದನಶೀಲತೆ ಎದ್ದು ಕಾಣುತ್ತೇವೆ. ಗಂಭೀರ ವಿಷಯಗಳ ಜೊತೆ ಜೊತೆ ಹಾಸ್ಯಪಾತ್ರಗಳನ್ನು ಸೃಷ್ಟಿಸಿ ಹಾಸ್ಯದ ಹೊನಲನ್ನೆ ಹರಿಸಿದ್ದಾರೆ. ದುಃಖದ ಸನ್ನಿವೇಶಗಳಲ್ಲಿ ಅಳದೇ ಇರುವ ನಾರಿಯರಿಲ್ಲ.

ಆಲ್ದಾಳರು ಶರಣಜೀವಿ ವೀರಶೈವ ಕವಿ ಎನಿಸಿಕೊಂಡಿದ್ದು ಪೌರಾಣಿಕ ಭಕ್ತಿ ಪ್ರಧಾನ ಆಧ್ಯಾತ್ಮಿಕ ನಾಟಕಗಳಿಂದ ಮಾತ್ರ. ಇವರನ್ನು ಈ ನಾಟಕಗಳು ಎತ್ತರದ ಸ್ಥಾನದಲ್ಲಿ ನಿಲ್ಲಿಸುತ್ತವೆ. ಇವರ ಆಧ್ಯಾತ್ಮಿಕ ಹಸಿವು ಹಿಂಗಿದ್ದು ಈ ನಾಟಕಗಳ ರಚನೆಯಿಂದ ಇವುಗಳಲ್ಲಿ ಪ್ರಮುಖವಾದವುಗಳೆಂದರೆ ವಿಶ್ವಾರಾಧ್ಯರ ಮಹಾತ್ಮೆ, ಜೇವರ್ಗಿ ಜ್ಯೋತಿ, ಚರಬಸವೇಶ್ವರ, ಕಡಕೋಳ ಮಡಿವಾಳೇಶ, ಅಳ್ಳಗಿ ಅಯ್ಯಪ್ಪಯ್ಯ ಮಹಾತ್ಮೆ, ಹಾರಕೂಡ ಚೆನ್ನಬಸವ ಮಹಾತ್ಮೆ, ಮೂರು ಮುತ್ತುಗಳು, ತಿಂಥಣಿ ಮೌನೇಶ್ವರ ಮಹಾತ್ಮೆ ಇನ್ನೂ ಇಪ್ಪತ್ತಕ್ಕೂ ಪೌರಾಣಿಕ ಪುಣ್ಯ ಪುರುಷರ ಪುಣ್ಯ

ಕಾರ್ಯ ಸಾಧನೆಗಳ ಕುರಿತು ಕಥೆ ಹೆಣೆಯುವ ಕೌಶಲ ಕರಗತವಾಗಿತ್ತು. ಈ ನಾಟಕಗಳು ಹಾಗೂ ಈ ಮಹಾತ್ಮರ ಸಂಸ್ಥಾನ ಮಠಗಳು ಮಠದೊಡೆಯರ ಪ್ರೀತಿಗೆ ಪಾತ್ರರಾದರು. ಮಠಗಳು ಆಶ್ರಯದ ನೆಲೆಗಳಾದವು ಮಠಾಧೀಶರು ಬೆನ್ನು ಚಪ್ಪರಿಸಿ ಪ್ರೇರಣೆ ನೀಡಿದರು. ಮಠದ ಪರಂಪರೆ, ಗುರುಪರಂಪರೆ, ಮಠದ ಪೂರ್ವಜರ ಇತಿಹಾಸ, ಮಹಾತ್ಮರ ಜೀವನ ಚರಿತ್ರೆಯ ನಾಟಕಗಳಲ್ಲಿ ತಾಂತ್ರಿಕತೆಯಿಂದ ಜಾಣ್ಮೆಯಿಂದ ಮೂಲಕ್ಕೆ ಧಕ್ಕೆಯಾಗದಂತೆ ಪಾತ್ರಗಳನ್ನು ಸೃಷ್ಟಿಸಿ ಅವರ ಬಾಯಿಂದ ಹೇಳಿದ ಡೈಲಾಗ್‌ಗಳ ಆಧ್ಯಾತ್ಮಿಕ ಸರಣಿಯಂತೂ ಹೇಳತೀರದು. ಮಠಗಳ ಸಂಸ್ಕೃತಿ ಪರಂಪರೆಗಳನ್ನು ಜನಮನಕ್ಕೆ ನಾಟಕಗಳ ದೃಶ್ಯರೂಪಕಗಳಿಂದ ಪರಿಣಾಮಕಾರಿಯಾಗಿ ಹಳ್ಳಿ ಹಳ್ಳಿಗಳಲ್ಲಿ ಮುಟ್ಟಿಸಿದ ಘನತರ ಕಾರ್ಯ ಆಲ್ದಾಳರಿಂದಾಯ್ತು.

ಇಂಥ ಆಲ್ದಾಳರ ಕಣ್ಣುಗಳಲ್ಲಿ ನಲ್ವತ್ತು ನಾಟಕಗಳ ನಾಲ್ಕೂ ನೂರು ಪಾತ್ರಗಳು ನಾಲ್ಕು ಸಾವಿರ ಪ್ರಯೋಗಗಳು ಎರಡು ನೂರಕ್ಕೂ ಹೆಚ್ಚು ದೃಶಗಳು ಕೌಟುಂಬಿಕ ವಿಷಯಗಳ ಸಂಕೀರ್ಣತೆ ಇವನ್ನೆಲ್ಲ ಗಮನಿಸಿದರೆ ಅಬ್ಬಾ ಎನಿಸದೇ ಇರದು. ಇದು ಬಡತನದಲ್ಲಿ ಬೆಂದ ಆಲ್ದಾಳರಿಗೆ ಮಾತ್ರ ಸಾಧ್ಯವಾಯಿತು. ಅನೇಕ ಹಿರಿಯ ನಾಟಕಕಾರರು ನಾಲ್ಕಾರು ನಾಟಕಗಳನ್ನು ಬರೆದು ಮರೆಯಾದರು ಮೋಡಗಳ ಹಿಂದೆ ಚಂದ್ರನಂತೆ. ಆದರೆ ಈ ಸೂರ್ಯ ಇನ್ನು ಪ್ರಖರವಾಗಿ ಬೆಳಗುತ್ತಿದ್ದಾನೆ ಬಿಸಿಲೂ ಇದೆ ಬೆಳಕೂ ಇದೆ ಇವರ ನಾಟಕಗಳಲ್ಲಿ.

ನೂರಾರು ನಾಟಕ ಕಂಪನಿಗಳು ಸಂಘಗಳು ಇವರ ನಾಟಕಗಳಿಗಾಗಿಯೆ ಹುಟ್ಟಿಕೊಂಡವು. ಬದುಕಿದರು ಸಾವಿರಾರು ಕಲಾವಿದರು ಕಲೆಕ್ಷನ್ ಮಾಡಿಕೊಂಡರು. ಆದರೆ ಈ ಬಡ ಕವಿಗೆ ಒಂದು ಶಾಲು ಹಾರಕ್ಕೆ ಮಾತ್ರ ಸೀಮಿತವಾಗಿಟ್ಟರು. ಬಡತನದಲ್ಲೆ ಕೈತೊಳೆದುಕೊಂಡು ಆಲ್ದಾಳರು ಯಾರಿಂದ ಏನನ್ನು ನಿರೀಕ್ಷಿಸದ ನೀರವ ಮೌನಿ. ಕೆಲ ಕಂಪನಿಯವರು ಅಂತರಂಗದ ಅರಿವಿನಿಂದ ಅಲ್ಪ ಸ್ವಲ್ಪ ಬಿಡಿಗಾಸು ನೀಡಿ ಕೈತೊಳೆದುಕೊಂಡರು. ಪೌರಾಣಿಕ ನಾಟಕ ಬರೆಯಿಸಿದ ಮಠಾಧೀಶರು ಅಷ್ಟೆ ದುಡಿಸಿಕೊಂಡರು ಬರೆಸಿಕೊಂಡರು ತಮ್ಮ ವೈಭವ ವೈರಾಗ್ಯವನ್ನು ನಾಟಕ, ಕೀರ್ತನೆ, ಚರಿತ್ರೆ, ಪುರಾಣಗಳ ಮುಖೇನ. ಆದರೆ ಬರೀ ಒಣ ಆಶೀರ್ವಾದ ನೀಡಿ ಅಟ್ಟಿದರು ಈ ಬಡ ಜೀವಿಗೆ.

ಒಟ್ಟಿನಲ್ಲಿ ಇವರ ಒಟ್ಟು ನಾಟಕಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡಿವೆ. ಸಮಾಜ ಪರಿವರ್ತನೆಯ ಸೋಪಾನಗಳಾದುದು ದಿಟಸತ್ಯ. ಆದರೆ ಈ ನಾಟಕಗಳನ್ನು ಬಳಸಿಕೊಂಡ ನೂರಾರು ಜನ ಮೇಲೆ ಬಂದರು. ನಾಟಕಕಾರ ಆಲ್ದಾಳರ ಬಡ ಬದುಕಿಗೆ ಊರುಗೋಲಾಗಿ ಯಾರೂ ನಿಲ್ಲಲಿಲ್ಲ. ತಮ್ಮ ಸ್ವಯಂ ಅದಮ್ಯ ಅನನ್ಯ ವಿಶ್ವಾಸ ಛಲಗಳಿಂದ ಕಾರ್ಯತತ್ಪರತೆ ಅಧ್ಯಯನಗಳಿಂದ ಸಾಧನೆ–ಶೋಧನೆಗಳಿಂದ ಮೇಲೆದ್ದ ಈ ಕರ್ಮಯೋಗಿ ನಿತ್ಯನೇಮಿ ಸತ್ಯಕಾಮಿ.

ನಾಟಕಗಳಲ್ಲದೆ ಚರಿತ್ರೆಗಳು ಮತ್ತು ನಾಮಾವಳಿಗಳು ಸೇರಿ ಮೂವತ್ತು ಕೃತ್ತಿಗಳಾಗಿವೆ. ಮಠಗಳಿಗೆ ಸುತ್ತಿ ಸುತ್ತಿ ಸುಳಿದು ಕಂಡುಂಡ ಕೇಳರಿಯದ ಮಾಹಿತಿ ಪಡೆದು ಪುರಾಣ, ನಾಮಾವಳಿಗಳನ್ನು, ಭಕ್ತಿ ಗೀತೆಗಳ ಸುರುಳಿಗಳನ್ನು ಸೃಷ್ಟಿಸಿದ್ದಾರೆ.

ಈ ಸೃಜನಶೀಲ ಬರೀ ನಾಟಕಕಾರನಲ್ಲದೆ. ಪುರಾಣ ಪ್ರವಚನಕಾರನಾಗಿಯೂ ಹೊರ ಹೊಮ್ಮಿದ. ಆಧ್ಯಾತ್ಮಿಕ ವಿಷಯಗಳನ್ನು ಸಮಾಜಕ್ಕರ್ಪಿಸುವ ಬರವಣಿಗೆಯ ಶೈಲಿ ವಿಚಾರ ಲಹರಿ ಅದ್ಭುತವಾದುದು ಇದಕ್ಕಾಗಿಯೇ ಅಲ್ಲಾಳರನ್ನು ವೀರಶೈವ ಕವಿ ಎಂದು ಕರೆಯುತ್ತಾರೆ. ಕುರಾನ್ ಸಂಸ್ಕೃತಿಯಲ್ಲಿ ಪುರಾಣ ಸಂಸ್ಕೃತಿಯನ್ನು ಮೈವೆತ್ತ ಸಾಕಾರಮೂರ್ತಿ ಅಲ್ಲಾಳರು.

ಇಲ್ಲಿಯವರೆ ಸಾವಿರ ವಚನಗಳನ್ನು ಬರೆದಿದ್ದಾರೆ. **ವಚನ ವಾಹಿನಿ** ಯಲ್ಲಿಯ ವಚನಗಳನ್ನು ಗಮನಿಸಿ ಹೇಳಬಹುದು ೧೨ನೇ ಶತಮಾನದ ಶರಣರ ಧಾಟಿ ಮತ್ತು ಅರ್ಥದಲ್ಲಿಯೇ ವಚನಗಳನ್ನು ಬರೆದಿದ್ದಾರೆ. ಛಂದೋಬಂಧವಾಗಿ ವ್ಯಾಕರಣಬದ್ಧ ಶೈಲಿಯಲ್ಲಿಯ ವಚನಗಳಲ್ಲಿಯ ಲಕ್ಷೋಪಲಕ್ಷ ಪದಗಳ ಅರ್ಥ ಸಂದೇಶಗಳು ಕಲ್ಯಾಣ ಸಮಾಜದ ಕನಸು ಹೊತ್ತು ನಿಂತಿವೆ. ಹೀಗಾಗಿ ಅಲ್ಲಾಳರು ಒಬ್ಬ ವಚನಕಾರರಾಗಿಯೂ ನಮ್ಮನ್ನು ಕಾಣಿಸುತ್ತಾರೆ.

**ಜನಪದ ಜೇನು** ಪುಸ್ತಕದ ಮೂಲಕ ಇವರೊಬ್ಬ ಜನಪದ ಕವಿ ಎಂದೂ ಹೇಳಬಹುದು. ಏಳನೇ ತರಗತಿಯವರೆಗೆ ಓದಿದ ಅಲ್ಲಾಳರು ಓದದವರ ವಿಶ್ವವಿದ್ಯಾಲಯ ಎಂದು ಹೇಳಬಹುದು. ಈ ಪುಸ್ತಕದಲ್ಲಿ ನಾಲ್ಕು ನೂರು ತ್ರಿಪದಿಗಳಿವೆ. ಇನ್ನೂ ಆರುನೂರು ತ್ರಿಪದಿಗಳು ಅವರ ಡೈರಿಯಲ್ಲಿ ಪ್ರಕಟಣೆಗಾಗಿ ಕಾದಿವೆ. ಜನಪದ ತ್ರಿಪದಿಗಳಲ್ಲಿ ಸಾಮಾನ್ಯ ವಿಷಯಗಳನ್ನು ಗ್ರಾಮೀಣದ ಬದುಕು ಸಮಸ್ಯೆಗಳನ್ನು ಸ್ತ್ರೀಪರಧೋರಣೆಗಳು ತುಂಬಾ ಸುಂದರವಾಗಿ ಚಿತ್ರಿಸಿದ್ದಾರೆ. ಅದ್ದರಿಂದ ವಚನಕಾರರಂತೆ ಇವರನ್ನು ಜನಪದ ಕವಿ ಎಂದೂ ಪರಿಗಣಿಸಬೇಕಾಗುತ್ತದೆ.

ಅಲ್ಲಾಳರು ತತ್ವಗೀತ ಕವಿಗಳೂ ಹೌದು ಅಂದರೆ ಅನುಭಾವ ಕವಿಗಳೆಂತಲೂ ಕರೆಯಬಹುದಾಗಿದೆ. ಏಕೆಂದರೆ ಇದುವರೆಗೆ ನಾಲ್ಕು ತತ್ವಗೀತೆ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಕೈವಲ್ಯ ಜ್ಞಾನಾಮೃತ, ಶರಣಕಿರಣ, ವಿಶ್ವಜ್ಯೋತಿ, ಹೀಗೆ ಇವರ ತತ್ವಪದಗಳ ಮೇಲೆ ಮೋಟ್ನಳ್ಳಿ ಹಸನಸಾಬ, ಕಡಕೋಳ ಮಡಿವಾಳಪ್ಪ, ಚನ್ನೂರಿನ ಜಲಾಲಸಾಹೇಬರ, ತೆಲಗಬಾಳ ರೇವಪ್ಪ, ಖೈನೂರ ಕೃಷ್ಣಪ್ಪರ ಅನುಭಾವ ಪ್ರಭಾವವಾಗಿರಬಹುದು. ಇವರ ತತ್ವಗೀತೆಗಳಲ್ಲಿ ಸಂಸಾರ ಸಂತೆ, ಸ್ವರ್ಗನರಕ, ಭಕ್ತಿಭಾವ, ಗುರುಕರುಣೆ, ಪ್ರಸಾದಕಾಯಕ, ದಾಸೋಹ, ಅಷ್ಟಾವರಣಗಳು, ಪ್ರಂಚಾಕ್ಷರ ಪಂಚಾಚಾರಗಳ ಬಗ್ಗೆ ವಿಪುಲ ಮಾಹಿತಿ ಸಿಗುತ್ತದೆ.

ಹೀಗೆ ಈ ರಂಗ ಸಂತ ಜಂಗಮನ ವ್ಯಕ್ತಿತ್ವ ಸಾಧನೆಯ ಮುಖಿಗಳು ಹಲವು ಹತ್ತು. ಒಬ್ಬ ನಾಟಕಕಾರ ನಾಟಕನಿರ್ದೇಶಕ ನಾಟಕದ ಪಾತ್ರಧಾರಿಯಾಗಿ ಒಟ್ಟು ನಲ್ವತ್ತಾರು ನಾಟಕ ಬರೆದು ರಂಗ ಸಾಮ್ರಾಟ ಉಪಾಧಿ ಪಡೆದರು. ಇದಕ್ಕಾಗಿ ಗುಬ್ಬಿ ವೀರಣ್ಣಾ ಪ್ರಶಸ್ತಿ ಲಭಿಸಿತು. ಸಂಘ ಸಂಸ್ಥೆಗಳಿಂದ ನೂರಾರು ಗೌರವ ದೊರೆತ್ತಿವೆ. ಅದಕ್ಕಾಗಿ ಅಲ್ಲಾಳರು ತತ್ವ ಕವಿಯಾಗಿ, ಜನಪದ ಕವಿಯಾಗಿ , ವಚನಕಾರನಾಗಿ, ಪ್ರವಚನಕಾರನಾಗಿ, ಕೀರ್ತನಕಾರನಾಗಿ ಹೊರಹೊಮ್ಮಿದ. ಹೀಗೆ ಹತ್ತು ಮುಖಗಳನ್ನು ಹೊಂದಿದ ಈ ದಶಾನನಿಗೆ ಸರಕಾರ ಮತ್ತು ಸಂಘ ಸಂಸ್ಥೆಗಳು ಅನೇಕ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸುತ್ತಿರುವುದು ಗುಲ್ಬರ್ಗಾ ಜಿಲ್ಲೆಗೆ ಸಂದ ಗೌರವವಲ್ಲವೇ?

# ಆಲ್ದಾಳರ ಕುರಿತ ಅಭಿಮಾನದ ಮಾತುಗಳು...

* ಭಾರತದ ಮಣ್ಣಿಗೆ ತನ್ನದೆಯಾದ ಅಸ್ಮಿತೆಯಿದೆ. ಅನೇಕತೆಯಲ್ಲಿ ಏಕತೆ. ಆ ಅಸ್ಮಿತೆಯ ಅಂತ:ಸತ್ವ, ಕನ್ನಡ ನಾಡು ಅದರ ಕೆನೆ ರೂಪ. ಆಲ್ದಾಳರಂಥ ವ್ಯಕ್ತಿ ಶಕ್ತಿಗಳು ಕೆನೆಯ ಸಾರ.

* ಮುಸ್ಲಿಂ ಮನೆತನದಲ್ಲಿ ಹುಟ್ಟಿದರೂ ಆಲ್ದಾಳರ ಅಂತರಂಗವು ಸೂಫಿ ಸಂಸ್ಕೃತಿಯ ಸಂಪನ್ನತೆಯಿಂದ ಸಂಸ್ಕಾರಗೊಂಡಿದೆ

* ಎಲ್.ಬಿ.ಕೆ. ಆಲ್ದಾಳರು ಕುರಾನ್ ಪರಂಪರೆಯ ಒಡಲಲ್ಲಿಯೇ ಪುರಾಣ ಸಂಸ್ಕೃತಿಯನ್ನು ರೂಢಿಸಿಕೊಂಡವರು. ಪ್ರವಾದಿ ಮಹ್ಮದರ ದೈವವಾಣಿಯ ಧ್ವನಿಯಲ್ಲಿಯೇ ಶರಣ ಸಂತರ ಸಂವಾದವನ್ನಾಲಿಸಿದವರು.

* ಕನ್ನಡ ಧರ್ಮ, ಕನ್ನಡ, ಸಾಹಿತ್ಯ, ಕನ್ನಡ ಸಂಸ್ಕೃತಿಗೆ ಸ್ತುತ್ಯ ಸೇವೆ ಮಾಡಿದುದಕ್ಕೆ ಈ ಅಭಿನಂದನಾ ಗ್ರಂಥದರ್ಪಣೆ ಸೂಕ್ತ.

* ಕವನ ಕಟ್ಟುವುದು ಸುಲಭ. ರಂಗಭೂಮಿ ಕಟ್ಟುವುದು ಸುಲಭವಲ್ಲ. ಅರ್ಧ ಶತಮಾನ ರಂಗಭೂಮಿಯ ಪ್ರವೃತ್ತಿಯನ್ನೆ ವೃತ್ತಿಯಂತೆ ಮಾಡಿಕೊಂಡು ಜೀವನವನ್ನು ಅರ್ಪಿಸಿದ ಅಪರಂಜಿ ಆಲ್ದಾಳ.

* ಆಲ್ದಾಳರು ಇಸ್ಲಾಂ ಧರ್ಮದವರಾದರೂ ಕೂಡಾ ಶರಣರ, ಸಂತರ, ಮಹಾತ್ಮರ ಅಲ್ಲದೆ ವೀರಶೈವ ಧರ್ಮದ ಮಠಗಳ ಪರಂಪರೆಯನ್ನು ಎತ್ತಿ ಹಿಡಿದ ಗಿರಿವರ್ಧನ.

* ಆಲ್ದಾಳರು ಸ್ವತಃ ನಾಟಕಕಾರರು, ರಂಗಭೂಮಿ ಓದದವರ ವಿಶ್ವವಿದ್ಯಾಲಯ ಅಂದರೆ ನೆಲದ ಸಂಸ್ಕೃತಿಯನ್ನು ಎತ್ತಿ ತೋರುವುದೇ ನಾಟಕದ ಆಶಯ. ಜನಪದ, ಹವ್ಯಾಸಿ, ವೃತ್ತಿ ರಂಗಭೂಮಿಎಂದು ವರ್ಗೀಕರಿಸಿ ಗ್ರಾಮೀಣ ರಂಗಭೂಮಿ ಉಪೇಕ್ಷಿಸಿದ್ದೇವೆ. ಹೀಗಾಗಿ ಆಲ್ದಾಳರಂಥ ನಾಟಕಕಾರರು ಎಲೆಯ ಮರೆಯ ಕಾಯಾಗಿ ಉಳಿದವರು.

* ಸಗರ ನಾಡಿನ ಶರಣಜೀವಿ ಆಲ್ದಾಳರು ನಾಟಕ, ವಚನ, ತತ್ವಪದ, ಪುರಾಣಗಳ ಮೂಲಕ ಮನೆಮಾತಾಗಿದ್ದಾರೆ.

* ಎತ್ತರದ ಆಲದ ಮರದಂತೆ ಬೆಳೆದ ಅವರ ವಿವಿಧ ಕೃತಿಗಳ ಬಿಳಲುಗಳು ಆಧ್ಯಾತ್ಮರಂಗದ ಪಥಿಕರಿಗೆ ನೆಲೆ ನೆರಳನ್ನು ಕೊಡುತ್ತವೆ.

* ಈ ಭಾಗದ ಸಿದ್ಧ, ಆರೂಢ, ನಾಥ, ಅವಧೂತ, ಪರಂಪರೆಯ ತಾತ್ವಿಕ ಧಾರೆಗಳನ್ನು ಆಲ್ದಾಳರು ಎಷ್ಟು ಕರಗತವಾಗಿಸಿಕೊಂಡಿದ್ದಾರೆ ಎಂದರೆ ಮುಂದಿನ ತಲೆಮಾರಿನವರು ಅವರಿಂದ ಕಲಿಯಬೇಕಾದದ್ದು ಸಾಕಷ್ಟಿದೆ.

* ನಾಟಕ ಬರೆದು, ನಾಟ್ಯ ಮಂಡಳಿ ಕಟ್ಟಿ, ನಿರ್ದೇಶಿಸಿ ರಂಗತಾಲೀಮು ಮಾಡಿಸಿ ಪ್ರಯೋಗ ಮಾಡುವವರೆಗೆ ಅವರ ನಿರಂತರ ಹೋರಾಟ ನಡೆದೇ ಇರುತ್ತದೆ.

* ಸಕಲ ಮತಗಳಲ್ಲಿ ಒಂದೇ ದೈವವನ್ನು ಕಾಣುವ ಶ್ರೀಯುತರು ಭಾವೈಕ್ಯತೆಯ ಬೂನಾದಿಗೆ ಭದ್ರ ಅಡಿಗಲ್ಲನ್ನಿಟ್ಟಿದ್ದಾರೆ. ಇವರ ಅಮೋಘ ರಂಗಸೇವೆ ಗುರುತಿಸಿ ಪ್ರಶಸ್ತಿ ಪುರಸ್ಕಾರಗಳು ದೊರಕಲಿವೆ.

* ಕಬೀರ ಹಾಗೂ ಶಿಸುನಾಳರ ದಾರಿಯಲ್ಲಿ ಸಾಗಿರುವ ಆಲ್ದಾಳರು ಕಲುಷಿತಗೊಳ್ಳತ್ತಿರುವ ಧಾರ್ಮಿಕ ಸಂಬಂಧಗಳ ನಡುವೆ ಭಾವೈಕ್ಯದ ಬೀಜ ಬಿತ್ತುತ್ತಿದ್ದಾರೆ.

* ನಾನೊಬ್ಬ ಮುಸ್ಲಿಂ ಅಲ್ಲ. ನಾನೊಬ್ಬ ವೀರಶೈವವನೂ ಅಲ್ಲ, ಹಿಂದೂ ಅಲ್ಲ, ನಾನೊಬ್ಬ ಮನುಷ್ಯ ಮಾತ್ರ ಎಂದು ತಮ್ಮ ಮನದಾಳದ ಮಾತನ್ನು ಹೇಳಿವದರು ಎಲ್.ಬಿ.ಕೆ. ಆಲ್ದಾಳರು.

* ಎಲ್.ಬಿ.ಕೆ. ಆಲ್ದಾಳರೆಂದರೆ ಅಳು ನುಂಗಿ ನಗುವ ಚೇತನ.

* ಜಗವೆಲ್ಲ ನಗುತ್ತಿರಲಿ ಜಗದಳುವು ನನಗಿರಲಿ ಎಂಬಂತೆ ತಮ್ಮ ವಯಕ್ತಿಕ ಜೀವನ ಕಹಿಯಾಗಿದ್ದರೂ ಜನರಿಗೆ ಉಣಿಸಿದ್ದು ಸಿಹಿಯನ್ನು.

* ಆಲ್ದಾಳ ಶ್ರಮಜೀವಿ. ಅವರ ನಾಟಕ ಸಾಹಿತ್ಯ ಶ್ರೀಮಂತಗೊಂಡಿದ್ದರೂ ಬದುಕು ಬಡತನದಲ್ಲೇ ಸಾಗಿದ್ದು ವಿಪರ್ಯಾಸ. ಇವರ ನಾಟಕಗಳು ಭಾರಿ ಕಲೆಕ್ಷನ್ ತಂದುಕೊಟ್ಟಿವೆ. ಕಲೆಕ್ಷನ್ ಪಡೆದವರು ಮಾತ್ರ ಇವರಿಗಾಗಿ ಏನನ್ನೂ ಮಾಡಲಿಲ್ಲ.

* ಇವರು ಓದಿದ್ದು ೭ನೇ ತರಗತಿಯವರೆಗೆ. ಆದರೆ ರಚಿಸಿದ್ದು ಮಾತ್ರ ಪಿ.ಹೆಚ್.ಡಿ. ವ್ಯಾಸಂಗ ಮಾಡುವವರಿಗೆ ವಸ್ತುವಾಗಬಲ್ಲದು.

* ಆಡಿ ಮಾಡದವ ಅಧಮ, ಆಡಿ ಮಾಡುವವ ಮಧ್ಯಮ, ಆಡದೇ ಮಾಡುವವನು ರೂಢಿಯೊಳಗೆ ಉತ್ತಮ. ಆಡದೇ ಮಾಡುವ ಅಂಶ ಅವರ ವ್ಯಕ್ತಿತ್ವದಲ್ಲಿದೆ.

* ಪಾರಮಾರ್ಥವೆಂಬ ಪವಿತ್ರ ನೀರು ಕುಡಿದು ಬೆಳೆದ ಹೆಮ್ಮರ ಅದು.

# ಮಾಸದ ನೆನಪುಗಳು

ಬದುಕಿನಲ್ಲಿ ಏಳು–ಬೀಳುಗಳನ್ನು ಕಂಡ ಎಲ್.ಬಿ.ಕೆ.ಆಲ್ದಾಳ ಅವರ ರಂಗ ಯಾತ್ರೆ ನಿಜಕ್ಕೂ ರೋಚಕವಾಗಿದೆ. ಅವರ ನೆನಪೆಂಬ ಬುತ್ತಿಯಲ್ಲಿ ಅನೇಕ ಸಂಗತಿಗಳಿವೆ. ಅವುಗಳನ್ನು ಒಂದೊಂದಾಗಿ ಹೇಳುವಾಗ.. ಮನಸ್ಸು ಆರ್ದ್ರಗೊಳ್ಳುತ್ತದೆ. ಮಮ್ಮಲ ಮರಗುತ್ತದೆ. ಅಂತಹ ಅನೇಕ ಸಂಗತಿಗಳು, ಘಟನೆಗಳು, ರೋಮಾಂಚಕ ಕತೆಗಳು ಆಲ್ದಾಳರ ಬದುಕಲ್ಲಿ ಬಂದುಹೋಗಿವೆ. ಬಹುಶಃ ಈ ಸಂಗತಿಗಳು ಆಲ್ದಾಳರ ಬದುಕಿನಲ್ಲಿ ಬರದೇ ಹೋಗಿದ್ದರೆ.. ಅನ್ನುವ ಮಾತು ಪ್ರಸ್ತಾಪಿತಗೊಂಡರೆ.. ಆಲ್ದಾಳರ ರಂಗ ಬದುಕು ಇಷ್ಟೊಂದು ಸಂಭ್ರಮದ್ದಾಗುತ್ತಿರಲಿಲ್ಲವೇನೋ..?

ಅದು ನಿಜಾಮನ ಆಡಳಿತದ ಕಾಲ. ಬಹುಶಃ ೧೯೪೮ರ ಸಂದರ್ಭ ಇರಬಹುದು. ರಜಾಕಾರರ ಹಾವಳಿ ತುಂಬಿಹೋಗಿತ್ತು. ಆ ಕಾಲದ ನೆನಪುಗಳಿಗೆ ಜಾರುವಾಗ.. ಆಲ್ದಾಳರ ಕಣ್ಣು ತೇವಗೊಳ್ಳುತ್ತವೆ. ಆಲ್ದಾಳ ಅವರ ತಾತನವರಿಗೆ ಆ ಊರ ಜನರು ಹೊಡೆದು, ಅವರ ಮೂರಂತಸ್ತಿನ ಮನೆಗೆ ಬೆಂಕಿ ಹಚ್ಚಿದರು. ಆಲ್ದಾಳ ಅವರ ತಾತನವರನ್ನು ಆ ಬೆಂಕಿಯೊಳಗೆ ಹಾಕುವಾಗ ಅವರ ಕೈಯಲ್ಲಿರುವ ಭಗವದ್ಗೀತೆ ಮತ್ತು ಯೋಗ ದಂಡವನ್ನು ಹಾಕಿದ್ದರು. ಅಚ್ಚರಿಯೆಂದರೆ, ಮೂರಂತಸ್ತಿನ ಮನೆಯೇ ಸುಟ್ಟು ಕರಕಲಾಗಿದ್ದರೂ, ಆಲ್ದಾಳರ ತಾತನವರು ಉಟ್ಟಿದ್ದ ಪಂಚೆಯ ಐದು ನಿರಿಗೆಗಳು ಹಾಗೂ ಭಗವದ್ಗೀತೆ, ಆ ಯೋಗ ದಂಡ ಹಾಗೆಯೇ ಉಳಿದಿದ್ದವು. ಅವುಗಳನ್ನು ಅದೇ ಊರಿನ ಚೆನ್ನಬಸವಯ್ಯ ಸ್ವಾಮಿಗಳು ತೆಗೆದುಕೊಂಡು ಹೋಗಿ ಮನೆಯಲ್ಲಿಟ್ಟುಕೊಂಡರು.

ಇನ್ನೊಂದು ಆಶ್ಚರ್ಯದ ಸಂಗತಿಯೆಂದರೆ, ಆಲ್ದಾಳ ಅವರ ತಾತನವರನ್ನು ಯಾರು ಹೊಡೆದಿದ್ದರೋ ಅವರ ಮನೆಯಲ್ಲಿಯೇ ಆಲ್ದಾಳರ ಕುಟುಂಬದ ಸುಮಾರು ಎಂಟ್ಹತ್ತು ಜನರು ಅಡಗಿಕೊಂಡು ಕುಳಿತಿದ್ದರು. ರಜಾಕಾರರು ಹೊರಟುಹೋದ ಹೋದ ಮೇಲೆ ಮರುದಿನ ಆಲ್ದಾಳರ ಕುಟುಂಬದವರೆಲ್ಲಾ ಅವರ ಮನೆಯಿಂದ ಹೊರಗೆ ಬಂದರು. ಬಹುಶಃ ಆವತ್ತು ಇವರಿಗೆಲ್ಲಾ ಆಶ್ರಯಕೊಟ್ಟವರು ಹಣಮಂತಪ್ಪ ಅಗಸರ್. ಅವರ ಮನೆಯಿಂದ ಹೊರ ಬಂದ ಮೇಲೆ ತಮ್ಮ ತಮ್ಮ ಮನೆಗಳಿಗೆ ವಾಪಾಸಾದರು. ಇದ್ದ ಒಬ್ಬ ಶ್ರೀಮಂತರ ಮನೆಯೆಲ್ಲಾ ಲೂಟಿ ಮಾಡಿಕೊಂಡು ಹೋಗಿದ್ದರು ರಜಾಕಾರರು. ತಾಟು, ತಂಬಿಗೆ ಸಹಿತ ತೆಗೆದುಕೊಂಡು ಹೋಗಿದ್ದರು. ಏನೇನೂ ಉಳಿಸಿರಲಿಲ್ಲ. ಶ್ರೀಮಂತಿಕೆಯಲ್ಲಿದ್ದ ತಾತನವರ ಮನೆಯೀಗ ಬಡತನದ

ರೇಖೆಗೆ ತಂದು ನಿಲ್ಲಿಸಿದ್ದು ರಜಾಕಾರರ ಹಾವಳಿ. ಹೀಗಾಗಿ ಆಲ್ದಾಳರ ಬದುಕು ಈ ಕಡೆ ಹೊರಳಲು ಶುರು ಮಾಡಿತ್ತು. ಮತ್ತೊಂದು ಕುತೂಹಲಕರ ಸಂಗತಿಯೆಂದರೆ, ರಜಾಕಾರರ ಹಾವಳಿಯಿಂದಾಗಿ ಆಲ್ದಾಳರ ಸೋದರ ಮಾವಂದಿರು ದಿಕ್ಕೆಟ್ಟು ಹೋಗಿದ್ದರು. ಯಾರು ಎಲ್ಲಿದ್ದಾರೆ ಎಂದು ಯಾರಿಗೂ ಗೊತ್ತಾಗಲಿಲ್ಲ. ಎಲ್ಲೆಲ್ಲೋ ಚದುರಿ ಹೋಗಿದ್ದರು. ಆ ಸಂದರ್ಭದಲ್ಲಿ ಆಲ್ದಾಳ ಅವರ ತಾತನವರನ್ನು ಹೊಡೆದ ಹಣಮಂತಪ್ಪ ಅಗಸರ ಅವರೇ ಈ ಕುಟುಂಬದವರಿಗೆ ಎರಡು ಸೇರು ನವಣೆ ಅಕ್ಕಿ ತಂದು ಕೊಟ್ಟಿದ್ದರು. ಆ ನಂತರವೇ ಅನ್ನ ಮಾಡಿಕೊಂಡು ಊಟ ಮಾಡುವಂತಾಗಿದ್ದು.

ಆಲ್ದಾಳರ ಚಿಕ್ಕಪ್ಪ ತಾಳಿಕೋಟೆಯ ಸಮೀಪವಿರುವ ವಡ್ಡಾಡಗಿಯಲ್ಲಿದ್ದರು. ಅಜ್ಜಿಯ ಜೊತೆಗೂಡಿ ವಡ್ಡಾಡಗಿ ಊರಿಗೆ ಹೋದರು. ಅಜ್ಜಿಯ ಬೆನ್ನು ಹತ್ತಿ ಹೋಗಿದ್ದ ಆಲ್ದಾಳ ಅವರ ಆಗಿನ ಬದುಕು ಬಹು ದುಸ್ತರವಾಗಿದೆ. ಅಜ್ಜಿಯ ಶಕ್ತಿ ನಿಂತು ಹೋಗಿತ್ತು. ಅಜ್ಜಿ ಇರುವ ಮನೆಯ ಸಮೀಪವೇ ಹಿಟ್ಟಿನ ಗಿರಣಿ ಇತ್ತು. ಜೋಳ ಬೀಸುವ ಗಿರಣಿ ಮುಂದೆ ಅಜ್ಜಿ ತಾಟು ಹಿಡಿದುಕೊಂಡು ಕೂಡುತ್ತಿದ್ದಳು. ಆಲ್ದಾಳ ಅವರು ಅಜ್ಜಿಯ ಜೊತೆಯಲ್ಲಿ ಕೂತಿರುತ್ತಿದ್ದರು. ಜೋಳ ಬೀಸಿಕೊಂಡು ಹಿಟ್ಟು ಬುಟ್ಟಿಯಲ್ಲಿಟ್ಟುಕೊಂಡು ಹೋಗುವಾಗ ಜನರು ಒಂದು ಹಿಡಿಕಿ ಅಜ್ಜಿಯ ತಾಟಿನಲ್ಲಿ ಹಾಕುತ್ತಿದ್ದರು. ಜೋಳ ಬೀಸುವಾಗ ಕೆಳಗೆ ಬೀಳುತ್ತಿದ್ದ ಹಿಟ್ಟನ್ನು ಅಜ್ಜಿ ಆರಿಸಿಕೊಂಡು ತಾಟಿನಲ್ಲಿ ಹಾಕಿಕೊಳ್ಳುತ್ತಿದ್ದಳು. ಹಾಗೆ ಸಂಗ್ರಹಿಸಿಕೊಂಡು ಬರುತ್ತಿದ್ದ ಹಿಟ್ಟಿನಿಂದ ಮನೆಯಲ್ಲಿ ರೊಟ್ಟಿ ಮಾಡಿ ಎಲ್ಲರನ್ನು ಉಣಿಸುತ್ತಿದ್ದಳು. ಆಲ್ದಾಳರ ಈ ಮಾತು ಕೇಳುತ್ತಿದ್ದಾಗ ದುಃಖ ಉಮ್ಮಳಿಸಿ ಬರುತ್ತದೆ. ಆದರೂ ಇಂತಹ ಸಂಕಟಗಳನ್ನು ಮೀರಿ ಸಾಧನೆಯೆಡೆಗೆ ತಮ್ಮ ಬದುಕನ್ನು ಕಟ್ಟಿಕೊಂಡ ಆಲ್ದಾಳರು ಪ್ರಶಂಸನಾರ್ಹರು.

ಹೀಗೆ ಗಿರಣಿಯಿಂದ ಹಿಟ್ಟು ತಂದು ಅಡುಗೆ ಮಾಡಿ ಉಣ್ಣುವ ಸುದ್ದಿಯು ಆಲ್ದಾಳ ಅವರ ತಾಯಿಗೆ ಮುಟ್ಟಿತು. ತಕ್ಷಣವೇ ಆಲ್ದಾಳ ಅವರ ತಾಯಿ ವಡ್ಡಾಡಗಿಗೆ ಬಂದು ಇಬ್ಬರನ್ನು ಕರೆದುಕೊಂಡು ಸುರಪುರ ತಾಲೂಕಿನ ಆಲ್ದಾಳ ಗ್ರಾಮಕ್ಕೆ ಬಂದರು.

ಸೋದರ ಮಾವನ ಮನೆಯಲ್ಲಿರುವಾಗ ೭ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ... ಸೋದರ ಮಾವಂದಿರು ಆಲ್ದಾಳರನ್ನು ಬಹು ಪ್ರೀತಿಯಿಂದ ನೋಡುತ್ತಿದ್ದರು. ಆದರೆ, ಸೋದರತ್ತೆಯಂದಿರು ಅಷ್ಟಕ್ಕಷ್ಟೆ. ೭ನೇ ತರಗತಿಯನ್ನು ಚೆನ್ನಾಗಿ ಪಾಸು ಮಾಡಬೇಕು ಎಂದು ಓದುವಾಗಲೆಲ್ಲ.. ಮಾವನ ಮಕ್ಕಳು ಪುಸ್ತಕಗಳನ್ನು ಕಸಿದುಕೊಂಡು 'ಭಾರೀ ಓದೋನು. ಮುಂದೇನು ತಹಸೀಲ್ದಾರ ಆಗ್ತಿಯೇನೋ..' ಎಂದು ಅಣಕಿಸುತ್ತಿರುವಾಗ.. ಆಲ್ದಾಳರ ಸೋದರತ್ತೆಯಂದಿರು ನಗುತ್ತಿದ್ದರು.

ಶಾಲೆಯಲ್ಲಿದ್ದ ಗುರುಗಳು ಹೇಳುತ್ತಿದ್ದ ಪಾಠವೇ ನೆನಪಿಟ್ಟುಕೊಳ್ಳುವ ಅಭ್ಯಾಸವಾಗಿತ್ತು. ಶೇಷಾಚಾರ್ಯರು, ಮುದಿರಂಗಾಚಾರ್ಯರು, ಚಿದಾನಂದಭಟ್ಟರು ಎಂಬ ಗುರುಗಳು ಕಲಿಸಿದ ಒಳ್ಳೆಯ ಪಾಠ ಪ್ರವಚನ ಆಲ್ದಾಳರನ್ನು ಜಾಣರನ್ನಾಗಿ ಮಾಡಿದೆ. ಹೀಗಂತ ಅವರು ಹೇಳುವುದನ್ನು ಮರೆಯುವುದಿಲ್ಲ. ಇವತ್ತು ತಾವು ಏನೇ

ಆಗಿದ್ದರೂ ಅದೆಲ್ಲಾ ಈ ಪುಣ್ಯಾತ್ಮ ಗುರುಗಳದೇ ಅನ್ನುವ ಕೃತಜ್ಞತಾ ಭಾವ ಅವರಲ್ಲಿದೆ.

ಕೆಲವೇ ದಿನಗಳಲ್ಲಿ ೭ನೇ ತರಗತಿ ಪರೀಕ್ಷೆಗಳಿದ್ದವು. ಆಲ್ದಾಳರ ಎರಡು ಅಂಗಾಲಿಗೆ ನಾರು ಹುಣ್ಣಾದವು. ತಿರುಗಾಡಲು ಬರುವಂತಿಲ್ಲ. ಪರೀಕ್ಷೆ ಹತ್ತಿರ ಬಂತು. ಹುಣ್ಣು ಆರಲಿಲ್ಲ. ಮೊದಲ ದಿನ ಪರೀಕ್ಷೆ ಬರೆದು ಬಂದ ಆಲ್ದಾಳರಿ ಮುಂದಿನ ಯಾವ ಪರೀಕ್ಷೆಗಳನ್ನು ಬರೆಯಲಾಗಲಿಲ್ಲ. ಎದ್ದು ತಿರುಗಾಡದಷ್ಟು ಕಾಲು ಬೇನೆ ಆಗಿತ್ತು. ಹೀಗಾಗಿ ೭ನೇ ತರಗತಿ ಪಾಸು ಇಲ್ಲ.. ಫೇಲು ಇಲ್ಲ.. ಆದರೆ ಕಲಿತಿದ್ದು ಕಡಿಮೆಯಾಗಿದ್ದರೂ ಸಾಹಿತ್ಯ ಕ್ಷೇತ್ರಕ್ಕೆ, ರಂಗಭೂಮಿ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರ.

## ಸಾಧನೆಯ ಹೆಜ್ಜೆ ಗುರುತುಗಳು

| | | |
|---|---|---|
| ಕಾವ್ಯನಾಮ | : | ಎಲ್.ಬಿ.ಕೆ. ಆಲ್ದಾಳ |
| ತಂದೆಯ ಹೆಸರು | : | ಬಂದೇನವಾಜ |
| ತಾಯಿ ಹೆಸರು | : | ಶ್ರೀಮತಿ ಹುಸೇನಬಿ |
| ಪೂರ್ಣ ವಿಳಾಸ | : | ಲಾಲ್ ಮಹ್ಮದ ಬಂದೇನವಾಜ<br>ಸಾ. ಮಳ್ಳಿ, ತಾ. ಜೇವರಗಿ, ಜಿಲ್ಲೆ ಕಲಬುರಗಿ |
| ಜನ್ಮ ದಿನಾಂಕ | : | ೦೫-೧೧-೧೯೩೮ |
| ಜನ್ಮ ಸ್ಥಳ | : | ಬನ್ನಿಹಟ್ಟಿ (ಪಿ.ಟಿ.) ತಾ. ಸಿಂಧಗಿ, ಜಿ. ಬಿಜಾಪೂರ |
| ವಿದ್ಯಾಭ್ಯಾಸ | : | ೭ನೇ ತರಗತಿ |
| ಉದ್ಯೋಗ | : | ರಂಗ ನಾಟಕ ರಚನೆ ಹಾಗೂ ರಂಗ ನಿರ್ದೇಶನ |
| ಬರೆಯಲು ಪ್ರಾರಂಭ | : | ೧೯೬೨ |

## ಹುದ್ದೆ

ಕರ್ನಾಟಕ ನಾಟಕ ಆಕಾಡೆಮಿ ಸದಸ್ಯರು ಬೆಂಗಳೂರು.

ಕಲಬುರಗಿ ಆಕಾಶವಾಣಿ ಧ್ವನಿ ಪರೀಕ್ಷೆ ಸದಸ್ಯರು ಕಲಬುರಗಿ.

**ಗೌರವಾಧ್ಯಕ್ಷರು :** ಸಂಗೀತ ಕಲಾವಿದರ ಸಂಘ ಜೇವರಗಿ.

## ಸರಕಾರದ ಪ್ರಶಸ್ತಿಗಳು

| | | |
|---|---|---|
| ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರ | : | ೨೦೦೧ |
| ಕರ್ನಾಟಕ ನಾಟಕ ಆಕಾಡೆಮಿ ಪುರಸ್ಕಾರ | : | ೨೦೧೨ |
| ಗುಬ್ಬಿ ವೀರಣ್ಣ ಪ್ರಶಸ್ತಿ | : | ೨೦೧೩ |

## ಅಧ್ಯಕ್ಷತೆ

* ತತ್ವ ಪದಕಾರರ ಸಾಹಿತ್ಯ ಸಮ್ಮೇಳನ ರಾಂಪೂರ ತಾ. ಜೇವರಗಿ ಜಿ. ಕಲಬುರಗಿ, ದಿನಾಂಕ : ೨-೨-೨೦೦೨
* ಜೇವರಗಿ ತಾಲೂಕಿನ ಎರಡನೇ ಸಾಹಿತ್ಯ ಸಮ್ಮೇಳನ ೩೧-೧೨-೨೦೧೧
* ಕಲಬುರ್ಗಿ ಜಿಲ್ಲಾ ೧೩ನೇ ಕನ್ನಡ ಸಾಹಿತ್ಯ ಸಮ್ಮೇಳನ ಜೂನ್ ೧೫, ೧೬, ೨೦೧೩

## ಪ್ರಕಟಿತ ಪುಸ್ತಕಗಳು

೧. ಪತಿಭಕ್ತಿ – ಶರಣ ಪ್ರಕಾಶನ ಕಲಬುರಗಿ ೧೯೬೪
೨. ಕಲಿಯುಗದ ಕನ್ಯೆ – ಎ.ಎಂ.ಕರಡಿ ಹುಬ್ಬಳ್ಳಿ ೧೯೬೭
೩. ನಮಸ್ಕಾರ – ಎಂ.ವ್ಹಿ. ಅರಳಿ ಗದಗ ೧೯೬೮
೪. ಬಾಳಿಗೊಂದು ಬೆಲೆ ಬೇಕು – ಶರಣ ಪ್ರಕಾಶನ ಕಲಬುರಗಿ ೧೯೭೦
೫. ನನ್ನ ದೇವರು – ಎಂ.ವ್ಹಿ.ಅರಳಿ ಗದಗ ೧೯೭೦
೬. ಕಣ್ಣಿಟ್ಟ ಕೈ ಕೊಟ್ಟ – ಕಾರ್ತಿಕೇಯ ಪ್ರಕಾಶನ ಕಲಬುರಗಿ ೧೯೭೨
೭. ಜಮಖಂಡಿಯ ಅಯ್ಯಣ್ಣ ಮುತ್ಯಾ – ಕೊಡಮನಳ್ಳಿ ೨೦೧೩
೮. ಭರತನೂರಿನ ಗುರುನಂಜೇಶ್ವರ ಮಹಾತ್ಮೆ – ರೆಡ್ಡಿ ಬಿಳವಾರ
೯. ಋಣ ಮುಟ್ಟಿತು ಛಲ ತೀರಿತು – ಕೆ. ಮಳಗಿ ಪಾಟೀಲ ಪ್ರಕಾಶನ ೨೦೧೩
೧೦. ಕಡಕೋಳ ಮಡಿವಾಳೇಶ್ವರರು – ಕಾರ್ತಿಕೇಯ ಪ್ರಕಾಶನ ಕಲಬುರಗಿ ೧೯೭೨
೧೧. ಶ್ರೀ ವಿಶ್ವಾರಾಧ್ಯ ಮಹಾತ್ಮೆ – ಅಬ್ಬೆತುಮಕೂರ ಪ್ರಕಾಶನ ೧೯೮೪
೧೨. ಗರತಿ ವಿಶ್ವದ ಜ್ಯೋತಿ – ಪರಾಶಕ್ತಿ ಆಶ್ರಮ ಸೈದಾಪೂರ ೧೯೮೭
೧೩. ಮೂರು ಮುತ್ತುಗಳು – ಹಂಗನಳ್ಳಿ ಪ್ರಕಾಶನ ೧೯೮೭
೧೪. ಶಹಾಪೂರ ಮಹಾತ್ಮಾ ಚರಬಸವೇಶ್ವರರು – ಚರಬಸವೇಶ್ವರ ಪ್ರಕಾಶನ ೨೦೦೧
೧೫. ಜೇವರಗಿ ಜ್ಯೋತಿ ಷಣ್ಮುಖ ಶಿವಯೋಗಿಗಳು – ಜೇವರಗಿ ಪ್ರಕಾಶನ ೨೦೧೧
೧೬. ಅಳ್ಳಳ್ಳಿ ಅಯ್ಯಪ್ಪಯ್ಯಾ ಮಹಾತ್ಮೆ – ಅಳ್ಳಳ್ಳಿ ಪ್ರಕಾಶನ ೨೦೦೭
೧೭. ಹಾರಕೂಡದ ಚನ್ನಬಸವ ಶಿವಯೋಗಿಗಳು – ಹಾರಕೂಡ ಪ್ರಕಾಶನ ೨೦೦೯

## ವಚನ ಗ್ರಂಥ

೧೯. ವಚನ ವಾಹಿನಿ – ತಪೋವನ ಮಠ ಪ್ರಕಾಶನ ೨೦೦೮

## ಜನಪದ

೨೦. ಜನಪದ ಜೇನು – ತಪೋವನ ಮಠ ಪ್ರಕಾಶನ ೨೦೦೯

## ಪ್ರವಾಸ ಲೇಖನ

೨೧. ಕಾಶಿ ಪ್ರವಾಸ – ತಪೋವನ ಮಠ ಪ್ರಕಾಶನ ೨೦೦೯

## ಪ್ರಕಟಿತ ಚರಿತ್ರೆಗಳು

೨೨. ಕಲ್ಕಂಬದ ಕಿರಣ – ಕರಿಘೂಳೇಶ್ವರ ಪ್ರಕಾಶನ ಕಲ್ಕಂಬ ೧೯೮೯
೨೩. ಕಮರಿ ಮಠದ ಕರ್ಪೂರ – ಕಮರಿ ಮಠ ಪ್ರಕಾಶನ ಕಲಬುರಗಿ ೨೦೦೦
೨೪. ಜೋಗೂರ ಜ್ಯೋತಿ – ಗಂಗಾ ಪ್ರಕಾಶನ ಜೋಗುರ ೧೯೯೮
೨೫. ಪರಿಚಯ ಪ್ರಭಾ – ಪರಾಶಕ್ತಿ ಆಶ್ರಮ ಸೈದಾಪೂರ ೧೯೮೫
೨೬. ಶರಣ ಸಿಂಚನ – ನೀಲಕಂಠೇಶ್ವರ ಪ್ರಕಾಶನ ಸೇಡಂ ೧೯೮೫
೨೭. ಬಡದಾಳ ಭಗವಂತ – ಚನ್ನಮಲ್ಲೇಶ್ವರ ಪ್ರಕಾಶನ ಬಡದಾಳ ೨೦೦೨
೨೮. ಹೊನ್ನಳ್ಳಿ ಹೊಂಗಿರಣ – ಹೊನ್ನಳ್ಳಿ ಪ್ರಕಾಶನ ೨೦೦೫
೨೯. ತವನಿಧಿ – ಮಳಖೇಡ ಪ್ರಕಾಶನ ೨೦೦೭
೩೦. ಕೋಳಕೂರ ಸಿದ್ಧಬಸವೇಶ್ವರರ ಚರಿತ್ರೆ – ಅಣಿಗಿರಿ ಪ್ರಕಾಶನ ೨೦೦೭
೩೧. ಧರೆಯಿಂದ ಗಿರಿಗೆ – ಹೊನ್ನಳ್ಳಿ ಪ್ರಕಾಶನ ಬಿಜಾಪೂರ ೨೦೧೦
೩೨. ತಪೋವನಮಠ ದರ್ಶನ – ತಪೋವನಮಠ ಪ್ರಕಾಶನ ೨೦೧೦

## ಪ್ರಕಟಿತ ತತ್ವಗೀತೆಗಳ ಸಂಕಲನ

೩೩. ಕೈವಲ್ಯ ಜ್ಞಾನಮೃತ – ಪರಾಶಕ್ತಿ ಆಶ್ರಮ ಸೈದಾಪೂರ ೧೯೮೬
೩೪. ಶರಣ ಕಿರಣ – ವಿಶ್ವಾರಾಧ್ಯ ಆಶ್ರಮ ಯಡ್ರಾಮಿ ೧೯೮೮
೩೫. ವಿಶ್ವಜ್ಯೋತಿ – ಸೋಮ ಸಾಕ್ಷಾತ್ಕಾರ ಪ್ರಕಾಶನ ಶಹಾಬಾದ ೧೯೮೫

## ಪ್ರಕಟಿತ ನಾಮಾವಳಿಗಳು

೩೬. ಶ್ರೀನಿವಾಸ ಸರಡಗಿ ಚಿಕ್ಕ ವೀರೇಶ್ವರ ಅಷ್ಟೋತ್ತರ ಶತನಾಮಾವಳಿ ೨೦೦೬
೩೭. ಇಟಗಿ (ಕೆ.) ಸಾಧು ಶಿವಲಿಂಗೇಶ್ವರ ಅಷ್ಟೋತ್ತರ ಶತನಾಮಾವಳಿ ೨೦೦೬

೩೮. ಕೋಳಕೂರ ಶ್ರೀ ಸಿದ್ದಬಸವೇಶ್ವರ ಅಷ್ಟೋತ್ತರ ಶತನಾಮಾವಳಿ ೨೦೦೬
೩೯. ಅಳ್ಳಳ್ಳಿ ಅಯ್ಯಪ್ಪಯ್ಯ ಅಷ್ಟೋತ್ತರ ಶತನಾಮಾವಳಿ ೨೦೦೮

## ಪ್ರಕಟಿತ ಪುರಾಣ ಗ್ರಂಥ

೪೦. ಅನುಭವಿ ಕವಿ ಕಡಕೋಳ ಮಡಿವಾಳೇಶ್ವರ ೨೦೦೯
೪೧. ಸುಕ್ಷೇತ್ರ ಪಾಳಾ ಶ್ರೀ ಮಳೇಂದ್ರ ಶಿವಾಚಾರ್ಯರ ಲೀಲಾ ವಿಳಾಸ ೨೦೦೮

## ಪ್ರಕಟಿತ ಭಕ್ತಿಯ ಧ್ವನಿ ಸುರಳಿ

೪೨. ವಿಶ್ವ ಚೇತನ ವಿಶ್ವಾರಾಧ್ಯ ೧೯೯೧
೪೩. ಹಯ್ಯಾಳಲಿಂಗೇಶ್ವರ ೧೯೯೨
೪೪. ಬೆಟ್ಟದ ಪರಮಾನಂದೇಶ್ವರ ೧೯೯೮
೪೫. ವಿಶ್ವರೂಪ ವಿಶ್ವಾರಾಧ್ಯ ೧೯೯೮
೪೬. ಕಮರಿ ಮಠದ ಸಿದ್ದಮ್ಮ ತಾಯಿ ೧೯೯೮
೪೭. ಭಾವೈಕ್ಯದ ಬೆಳಗು ೧೯೯೮
೪೮. ಅಳ್ಳಳ್ಳಿ ಅಯ್ಯಪ್ಪಯ್ಯ ನಾಟಕದ ಗೀತೆಗಳು ೧೯೯೮
೪೯. ಇಟಗಿ ಸಾಧು ಶಿವಲಿಂಗೇಶ್ವರ ೨೦೦೨
೫೦. ತ್ರಿಮೂರ್ತಿಗಳ ತತ್ವ ದರ್ಶನ ೨೦೦೧

## ಅಪ್ರಕಟಿತ ನಾಟಕಗಳು

೫೧. ಮುಗಳಖೋಡ ಮುತ್ತು
೫೨. ನಮ್ಮೂರ ಹಿಂಗ್ಯಾಕಾಯ್ತು
೫೩. ಮುದನೂರ ದೇವರ ದಾಸಿಮಯ್ಯ
೫೪. ಮಾನವಂತರ ಮಕ್ಕಳು
೫೫. ಶಾಕಾಪೂರ ಸಿದ್ಧರಾಮ ಶಿವಯೋಗಿ
೫೬. ಕೋಳೂರು ಕೊಡಗೂಸು
೫೭. ಹಂಗನಳ್ಳಿ ಗುರುಲಿಂಗಪ್ಪ ಶರಣರು
೫೮. ಬೀಳೂರ ಗುರುಬಸವ ದೇವರು
೫೯. ನಿಜ ಶರಣ ಅಂಬಿಗರ ಚೌಡಯ್ಯ
೬೦. ಯಾನಾಗುಂದಿ ಮಾತಾ ಮಾಣಿಕೇಶ್ವರಿ

೬೧. ತಿಂಥಣಿ ಮೌನೇಶ್ವರ ಮಹಾತ್ಮೆ
೬೨. ಹುಲಿಜಂತಿ ಮಾಳಿಂಗರಾಯ ಮಹಾತ್ಮೆ
೬೩. ಗಾಜರ್ ಕೋಟ ಚನ್ನಪ್ಪಯ್ಯ ಶರಣರು
೬೪. ಗುಡ್ಡಾಪೂರ ದಾನಮ್ಮದೇವಿ ಮಹಾತ್ಮೆ
೬೫. ಭಾವೈಕ್ಯದ ಹರಿಕಾರ ಮೋಟನಳ್ಳಿ ಹಸನ್‌ಸಾಬ
೬೬. ಶಿರಸಿ ಮಾರಿಕಾಂಬೆ ಮಹಾತ್ಮೆ
೬೭. ರಸ್ತಾಪೂರ ಶರಭಲಿಂಗೇಶ್ವರ ಮಹಾತ್ಮೆ
೬೮. ಅಳ್ಳಳ್ಳಿ ಭಾಗಮ್ಮಾಯಿ ಮಹಾತ್ಮೆ
೬೯. ತುಳಜಾಪೂರ ಅಂಬಾ ಭವಾನಿ ಮಹಾತ್ಮೆ
೭೦. ಇಟಗಿ ಸಾಧು ಶಿವಲಿಂಗೇಶ್ವರ ಮಹಾತ್ಮೆ
೭೧. ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ
೭೨. ನಾಲವಾರ ಕೋರಿಸಿದ್ಧೇಶ್ವರ ಮಹಾತ್ಮೆ
೭೩. ಹೆಡಗಿಮುದ್ರಿ ಶಾಂತಲಿಂಗೇಶ್ವರ ಮಹಾತ್ಮೆ
೭೪. ಯನಗುಂಟಿ ಬೆಂಕಿ ತಾತಾ
೭೫. ವರಹಳ್ಳೇರಾಯ ವಡಗೇರಿಗೆ ಬಂದಾ
೭೬. ಕೋಳಕೂರ ಸಿದ್ಧಬಸವೇಶ್ವರ ನಾಟಕ
೭೭. ಋಣ ಮುಟ್ಟಿತು ಛಲ ತೀರಿತು
೭೮. ಭರತನೂರ ಗುರುನಂಜೇಶ್ವರ ಮಹಾತ್ಮೆ
೭೯. ಚಿಕೇನ ಕೊಪ್ಪದ ಚನ್ನವೀರ ಶರಣರು

## ಅಪ್ರಕಟಿತ ಪುರಾಣಗಳು

೬೫. ಸುಕ್ಷೇತ್ರ ಕುಮಸಗಿ ಶ್ರೀ ವೆಂಕಟೇಶ್ವರ ಲೀಲಾ ವಿಲಾಸ
೬೬. ಸುಕ್ಷೇತ್ರ ಮಳಲಿ ಶ್ರೀ ಸಿದ್ಧಲಿಂಗೇಶ್ವರ ವಿಜಯ
೬೭. ಸುಕ್ಷೇತ್ರ ಪಾಳಾ ಶ್ರೀ ಮಳೇಂದ್ರ ಶಿವಾಚಾರ್ಯರ ಲೀಲಾ ವಿಲಾಸ
೬೮. ಅವಧೂತ ಕಲ್ಲಾಲಿಂಗೇಶ್ವರ ಮಹಿಮೆ ಸುಕ್ಷೇತ್ರ ಗೌರ

## ಅಪ್ರಕಟಿತ ಚರಿತ್ರೆಗಳು

ಹಂಗಿಲ್ಲದ ಜಂಗಮ
ಕಾಯಕದಿಂದೇನು ಫಲ?
ಮಳ್ಳಿಯ ಮಲ್ಲಿಗೆ
ಕಮರಿ ಮಠದ ಕರ್ಪೂರ
ಜನಪದ ಜಂಗಮ

## ಸನ್ಮಾನಗಳು

| | | |
|---|---|---|
| ಶ್ರೀ ಮಹಾಂತೇಶ್ವರ ಮಠ ಚಿನ್ನಯಗಿರಿ | : | ೧೯೮೧ |
| ಶ್ರೀ ಷಣ್ಮುಖ ಶಿವಯೋಗಿ ಮಠ ಜೇವರಗಿ | : | ೧೯೮೫ |
| ಉದಯೋನ್ಮುಖ ಯುವ ಬರಹಗಾರರ ಬಳಗ ಕಲಬುರಗಿ | : | ೧೯೮೭ |
| ಗಣರಾಜ್ಯೋತ್ಸವ ಸಮಿತಿ ಕಲಬುರಗಿ | : | ೧೯೯೪ |
| ಕುಣಿಗಲ್ ನಾಟಕೋತ್ಸವ ತುಮಕೂರ | : | ೧೯೯೮ |
| ಹಾರಕೂಡ ಚನ್ನಬಸವೇಶ್ವರ ಮಠ | : | ೧೯೯೮ |
| ಮಹಾತ್ಮಾ ಪೀಠ ಅಳ್ಳಳ್ಳಿ | : | ೧೯೯೮ |
| ಜೋಗೂರ ಹಿರೇಮಠ ಕಲಬುರಗಿ | : | ೧೯೯೮ |
| ೧೯ನೇ ಶರಣ ಸಮ್ಮೇಳನ ಸೇಡಂ | : | ೧೯೯೯ |
| ಜಾಗೃತಿ ಜಾಥಾ ಸೇಡಂ | : | ೨೦೦೭ |
| ಪಂಡಿತ ಪುಟ್ಟರಾಜ ಗವಾಯಿಗಳು ವಿಜಾಪೂರ | : | ೨೦೧೨ |

## ಅಭಿನಂದನ ಗ್ರಂಥಗಳಲ್ಲಿ ಲೇಖನಗಳು

| | | |
|---|---|---|
| ೧. | ಜ್ಞಾನದೇಗುಲ | ಪುಟ್ಟರಾಜ ಗವಾಯಿಗಳು ಗದಗ |
| ೨. | ಸಿದ್ಧಪ್ರಭೆ | ನಾಲವಾರ |
| ೩. | ವಿಶ್ವಚೇತನ | ಅಬ್ಬೇ ತುಮಕೂರ |
| ೪. | ಗಂಗಾಧರ ಉಪ್ಪಿನ | ಆಲಮೇಲ |
| ೫. | ಸಾಹಿತ್ಯ ಸಂಪದ | ಕಲಬುರಗಿ |
| ೬. | ನುಡಿದಾವ ಗೆಜ್ಜೆಗಳು | ಜೇವರಗಿ |
| ೭. | ರಂಗಾಂತರಂಗ | ಕಲಬುರಗಿ |
| ೮. | ಕನ್ನಡ ದಿಪ್ತಿ | ಶ್ರೀನಿವಾಸ ಸರಡಗಿ |
| ೯. | ವಿಶ್ವನಾಥ ರೆಡ್ಡಿ ಮುದ್ನಾಳ | ಯಾದಗಿರಿ |
| ೧೦. | ಬಿ. ಮಹಾದೇವಪ್ಪ | ಕಲಬುರಗಿ |
| ೧೧. | ಧವಳ | ಗೋಗಿ |
| ೧೨. | ಚಂದ್ರಗಂಗಾ | ರುಕ್ಮಾಪೂರ |

## ವೃತ್ತಿರಂಗ ಕಂಪನಿಗಳಲ್ಲಿ ನಿರ್ದೇಶನ

| | | |
|---|---|---|
| ೧. | ರಾಘವೇಂದ್ರ ನಾಟ್ಯ ಸಂಘ | ಚಿಕ್ಕೊಪ್ಪಾ (ಬೈಲಹೊಂಗಲ) |
| ೨. | ಬಸವೇಶ್ವರ ನಾಟ್ಯ ಸಂಘ | ಬೆನಕಟ್ಟಿ |
| ೩. | ರಾಘವೇಂದ್ರ ನಾಟ್ಯ ಸಂಘ | ಶಿರಸಿ |

| | | |
|---|---|---|
| ೪. | ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ | ಸುಳ್ಯ |
| ೫. | ಕರ್ನಾಟಕ ಕಲಾ ನಾಟ್ಯ ಸಂಘ | ಯಂಕಂಚಿ |
| ೬. | ಸ್ವಯಂ ಜ್ಯೋತಿ ನಾಟ್ಯ ಸಂಘ | ಜೇವರಗಿ |
| ೭. | ೧೦೦೮ ರೇಣುಕಾಚಾರ್ಯ ನಾಟ್ಯ ಸಂಘ | ಮ್ಯೆಂದರಗಿ |
| ೮. | ಚರಬಸವೇಶ್ವರ ನಾಟ್ಯ ಸಂಘ | ಶಹಾಪೂರ |
| ೯. | ನಾಗೇಂದ್ರ ನಾಟ್ಯ ಸಂಘ | ಅಳ್ಳಳ್ಳಿ |
| ೧೦. | ಶ್ರೀದೇವಿ ನಾಟ್ಯ ಸಂಘ | ಚಿತ್ರದುರ್ಗ |
| ೧೧. | ಶ್ರೀ ವಿಶ್ವಾರಾಧ್ಯ ನಾಟ್ಯ ಸಂಘ | ಜೇವರಗಿ |
| ೧೨. | ಶ್ರೀ ಗುರು ಕುಮಾರೇಶ್ವರ ನಾಟ್ಯ ಸಂಘ | ಹಾನಗಲ್ |

## ಪ್ರಶಸ್ತಿಗಳು

೧. ನಾಟ್ಯಕವಿರತ್ನ – ಶ್ರೀ ಮಹಾಂತೇಶ್ವರ ಮಠ ಚಿನ್ನಯಗಿರಿ, ೧೯೮೧
೨. ಸರಸ್ವತಿ ವರಪುತ್ರ – ಶ್ರೀ ಷಣ್ಮುಖಿ ಶಿವಯೋಗಿ ಮಠ ಜೇವರಗಿ, ೧೯೮೫
೩. ಶರಣ ಸಾಹಿತ್ಯ ಸಿಂಧು – ಶ್ರೀ ಮಹಾತ್ಮಾ ಪೀಠ ಅಳ್ಳಳ್ಳಿ, ೧೯೯೭
೪. ಶರಣ ಸಾಹಿತಿ – ಶ್ರೀ ಕುಣಿಗಲ್ ನಾಟಕೋತ್ಸವ ಕ.ಸ. ಇಲಾಖೆ, ಬೆಂಗಳೂರು, ೧೯೯೮
೫. ಶಿಕ್ಷಕ ಬಂಧು – ಶ್ರೀ ಹೈದ್ರಾಬಾದ ಕರ್ನಾಟಕ ಬಳಗ ಶಹಾಪೂರ, ೨೦೦೧
೬. ಸಗರ ಸಾಹಿತ್ಯ – ಶ್ರೀ ಫಕೀರೇಶ್ವರ ಮಠ ಶಹಾಪೂರ, ೨೦೦೧
೭. ವೀರಶೈವ ಸಾಹಿತ್ಯರತ್ನ – ಶ್ರೀ ಚನ್ನಮಲ್ಲೇಶ್ವರ ಕುಕನೂರ, ೨೦೦೬
೮. ಸಗರ ಸಿರಿ – ಶ್ರೀ ಚೆರಬಸವೇಶ್ವರ ಗದ್ದುಗೆ ಶಹಾಪೂರ, ೨೦೦೩
೯. ಶರಣ ಸಾಹಿತ್ಯ ಸಿರಿ – ಶ್ರೀ ಪರಮಾನಂದೇಶ್ವರ ನಾಟ್ಯಸಂಘ ಯಡ್ಡಳ್ಳಿ, ೨೦೦೭
೧೦. ಶರಣ ಸಾಹಿತ್ಯ ರತ್ನ – ಶ್ರೀ ಪುಟ್ಟರಾಜ ಗವಾಯಿಗಳ ಪುರಸ್ಕಾರ ಸಮಿತಿ, ಬಿ. ಗುಡಿ, ೨೦೦೭
೧೧. ಕವಿ ಕಿರಣ – ಶ್ರೀ ಅಣಿಗಿರಿ ಪುಣ್ಯಕ್ಷೇತ್ರ, ೨೦೦೭
೧೨. ನಾಟ್ಯ ಕಲಾರತ್ನ – ಶ್ರೀ ತಪೋವನ ಮಠ ಶಾಕಾಪೂರ, ೨೦೦೫
೧೩. ಸಾಹಿತ್ಯ ಕಲಾಭೂಷಣ – ಶ್ರೀಮದ್ ಕಾಶಿ ಸಿಂಹಾಸನದಿಂದ, ೨೦೦೭ ಜಂಗಮವಾಡಿ ಮಠ ಕಾಶಿ
೧೪. ಕಾಯಕ ಸನ್ಮಾನ ಪ್ರಶಸ್ತಿ – ಉದಯೋನ್ಮುಖ ಯುವ ಬರಹಗಾರರ, ಬಳಗ, ಕಲಬುರಗಿ, ೨೦೦೮
೧೫. ಸಗರನಾಡು ಸೇವಾರತ್ನ ಪ್ರಶಸ್ತಿ – ಸುರಪುರದಿಂದ
೧೬. ದೇವರ ದಾಸಿಮಯ್ಯ – ಮುದನೂರದಿಂದ ಸಹಸ್ರಮಾನೋತ್ಸವ ಪ್ರಶಸ್ತಿ
೧೭. ಎಸ್.ಪಿ. ವರದರಾಜರವರ ಪ್ರಶಸ್ತಿ– ಚಲನಚಿತ್ರ ಆತ್ಮಿಯ ಬಳಗ, ಬೆಂಗಳೂರು, ೨೦೧೧

೧೮. ಸಗರ ನಾಡಿನ ಸಾರಸ್ವತ ಪುತ್ರ – ಭರತನೂರ ಮಠದಿಂದ, ೨೧೧೨
೧೯. ಬಸವಶ್ರೀ ಪ್ರಶಸ್ತಿ – ಮಳಗಿ (ಕೆ.) ಚಿತ್ತಾಪೂರ, ೨೦೧೨
೨೦. ಚನ್ನರೇಣುಕ ಬಸವಶ್ರೀ – ಹಾರಕೂಡ ಸಂಸ್ಥಾನ ಹಿರೇಮಠದಿಂದ, ೨೦೧೩
೨೧. ರಂಗ ತೋರಣ – ಬಳ್ಳಾರಿ, ೨೦೧೩
೨೨. ಗುರುವಂದನ – ಬಾದಾಮಿ ವಿಶ್ವಕರ್ಮ ಸಂಸ್ಥೆ, ೨೦೧೩

**ರಂಗ ಸಂತ ಜಂಗಮ**

ಜೇವರಗಿಯ ಸಾಹಿತ್ಯಾಭಿಮಾನಗಳಿಂದ ಅಭಿನಂದನಾ ಗ್ರಂಥ ಸಮರ್ಪಣೆ ೨೦೧೧

**ಕೈವಲ್ಯಜ್ಞಾನಾಮೃತ**

ಕಲಬುರಗಿ ಜಿಲ್ಲೆಯ ತತ್ವ ಪದಕಾರರ ಸ್ಮಾರಕಗಳಲ್ಲಿ ಸೇರ್ಪಡೆ

**ಪತಿಭಕ್ತಿ**

ಹೈದ್ರಾಬಾದ ಕರ್ನಾಟಕ ನಾಟಕ ಸಂಪುಟದಲ್ಲಿ ಸೇರ್ಪಡೆ

**ಎಂ.ಫಿಲ್**

ಅಫಜಲಪೂರ ತಾಲೂಕಿನ ಸಿದ್ದಣ್ಣ ಚಿಂಚೋಳಿ, ಸುರಪುರ ತಾಲೂಕಿನ ದೇವಿಂದ್ರಪ್ಪ ಆಲ್ದಾಳ

**ಪಿ.ಹೆಚ್.ಡಿ**

ಶ್ರೀಮತಿ ಕಿರಣಾ ಜಮದರಖಾನಿ ಸುರಪುರ

**ನಮಸ್ಕಾರ**

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಗೆ ನಾಟಕ ಪಠ್ಯ ಪುಸ್ತಕವಾಗಿದೆ

**ಬೆಳಗು ಕಾರ್ಯಕ್ರಮ**

ದೂರದರ್ಶನ ಬೆಂಗಳೂರು ಚಂದನದಲ್ಲಿ ನೇರ ಪ್ರಸಾರ

**ನಮ್ಮವರು**

ದೂರದರ್ಶನ ಕಲಬುರಗಿ ಕಾರ್ಯಕ್ರಮದಲ್ಲಿ ಪ್ರಸಾರ

ಸಂಪಾದನೆ

**ಅವ್ಯಕ್ತ ಬೋಧಾಮೃತ ಗ್ರಂಥ**

## ಹವ್ಯಾಸಿ ನಾಟಕಗಳಲ್ಲಿ ಪಾತ್ರ ವಹಿಸಿದ್ದು

| | | |
|---|---|---|
| ಕನಕಾಂಗಿ (ಬೈಲಾಟ) | : | ಶ್ರೀ ಕೃಷ್ಣ |
| ಜೀವನ ಸಂಸಾರ | : | ಜೀವನ ಹೆಂಡತಿ |
| ಸತ್ಯ ಹರಿಶ್ಚಂದ್ರ | : | ತಾರಾಮತಿ |
| ಬಾಲಚಂದ್ರ | : | ರಾಣಿ |
| ಬಂಧು ದ್ರೋಹ | : | ಮೋಹನ |
| ಚಿತ್ರಾಂಗದ | : | ಉಲುಪಿ |
| ಮಾತಂಗ ಕನ್ಯ | : | ಧ್ಯಮನಾ |
| ಶರಣಬಸವೇಶ್ವರ | : | ಶಿವ–ಶಿವಯ್ಯ |

## ವೃತ್ತಿ ನಾಟಕ ಸಂಘಗಳಲ್ಲಿ ಪಾತ್ರ ಹಾಗೂ ನಿರ್ದೇಶನ

* **ವಿಜಯ ಮಹಾಂತೇಶ್ವರ ನಾಟ್ಯ ಸಂಘ, ಇಲಕಲ್:** ಕೊಂಡು ತಂದ ಗಂಡ ನಾಟಕದಲ್ಲಿ ಲಕ್ಷ್ಮಯ್ಯನ ಪಾತ್ರ
* **ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ, ಸುಳ್ಯ:** ಶರಣಬಸವೇಶ್ವರ ನಾಟಕದಲ್ಲಿ ದೊಡ್ಡಪ್ಪ ಗೌಡನ ಪಾತ್ರ
* **ಶ್ರೀ ವಿಶ್ವಾರಾಧ್ಯ ನಾಟ್ಯ ಸಂಘ, ಜೇವರ್ಗಿ:** ಕುರುಡು, ಸಕ್ರೆಪ್ಪಗೌಡ, ಗೊಲ್ಲಾಳಪ್ಪ ಗೌಡ, ಕುಲಕರ್ಣಿ ಅಡವಿತಾತ, ದಿವಾನ ರಾಮಪ್ಪ
* **ಸ್ವಯಂ ಜ್ಯೋತಿ ನಾಟ್ಯ ಸಂಘ, ಜೇವರ್ಗಿ:** ಷಣ್ಮುಖ ಶಿವಯೋಗಿ ನಾಟಕದಲ್ಲಿ ಮಲ್ಲಶೆಟ್ಟಿ ಗೌಡನ ಪಾತ್ರ
* **ಬಸವೇಶ್ವರ ನಾಟ್ಯ ಸಂಘ, ಬೆನಕಟ್ಟಿ:** ಸಿಂಧೂರ ಲಕ್ಷ್ಮಣ ನಾಟಕದಲ್ಲಿ ಪೋಲಿಸ್ ಪಾತ್ರ, ಸಂಗಯ್ಯ ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ವಿರುಪಾಕ್ಷ ಪಾತ್ರ
* **ಕರ್ನಾಟಕ ಕಲಾ ಸಂಘ, ಯಂಕಂಚಿ:** ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ಸಂಗಯ್ಯ ವಿರುಪಾಕ್ಷಯ್ಯ, ಶರಣಬಸವನ ಪಾತ್ರ ಸಿಂಧೂರ ಲಕ್ಷ್ಮಣ ನಾಟಕದಲ್ಲಿ ವೆಂಕಟಪ್ಪ ನಾಯಕ
* **ರಾಘವೇಂದ್ರ ನಾಟ್ಯ ಸಂಘ, ಚಿಕ್ಕೊಪ್ಪ ಬೈಲಹೊಂಗಲ:** ಸಿಂಧೂರ ಲಕ್ಷ್ಮಣ ನಾಟಕದಲ್ಲಿ ವೆಂಕಟಪ್ಪ ಪಾತ್ರ, ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ಮಲ್ಲಪ್ಪಗೌಡನ ಪಾತ್ರ
* **ರಾಘವೇಂದ್ರ ನಾಟ್ಯ ಸಂಘ, ಶಿರಸಿ:** ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ಮಲ್ಲಪ್ಪಗೌಡನ ಪಾತ್ರ
* **೧೦೦೮ ರೇಣುಕಾಚಾರ್ಯ ನಾಟ್ಯ ಸಂಘ, ಮೈಂದರಗಿ:** ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ಮಲ್ಲಪ್ಪಗೌಡನ ಪಾತ್ರ ಹಾಗೂ ವಿವಿಧ ಪಾತ್ರಗಳು
* **ನಾಗೇಂದ್ರ ನಾಟ್ಯ ಸಂಘ, ಅಳ್ನೊಳ್ಳಿ:** ಅಯ್ಯಪ್ಪಯ್ಯ ನಾಟಕದಲ್ಲಿ ಪ್ರವಚನಕಾರ, ವಿಶ್ವಬ್ರಾಹ್ಮಣ ಹಾಗೂ ಹಲಕರಟಿಯ ವಿಶ್ವಕರ್ಮ ಪಾತ್ರಗಳು.

# ಚಿತ್ರ ಸಂಪುಟ



ಮಗ ಮೊಹಮ್ಮದ ಶಫಿ ಹಾಗೂ ಮೊಮ್ಮಗ ಮಹಮ್ಮದ ಷರೀಫ್ ಜೊತೆ ಆಲ್ದಾಳರು

ಕಲಬುರಗಿ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಖಮರುಲ್ ಇಸ್ಲಾಂ ಅವರೊಂದಿಗೆ ಜ್ಯೋತಿ ಬೆಳಗಿಸುತ್ತಿರುವುದು





ರಾಜ್ಯೋತ್ಸವ ಪ್ರಶಸ್ತಿ – ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ರಾಣಿ ಸತೀಶ್ ಅವರಿಂದ ಪ್ರದಾನ


ವರದರಾಜ ಪ್ರಶಸ್ತಿ ಸ್ವೀಕಾರ – ಲೋಕನಾಥ್, ಬರಗೂರು ರಾಮಚಂದ್ರಪ್ಪ ಮತ್ತು ಶಿವರಾಜ ಕುಮಾರ್ ಸಮ್ಮುಖದಲ್ಲಿ





ಗುಬ್ಬಿ ವೀರಣ್ಣ ಪ್ರಶಸ್ತಿ ಸ್ವೀಕಾರ – ಡಾ. ಚಂದ್ರಶೇಖರ ಕಂಬಾರ, ಜಿ. ವೆಂಕಟಸುಬ್ಬಯ್ಯ, ಜಿ. ಶ್ಯಾಮಲಾಭಾವೆ ಮತ್ತು ಕ.ಸ.ಇ. ಆಯುಕ್ತರಾದ ಬಸವರಾಜ

ರಂಗ ಸಂತ ಜಂಗಮ – ಅಭಿನಂದನಾ ಗ್ರಂಥ ಸಮರ್ಪಣೆ ಸಮಾರಂಭದಲ್ಲಿ ಸಿದ್ಧೇಶ್ವರ ಸ್ವಾಮೀಜಿ, ಡಾ. ಸಿದ್ಧತೋಟೇಂದ್ರ ಸ್ವಾಮೀಜಿ ಮತ್ತು ಡಾ. ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಅವರೊಂದಿಗೆ





ಜೇವರಗಿ ತಾಲ್ಲೂಕು ಸಾಹಿತ್ಯ ಸಮ್ಮೇಳನದಲ್ಲಿ ಮೆರವಣಿಗೆ

ಸೊನ್ನ ಶ್ರೀಮಠದಲ್ಲಿ ತುಲಾಭಾರ






ಶ್ರೀಮದ್ ಕಾಶಿಪೀಠ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರಿಂದ 'ಸಾಹಿತ್ಯ ಕಲಾಭೂಷಣ' ಪ್ರಶಸ್ತಿ ಪ್ರದಾನ

೨೦೦೧ರಲ್ಲಿ ನಡೆದ ತತ್ವಪದಕಾರರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಲ್ಲಿ





‘ಹಾರಕೂಡ ಚನ್ನಬಸವೇಶ್ವರ ಮಹಾತ್ಮೆ’ ನಾಟಕ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ರಂಜಾನ್ ದರ್ಗಾ, ಡಾ. ಸಂಗಮೇಶ ಸವದತ್ತಿ ಮಠ ಮತ್ತು ಷ.ಬ್ರ. ಚನ್ನವೀರ ಶಿವಾಚಾರ್ಯರೊಂದಿಗೆ



ಶಹಾಪುರದ ವಿಶ್ವಾರಾಧ್ಯ ತಪೋವನ ಮಠದ ಷ.ಬ್ರ. ಸಿದ್ಧರಾಮ ಶಿವಾಚಾರ್ಯ ಅವರೊಂದಿಗೆ ಕಾಶೀಯಾತ್ರೆ – ಜಬಲಪುರದ ತೀರ್ಥಂಕರ ಮಂದಿರದಲ್ಲಿ



ಕಲಬುರಗಿ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ, ಕ.ಸಾ.ಪ. ಜಿಲ್ಲಾಧ್ಯಕ್ಷ ಮಹಿಪಾಲರೆಡ್ಡಿ ಮುನ್ನೂರು ಅವರೊಂದಿಗೆ